ಮಂತ್ರಿಗಳಾಗಿದ್ದೀರಿ ನಮ್ಮ ಊರಿನಲ್ಲಿರುವ ಚಿನ್ನದ ಗಣಿಯನ್ನು ಬಂದು ನೋಡಿ ಎಂದು ಹೇಳುತ್ತಿದ್ದೆ. ಆದರೆ ಅವರು ಯಾವಾಗಲೂ ಸಹ ನಾನು ಬರುತ್ತೇನೆ, ಬರುತ್ತೇನೆಂದು ಹೇಳುತ್ತಿದ್ದರು, ಒಂದು ದಿವಸವೂ ಸಹ ಹೋಗುತ್ತೇನೆಂದು ಹೇಳಿರಲಿಲ್ಲ. ಆದರೆ ಇವತ್ತು ಬೆಳಿಗ್ಗೆ ಬೆಂಗಳೂರಿಗೆ ಬಂದ ತಕ್ಷಣ ಅವರು ತೀರಿ ಹೋದರು ಎಂದು ಹೇಳಿದ ತಕ್ಷಣ ನಿಜವಾಗಿಯೂ ಸಹ ನೋವಾಯಿತು. ಅವರಿಂದ ಒಂದು ಪಾಠ ಏನು ನಾವು ತಿಳಿದುಕೊಳ್ಳಬೇಕು ಎಂದರೆ ಯಾವಾಗಲೂ ನಾವು, ನಾನು-ನಾನು ಎಂದು ಹೇಳಿಕೊಳ್ಳುತ್ತೇವೆ. ಆದರೆ ದೇವರು ನಮಗಿಂತಲೂ ಮುಂದೆ ಇದ್ದಾನೆ ಎಂದು ನಾವು ಡಿಸೈಡ್ ಮಾಡುವುದಿಲ್ಲ. ನಾನು ಡಿಸೈಡ್ ಮಾಡುವುದು, ಡೆತ್ ಯಾವಾಗಲೂ ಸಹ ನಮ್ಮ ಜೊತೆಯಲ್ಲಿಯೇ ಇರುವುದು; ನಾವು ಅದನ್ನು ತಿಳಿದುಕೊಳ್ಳಬೇಕು ಇವತ್ತಿನ ದಿವಸ ಶ್ರೀ ಎಸ್.ಡಿ.ಜಯರಾಂರವರು ಇಲ್ಲ. ಅವರ ಆತ್ಮಕ್ಕೆ ಶಾಂತಿ ದೊರಕಲಿ, ಮತ್ತು ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಬೇಡಿಕೊಳ್ಳುತ್ತೇನೆ. ಇದು ಎಲ್ಲರಿಗೂ ಒಂದು ಪಾಠ ಏನೆಂದರೆ "Death is always with us." ಇವತ್ತು ಇರುವವರು ನಾಳೆ ಇರುವುದಿಲ್ಲ, ನಾಳೆಯ ದಿವಸ ಇರುವವರು ನಾಡಿದ್ದು ಇರುವುದಿಲ್ಲ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಜನರು ಸತ್ತು ಹೋದ ಮೇಲೆ ನಮ್ಮ ಜೊತೆಯಲ್ಲಿ ಇರುವುದಿಲ್ಲವೆಂದು ತಿಳಿದುಕೊಳ್ಳಬಾರದು; ಒಳ್ಳೆಯವರು ಯಾವಾಗಲೂ ಸಹ ನಮ್ಮ ಜೊತೆಯಲ್ಲಿಯೇ ಇರಬೇಕು, ಅವರು ಮಾಡಿರುವಂತಹ ಒಳ್ಳೆಯ ಕೆಲಸ ಯಾವಾಗಲೂ ಸಹ ನಮ್ಮ ಮನಸ್ಸಿನಲ್ಲಿರಬೇಕು. ಸುಮ್ಮನೆ ಪ್ರಾಣ ಇದೆ ಎಂದು ನಮ್ಮ ಜೊತೆಯಲ್ಲಿದ್ದರು ಎನ್ನುವುದಕ್ಕಿಂತಲೂ ಅವರು ಮಾಡಿರುವಂತಹ ಒಳ್ಳೆಯ ಕೆಲಸಗಳು ನಮ್ಮ ಜೊತೆಯಲ್ಲಿವೆ ಎನ್ನುವುದನ್ನು ಶ್ರೀ ಎಸ್.ಡಿ.ಜಯರಾಂರವರು ಒಂದು ಪಾಠದ ರೂಪದಲ್ಲಿ ನಮಗೆ ತೋರಿಸಿದ್ದಾರೆ. ನನಗೆ ಈ ಸಂತಾಪ ಸೂಚಕ ನಿರ್ಣಯ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳು. ಮೃತರಾದ 11 ಜನರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಮ್ಮ ಪಕ್ಷದ ಪರವಾಗಿ ಭಗವಂತನಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಮೃತರ ಗೌರವಾರ್ಥವಾಗಿ ಎಲ್ಲಾ ಮಾನ್ಯ ಸದಸ್ಯರುಗಳು ಒಂದು ನಿಮಿಷ ಕಾಲ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಎಲ್ಲಾ ಮಾನ್ಯ ಸದಸ್ಯರುಗಳು ಮೃತರ ಗೌರವಾರ್ಥವಾಗಿ ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನು ಆಚರಿಸಿದರು)

2) ಪ್ರಸ್ತಾವ: ''ಈ ಸದನವು ಶ್ರೀ ಜೆ.ಹೆಚ್.ಪಟೇಲ್ ಅವರ ನೇತ್ರತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.''

ಅಧ್ಯಕ್ಷರು: ಮಾನ್ಯ ಮುಖ್ಯ ಮಂತ್ರಿಗಳು ಈಗ ಪ್ರಸ್ತಾವವನ್ನು ಮಂಡಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಅನೇಕ ಜ್ವಲಂತವಾದಂತಹ ಸಮಸ್ಯೆಗಳು ಇದ್ದಾಗ ಅಧಿವೇಶನವನ್ನು ಕರೆಯಲಿಲ್ಲ. ಆದರೆ ಈಗ ಅವರ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ವಿಶೇಷವಾದಂತಹ ಅಧಿವೇಶನವನ್ನು ಕರೆದಿದ್ದಾರೆ. ಇದರ ಬದಲು ವಿಧಾನಸಭೆಯ ವಿಸರ್ಜನೆಯನ್ನು ಮಾಡಲಿ.

ಶ್ರೀ ವಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ವಿಧಾನ ಸಭೆ ವಿಸರ್ಜನೆಗೆ ನನ್ನ ವಿರೋಧ.

(ಗೊಂದಲ)

ಅಧ್ಯಕ್ಷರು: ಈ ವಿಶೇಷ ಅಧಿವೇಶನವನ್ನು ನಾವು ಕರೆದ ಮೂಲ ಉದ್ದೇಶ ಏನೆಂದರೆ, ಅವರು ವಿಶ್ವಾಸ ಮತ ಪಡೆಯಬೇಕೆಂದು ಅಪೇಕ್ಷಿಸಿರುವುದು. ಆದರೆ ದುರ್ದೈವ, ಈ ದಿವಸ ಶ್ರೀ ಜಯರಾಂ ಅವರು ನಿಧನರಾದುದರಿಂದ ಮತ್ತು ಬೇರೆ ಕೆಲವು ಸಂತಾಪ ಸೂಚಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದುದರಿಂದ ಅದು ನಮ್ಮ ನಿಗದಿತ ಕೆಲಸಕ್ಕಿಂತ ಮೊದಲೇ ಆ ವಿಚಾರ ಪ್ರಸ್ತಾಪವಾಯಿತು. ಈಗ ಅವರಿಗೆ ಪ್ರಸ್ತಾವ ಮಂಡನೆ ಮಾಡುವುದಕ್ಕೆ ಅವಕಾಶ ಕೊಟ್ಟು, ನಂತರ ತಾವು ಏನು ಹೇಳಬೇಕೆಂದಿದ್ದೀರಿ ಅದನ್ನು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ಇವತ್ತು ನಾವು ಒಂದು ಸಂಪ್ರದಾಯವನ್ನು ಮುರಿಯುತ್ತಿದ್ದೇವೆ. ಶಾಸನಸಭಾ ಸದಸ್ಯರಿದ್ದ ಸಂದರ್ಭದಲ್ಲಿ ಯಾರು ನಿಧನರಾಗುತ್ತಾರೋ, ಅವರು ನಿಧನರಾದ ಸಂದರ್ಭದಲ್ಲಿ, ನಾವು ಯಾವತ್ತೂ ಸಂತಾಪ ಸೂಚನೆಯನ್ನು ಮಂಡಿಸಿದ ಮೇಲೆ ಸದನವನ್ನು ನಡೆಸಿಲ್ಲ; ಸದನವನ್ನು ಮುಂದೂಡತಕ್ಕ ಸಂಪ್ರದಾಯ ಇದುವರೆಗೆ ನಡೆದುಕೊಂಡುಬಂದಿದೆ. ಇವತ್ತು ಆ ಸಂಪ್ರದಾಯವನ್ನು ಏತಕ್ಕಾಗಿ ಮುರಿಯಬೇಕು?

SRI M.MALLIKARJUNA KHARGE: We will meet after one hour. Let him move afterwoards.

ಅಧ್ಯಕ್ಷರು: ತಾವು ಹೇಳತಕ್ಕದ್ದು ನಿಜ. ಅಧಿವೇಶನ ನಡೆಯುತ್ತಿರತಕ್ಕ ಸಂದರ್ಭದಲ್ಲಿ ಆ ರೀತಿ ಆದರೆ ಸದನವನ್ನೂ ಮುಂದೂಡುತ್ತೇವೆ. ಇವತ್ತು ವಿಶೇಷ ಅಧಿವೇಶನವನ್ನು ಕರೆದಿದ್ದೇವೆ; ದುರ್ದೈವ ಸಂಭವವಾಗಿದೆ. ಆದುದರಿಂದ ಅವರಿಗೆ ಸಂತಾಪವನ್ನು ವ್ಯಕ್ತಪಡಿಸಿ ವಿಷಯ ಏನಿದೆ ಅದನ್ನು ಪ್ರಸ್ತಾಪ ಮಾಡುತ್ತಾರೆ. ತಾವು ಏನೆಲ್ಲ ಹೇಳಲು ಅಪೇಕ್ಷೆಪಡುತ್ತಿದ್ದೀರಿ ಅದನ್ನು ಪ್ರಸ್ತಾವನೆ ಮಂಡನೆಯಾದಮೇಲೆ ಹೇಳಬಹುದು; ಹೇಳುವುದಕ್ಕೆ ಎಲ್ಲರಿಗೂ ಅವಕಾಶ ಇದೆ. ಈಗ ಮಾನ್ಯ ಸಭಾನಾಯಕರು ಪ್ರಸ್ತಾವನೆಯನ್ನು ಮಂಡನೆ ಮಾಡುವುದು.

(ಗೊಂದಲ)

SRI KAGODU THIMMAPPA: Sri Jayaram was a Cabinet Minister. Hitherto, the procedure followed, was to adjourn the House after obituary reference.

SRI M.MALLIKARJUNA KHARGE: We are not going away. Anyway, we have come here to face it.

(INTERRUPTIONS)

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ, ''ಈ ಸದನವು ಶ್ರೀ ಜೆ.ಹೆಚ್.ಪಟೇಲ್ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.'' ನಾವು ಇವತ್ತು ಏತಕ್ಕೆ ಸಭೆಯನ್ನು ಕರೆದಿದ್ದೇವೆ ಏನು ಎಂಬುದನ್ನು ನಂತರ ತಿಳಿಸುತ್ತೇನೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಯಡಿಯೂರಪ್ಪನವರಿಗೆ ಎಲ್ಲರಿಗೆ ಹೇಳುತ್ತೇನೆ, ಸ್ವಲ್ಪ ತಡೆದುಕೊಳ್ಳಿ; ವಿಧಾನಸಭೆಯನ್ನು ಕರೆದದ್ದೇ ತಪ್ಪು ಎಂಬ ರೀತಿಯಲ್ಲಿ ಹೇಳುತ್ತಿದ್ದೀರಲ್ಲಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಈ ಸಂದರ್ಭ ಅಲ್ಲವೆಂದು ಹೇಳಿದ್ದು.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಜನರ ಸಭೆಯನ್ನು ಕರೆಯಲಿಲ್ಲ. ನಿಮಗೋಸ್ಕರ ಕರೆದಿದ್ದೀರಿ; ಜನರಿಗೋಸ್ಕರ ಅಲ್ಲ.

(ಗೊಂದಲ)

ಒಬ್ಬ ಸದಸ್ಯರು: ವಿಶ್ವಾಸ ಇಲ್ಲದಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ?

(ಗೊಂದಲ)

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ. ಈಗ ಸಭೆಯನ್ನು ಒಂದು ಗಂಟೆ ಕಾಲ ಮುಂದಕ್ಕೆ ಹಾಕಿದ್ದೇನೆ. ಪುನಃ ಒಂದು ಗಂಟೆಯ ನಂತರ ನಾವು ಸಮಾವೇಶಗೊಳ್ಳುತ್ತೇವೆ. ದಯಮಾಡಿ, ಎಲ್ಲರೂ ಹೇಳಬೇಕಾದುದನ್ನು ನಂತರ ಹೇಳಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ವಿಷಯ ಮಂಡಿಸಿದ ಮೇಲೆ ಏನು?

MR. SPEAKER: You can express that. The Chair will

permit you. ದಯಮಾಡಿ ಸಹಕರಿಸಿ. ಒಂದು ಗಂಟೆಯ ನಂತರ ಸಭೆ ಸಮಾವೇಶಗೊಳ್ಳುತ್ತದೆ. ತಾವು ಏನೆಲ್ಲಾ ಹೇಳಬೇಕೆನ್ನುತ್ತೀರಿ ಅದನ್ನು ಆಗ ಹೇಳಿ. ಸಭೆಯು 12.45ಕ್ಕೆ ಪುನಃ ಸಮಾವೇಶಗೊಳ್ಳುತ್ತದೆ.

(ಸಭೆಯು 11.45ಕ್ಕೆ ಮುಂದೂಡಲ್ಪಟ್ಟು ಪುನಃ 12.45ಕ್ಕೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)

ಸದನವು ಪುನಃ 12 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಪೀಠದಲ್ಲಿದ್ದರು.

ಅಧ್ಯಕ್ಷರು: ತಾವು ಎಕ್ಸ್‌ಪ್ಲೇನ್ ಮಾಡುತ್ತೀರಾ? (ಮಾನ್ಯ ಮುಖ್ಯಮಂತ್ರಿಗಳಿಗೆ)

(ಮಾನ್ಯ ವಿರೋಧಪಕ್ಷದ ನಾಯಕರು ಎದ್ದುನಿಂತರು)

MR. SPEAKER: Do you want to say something.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದಕ್ಕಿಂತ ಮುಂಚೆ ಅವರು ಮೂವ್ ಮಾಡುವಾಗಲೇ....

ಅಧ್ಯಕ್ಷರು: ಈಗ ಮೋಷನ್ ಮೂವ್ ಮಾಡಿದ್ದಾರೆ. Anyway, let us hear you.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಸಂದರ್ಭದಲ್ಲಿ ಅದರ ಅವಶ್ಯಕತೆ ಇರಲಿಲ್ಲ ಎನ್ನತಕ್ಕದ್ದನ್ನು ನಾನು ಪ್ರಸ್ತಾಪ ಮಾಡಿದೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ರಾಜೀನಾಮೆ ಕೊಡಿ ಎಂದು ತಾವೇ ಹೇಳಿದಿರಿ. ಸರ್ಕಾರ ರಾಜೀನಾಮೆ ಕೊಡಬೇಕು ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಸ್ವಲ್ಪ ದಯವಿಟ್ಟು ತಾವು ಏನೇನು ಮಾತನಾಡಿದ್ದೀರಿ ಎನ್ನತಕ್ಕದ್ದನ್ನು ಜ್ಞಾಪಕ ಇಟ್ಟುಕೊಂಡು ಮಾತನಾಡಿ ಎಂಬುದಷ್ಟೇ ತಮ್ಮಲ್ಲಿ ವಿನಂತಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮಲ್ಲಿ ನಿಮ್ಮವರೇ ರಾಜೀನಾಮೆ ಕೊಟ್ಟು ಹೋಗಿ; ಈ ಸರ್ಕಾರಕ್ಕೆ ಮೆಜಾರಿಟಿ ಇಲ್ಲ ಎಂದು ಹೇಳುವಾಗ ನಮ್ಮ ಹೇಳಿಕೆ ಇನ್ನೂ ಬೇಕಾ?

ಶ್ರೀ ಸಿ.ಬೈರೇಗೌಡ: ಅಲ್ಲ, ಜ್ಞಾಪಿಸಿದೆ ಅಷ್ಟೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಯಿತು. ಅದನ್ನು ಹೇಳಿದ್ದಾರೆ ಅವರು. ಇವತ್ತು

ನಾವು ಮತ ಹಾಕುತ್ತೇವೆ; ನಾಳೆ ಮತ್ತೆ ನಮ್ಮ ರಾಜೀನಾಮೆ ಕೊಡುತ್ತೇವೆ; ಕೊಟ್ಟು ಹೋಗಿ ಎಲ್ಲೆಲ್ಲಿ ನಾವು ಚುನಾವಣೆಗೆ ನಿಲ್ಲುತ್ತೇವೆ ಎನ್ನತಕ್ಕ ಘೋಷಣೆಯನ್ನು ಕೂಡ ಮಾಡಿದ್ದಾರೆ. ಅದಕ್ಕೆ ಸ್ವಲ್ಪ ಜಂಬ ಕೊಚ್ಚಿಕೊಳ್ಳಬೇಡಿ, ನೋಡಿ.

ಶ್ರೀ ಸಿ.ಬೈರೇಗೌಡ: ಇನ್ನೇನಿಲ್ಲ. ತಾವು ದಯವಿಟ್ಟು ಮಾತನಾಡಿ. ತಾವು ಏನು ಮಾತನಾಡಿದ್ದೀರಿ ಎನ್ನುವುದನ್ನು ಜ್ಞಾಪಕದಲ್ಲಿಟ್ಟಕೊಳ್ಳಿ ಎಂದು ಅಷ್ಟೇ ಮನವಿ ನನ್ನದು, ಮತ್ತೇನೂ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಿ ಎಂದು ಹೇಳಿದ್ದೇವೆ. ನೀವು ನೈತಿಕ ಹೊಣೆ ಹೊರುತ್ತೀರಾ?

(ಮಾನ್ಯ ಕೃಷಿ ಸಚಿವರಾದ ಶ್ರೀ ಸಿ.ಬೈರೇಗೌಡರು ತಾವು ಕುಳಿತಿದ್ದ ಪೀಠದಿಂದ ಎದ್ದು ಮತ್ತೊಂದು ಪೀಠದಲ್ಲಿ ಕುಳಿತರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರು ಸೀಟು ಛೇಂಜ್ ಮಾಡಿಕೊಂಡೇ ಹೋಗುವುದು ಇನ್ನು ಮೇಲೆಲ್ಲಾ.

ಶ್ರೀ ಎಸ್.ಸುರೇಶ್ ಕುಮಾರ್: ಸಭಾಧ್ಯಕ್ಷರೆ, ಅಲ್ಲಿ ಅನೇಕರ ಪರಿಸ್ಥಿತಿ ಅದೇ ಆಗಿದೆ. ಯಾವುದು ಜಾಗ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಈಗ ಜಾಗದ ಪರಿಚಯ ಮಾಡಿಸತಕ್ಕವರು ಅಧ್ಯಕ್ಷರು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಒಲ್ಲೆ, ಒಲ್ಲೆ ಎಂದರೂ ನೀವು ಕೊಡಿ ಕೊಡಿ ಎಂದು ಹೇಳುತ್ತಿದ್ದೀರಲ್ಲ ಅದಕ್ಕೇ ಬಂದಿದ್ದು ತೊಂದರೆ. ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು Discussion on the matter of public interest by Motion ಎಂದು ರೂಲ್ 159ರ ಕೆಳಗೆ ಕೊಟ್ಟಿದ್ದಾರೆ. Matter of Public interest ಎಂದರೆ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರಿಗೆ ಲಾಭ ಆಗತಕ್ಕದ್ದು ಅಥವಾ ಸಾರ್ವಜನಿಕರಿಗೆ ಇದರಿಂದ, ಈ ಒಂದು ಸೆಷನ್‌ನಿಂದ ಅಥವಾ ಏನು ವಿಶೇಷವಾಗಿ ನಮ್ಮನ್ನೆಲ್ಲಾ ಕರೆಸಿದ್ದಾರೆ ಇದರಿಂದ ಇಡೀ ರಾಜ್ಯದ ಜನತೆಗೆ ಒಳ್ಳೆಯದಾಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಅವರು ಕರೆಸಿದ್ದಾರೆಂದು ನಾನು ಭಾವಿಸಿದ್ದೇನೆ. ರಾಜ್ಯದ ಒಳ್ಳೆಯತನಕ್ಕೆ ಅಥವಾ ರಾಜ್ಯದ ಹಿತದೃಷ್ಟಿಯಿಂದ ಅಥವಾ ಪಬ್ಲಿಕ್ ಇಂಟರೆಸ್ಟ್ ಎಂದು ತಿಳಿದುಕೊಂಡು ಏನು ರೆಸಲ್ಯೂಷನ್ ಮೂವ್ ಮಾಡಿದ್ದಾರೆ ಇದರಲ್ಲಿ ಪಬ್ಲಿಕ್ ಇಂಟರೆಸ್ಟ್ ಯಾವುದಿದೆ? ಇದರಲ್ಲಿ ಇವತ್ತು ಅವರಿಗೆ suo moto vote of confidence ತೆಗೆದುಕೊಳ್ಳತಕ್ಕ ಪ್ರಮೇಯ ಏತಕ್ಕೆ ಬಂತು? ಅನಾವಶ್ಯಕವಾಗಿ suo moto ಈ ಒಂದು ದಿಸೆಯಲ್ಲಿ ನಮ್ಮನ್ನು ಕರೆಸಿದ್ದೀರಿ.

ಇವತ್ತು ಸಾಕಷ್ಟು ಅಭಿವೃದ್ಧಿ ವಿಷಯದ ಬಗ್ಗೆ, ಅನೇಕ ಸಮಸ್ಯೆಗಳು ಇವೆ. ಅದು ಗಡಿ ಸಮಸ್ಯೆ ಇರಬಹುದು, ಕಾವೇರಿ ಸಮಸ್ಯೆ ಇರಬಹುದು, ಕೃಷ್ಣಾ ಸಮಸ್ಯೆ ಇರಬಹುದು. ಸುಮಾರು ಒಂದು ವರ್ಷದಿಂದ ಡೆವಲಪ್‌ಮೆಂಟ್ ವರ್ಕ್ ಅಂತೂ ನಿಂತುಹೋಗಿದೆ. ಏಕೆಂದರೆ ಮೊದಲ ಐದಾರು ತಿಂಗಳಲ್ಲಿ ಯೋಜನೆಗಳು ಅಂತೂ ಅಪ್ರೂವ್ ಆಗಿಲ್ಲ; ಅದಾಗಿಲ್ಲ ಎಂದು ಹೇಳಿ ನಡೆಯಿತು. ಅಲ್ಲಿಂದ ಚುನಾವಣೆ ಬಂತು. ಕೌನ್ಸಿಲ್ ಚುನಾವಣೆ, ಪಾರ್ಲಿಮೆಂಟ್ ಮತ್ತು ಜೆಡ್.ಪಿ. ಚುನಾವಣೆ ಎಂದು ಇಡೀ ವರ್ಷವೇ ಹೋಯಿತು. ಅದರ ಬಗ್ಗೆಯೂ ಕೂಡ ಯಾವುದೇ ಕಾಳಜಿ ವಹಿಸಿ ಸೆಷನ್ ಕರೆಯಲಿಲ್ಲ. ಆದರೆ ಈಗ ಒಂದು ರಾಜಕೀಯ ದುರುದ್ದೇಶದಿಂದ ಅಥವಾ ತನ್ನ ಸರ್ಕಾರವನ್ನು ಉಳಿಸಿಕೊಳ್ಳಬೇಕು, ಇಡೀ ರಾಜ್ಯದಲ್ಲಿ ಚುನಾವಣೆಯ ಮೇಲೆ ಪ್ರಭಾವವನ್ನು ಬೀರಬೇಕು ಎನ್ನುವ ದೃಷ್ಟಿಯಿಂದ ಇವತ್ತು ವಿಶೇಷವಾದ ಅಧಿವೇಶನ ಕರೆದಿದ್ದೀರಿ. ಇದರಲ್ಲಿ ಯಾವ ಪಬ್ಲಿಕ್ ಇಂಪಾರ್ಟೆನ್ಸ್ ಅಡಗಿದೆ? ಜಸ್ಟ್ ಜನರಿಗೆ ತೋರಿಕೆಗೋಸ್ಕರ ಇದು, ಇದರಲ್ಲಿ ಏನೂ ಇಲ್ಲ. ಈಗ ಎಲ್ಲಿಯವರೆಗೆ ಹೋಗಿದ್ದಾರೆಂದರೆ, ಮುಂದೆ ಏನಾದರೂ ಮಾಡಿ, ಇವತ್ತು ನಮ್ಮ ರೆಸಲ್ಯೂಷನ್ ಪಾಸ್ ಮಾಡಿಕೊಡಿ, ಆಮೇಲೆ ನಿಮ್ಮ ನಿರ್ಣಯಗಳನ್ನು ತೆಗೆದುಕೊಳ್ಳಿ ಎನ್ನತಕ್ಕ ಮಟ್ಟಿಗೆ ಹೋಗಿದ್ದಾರೆ. ಸದಸ್ಯರುಗಳಿಗೆ ಫೋನ್‌ಮಾಡಿ ಕರೆಸಿಕೊಂಡು ಹೇಳಿಕೊಂಡು ಹೋಗತಕ್ಕ ದಾರಿಯಲ್ಲಿ ಬಂದಿದ್ದಾರೆ. ಆಮೇಲೆ ನಾನು ಇದನ್ನು ವಿವರವಾಗಿ ಹೇಳುತ್ತೇನೆ. ಒಂದು ವೇಳೆ ಇವರಿಗೆ ತಮ್ಮ ಪಕ್ಷದಲ್ಲಿ ಬಲ ಇದೆಯೋ ಇಲ್ಲವೋ ಎನ್ನತಕ್ಕದ್ದನ್ನು ತಿಳಿದುಕೊಳ್ಳುವುದಕ್ಕೆ ಜನತಾದಳ ಶಾಸಕಾಂಗ ಪಕ್ಷದ ಮೀಟಿಂಗ್ ಕರೆಸಿಕೊಂಡು ಮಾಡಬೇಕಾಗಿತ್ತು. ಸರ್ಕಾರದಿಂದ ಸುಮಾರು 50 ರಿಂದ 60 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ದಿನದ ವಿಶೇಷ ಅಧಿವೇಶನ ಕರೆದು, ಬರುವ ಚುನಾವಣೆಯಲ್ಲಿ ನಮಗೆ ಪ್ರಭಾವವಿದೆ, ನಮ್ಮ ಸರ್ಕಾರ ಜೀವಂತವಿದೆ ಅನ್ನುವುದನ್ನು ತೋರಿಸುವುದಕ್ಕೋಸ್ಕರ ತಂದಿದ್ದೇವೆಂದರೆ, ರೂಲ್ 159ರಲ್ಲಿ ಫಿಟ್ ಆಗುವುದಿಲ್ಲ. ಅದರ ಅವಶ್ಯಕತೆ ಕೂಡ ಇಲ್ಲ. ಅದಕ್ಕಾಗಿ ತಾವು ದಯವಿಟ್ಟು ಇದನ್ನು ತೆಗೆದುಕೊಳ್ಳಬಾರದು. ಈ ಚರ್ಚೆಗೆ ಅವಕಾಶ ಕೊಡಬಾರದು ಎನ್ನತಕ್ಕದ್ದು ನನ್ನ ವಾದ. ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ನಿಯಮ 159ರಲ್ಲಿ ಸೇರುವುದಿಲ್ಲ. ಇದರಲ್ಲಿ ಯಾವ ಪಬ್ಲಿಕ್ ಇಂಪಾರ್ಟೆನ್ಸ್ ಇಲ್ಲ, ಜನತೆಯ ಹಿತದೃಷ್ಟಿಯೂ ಇಲ್ಲ, ಮತ್ತು ಜನರ ಹಿತದೃಷ್ಟಿಯಿಂದ ಇವತ್ತು ಈ ನಿರ್ಣಯವನ್ನು ಕೂಡ ತಂದಿಲ್ಲ. ರಾಜಕೀಯ ದುರುದ್ದೇಶದಿಂದ ತಮಗೋಸ್ಕರ ತಂದದ್ದು, ತಮ್ಮ ಪಕ್ಷದ ಉಳಿವಿಗೆ ತಮ್ಮ ಸರ್ಕಾರದ ಉಳಿವಿಗೆ ತಂದಿರತಕ್ಕದ್ದು. ಇದು ರೂಲ್ 159ರಲ್ಲಿ ಬರುವುದಿಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ನಾನೇನು ಪಾಯಿಂಟ್ ರೈಸ್ ಮಾಡಿದ್ದೇನೆ ಅದನ್ನು ಎತ್ತಿಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನಮಗೆ ನಮ್ಮ ಪ್ರೊಸೀಡಿಂಗ್ಸ್ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

We go by parliament proceedings. ಇಂಥದ್ದೇ ಸಂದರ್ಭದಲ್ಲಿ ಲೋಕಸಭೆಯಲ್ಲಿ ಸಬ್‌ಸ್ಟ್ಯಾಂಟೀವ್ ಮೋಷನ್ ಅನ್ನು ಮೂವ್ ಮಾಡಿ ಲೀಡರ್ ಆಫ್ ದಿ ಹೌಸ್ ಆಗಿದ್ದವರು ಸಭೆಯ ವಿಶ್ವಾಸವನ್ನು ಅಪೇಕ್ಷಿಸಿದ್ದಾರೆ. ನಮ್ಮ ನಿಯಮ ರೀತ್ಯ ಅದನ್ನೇ ಅನುಸರಿಸುವುದಾದರೆ, ಪಾರ್ಲಿಮೆಂಟ್ ರೀತಿ ನೀತಿಗಳನ್ನು ಅನುಸರಿಸುವುದಾದರೆ ನಿಯಮ 159ರ ಕೆಳಗೆ ನಾವು ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಉಳಿದ merits and demerits, they will answer. Regarding point of order, I wish to say this. I am guided by the proceedings of Lok Sabha. In the very recent past, Lok Sabha has taken up similar motion. Therefore, I wish to tell the House that there is no substance in the point raised by the leader of the oposition. I have disallowed it.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಯಾವ ರೂಲ್‌ನಲ್ಲಿ ಸಹ ಒಂದು ಸರ್ಕಾರವನ್ನು ನಡೆಸತಕ್ಕವರು ವಿಶ್ವಾಸಮತ ಬೇಕೆಂದು ಕೇಳಿದಾಗ ಅದನ್ನು ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನಿನ ಚೌಕಟ್ಟಿನ ನಿಯಮಗಳಲ್ಲಿ ಅದು ಈಗಲ್ಲ ಪ್ರಶ್ನೆ. ಇವತ್ತು ರಾಜ್ಯದ ಜನತೆಯ ಅನೇಕ ಜ್ವಲಂತ ಸಮಸ್ಯೆಗಳು ಇದ್ದಾಗ ಅಧಿವೇಶನ ನಡೆಸಬೇಕೆಂದು ಒತ್ತಾಯ ಮಾಡಿದ್ದೇವೆ. ಈ ಸರ್ಕಾರಕ್ಕೆ ಬಹುಮತವಿಲ್ಲ, ನೀವು ಬಹುಮತ ಕಳೆದುಕೊಂಡಿದ್ದೀರಿ ವಿಶ್ವಾಸಮತ ಯಾಚನೆ ಮಾಡಿಯೆಂದು ನಾವು ಯಾರೂ ಹೇಳಲಿಲ್ಲ. ಇವತ್ತು ತಾಂತ್ರಿಕವಾಗಿ ಬಹುಮತವಿರುವಂತಹ ಶ್ರೀ ಜೆ.ಹೆಚ್.ಪಟೇಲ್‌ರವರ ನೇತೃತ್ವದ ಜನತಾದಳ ಸರ್ಕಾರ ವಿಶ್ವಾಸ ಮತ ಯಾಚನೆಗೆ ಮುಂದಾಗಿರುವುದು, ಶಾಸಕರ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ ಎನ್ನುವುದಕ್ಕೆ ನೀವು ತಂದಿರುವ ನಿರ್ಣಯವೇ ಸಾಕ್ಷಿ. ನಾವು ಅದನ್ನು ಕೇಳಲಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಇವತ್ತು ಸ್ಪಷ್ಟವಿದೆ. ನಾವು ಏಕೆ ಬೂಟಾಟಿಕೆಯಿಂದ ಜನತೆಯ ದೃಷ್ಟಿಯಿಂದ ಮಾತನಾಡಬೇಕು. ನಿಮಗೂ ಸ್ಪಷ್ಟವಿದೆ. ಮಂತ್ರಿಗಳು ಬಿಟ್ಟುಹೋಗುತ್ತಿದ್ದಾರೆ, ಶಾಸಕರು ಬಿಟ್ಟುಹೋಗುತ್ತಿದ್ದಾರೆ, ನಾಳೆಯೋ ನಾಡಿದ್ದೋ ಗೊತ್ತಿಲ್ಲ. ಇವತ್ತು ಕೈ ಎತ್ತುವುದಿಲ್ಲ. ಏಕೆಂದರೆ ಅವರ ಮೆಂಬರ್‌ಶಿಪ್ ಹೋಗುತ್ತದೆ. ರಾಜಕಾರಣದಲ್ಲಿ ಇದು ಎಲ್ಲರಿಗೂ ಗೊತ್ತಿರತಕ್ಕ ಸಂಗತಿ. ತಾವು ಮತ್ತು ಉಪ ಮುಖ್ಯಮಂತ್ರಿಗಳು ಇತ್ತೀಚೆಗೆ ಹೋಗಿ ಇಡೀ ರಾಜ್ಯವನ್ನು ಸುತ್ತಿಬಂದಿದ್ದೀರಿ. ರಾಜ್ಯದ ಜನ ನಿಮ್ಮನ್ನು ಸಂಪೂರ್ಣವಾಗಿ ಕೈಬಿಟ್ಟಿರುವ ಕಾಲದಲ್ಲಿ, ನಿಮ್ಮನ್ನು ಶಾಸಕರು ಮತ್ತು ಮಂತ್ರಿಗಳು ಕೈಬಿಟ್ಟಿರುವ ಕಾಲದಲ್ಲಿ, ಗೋಪಾಲಗೌಡರ ಗರಡಿಯಲ್ಲಿ ಬೆಳೆದಂತಹ ಶ್ರೀ ಜೆ.ಹೆಚ್.ಪಟೇಲ್‌ರವರಲ್ಲಿ ನಾವು ನಿರೀಕ್ಷೆ ಮಾಡುವುದಾದರೆ, ತಾವು ನೇರವಾಗಿ ಒಪ್ಪಿಕೊಂಡು ನನಗೇನು ಭಯವೆಂದು ಹೇಳಿಬಿಡಬೇಕಾಗಿತ್ತು. ಇವತ್ತು ಏನೋ ಕೈ

ಎತ್ತಿಸಿಕೊಂಡು ವಿಶ್ವಾಸಮತ ನನಗೆ ಬಂತು ಎಂದು ಹೇಳಿ, ನಾಳೆ ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ವಿಧಾನಸಭೆಯನ್ನು ವಿಸರ್ಜನೆ ಮಾಡಿಯೆಂದು ಹೇಳಿ, ತಮ್ಮ ಉಸ್ತುವಾರಿಯಲ್ಲಿ ಸರ್ಕಾರವನ್ನು ಇಟ್ಟುಕೊಂಡು ಮುಂದೆ ಹೋಗುವಂತಹ ತಾಂತ್ರಿಕತೆಯನ್ನು ಬಿಟ್ಟು, ತಮ್ಮ ಆತ್ಮಸಾಕ್ಷಿಗನುಗುಣವಾಗಿ ನಮಗೆ ವಿಶ್ವಾಸ ಹೋಗಿದೆ ಎನ್ನುವ ವಿಷಯ ತಮಗೆ ಗೊತ್ತಿದೆ. ಅವರು ನಿಮ್ಮನ್ನು ಕೈಬಿಟ್ಟಿದ್ದಾರೆ. ನಿಮ್ಮ ಶಕ್ತಿಮೀರಿ ಇದುವರೆಗೆ ಸರ್ಕಾರವನ್ನು ಮುಂದುವರಿಸಿಕೊಂಡು ಹೋಗುವಂತಹ ಪ್ರಯತ್ನವನ್ನು ತಾವು ಮಾಡಿದ್ದೀರಿ. ನಾನು ನಿಮಗೆ ಏನು ಸಲಹೆ ಕೊಡುವುದು ಅಂದರೆ, ಸಮಯವನ್ನು ವ್ಯರ್ಥ ಮಾಡುವುದು ಬೇಡ. ನಾವು ಚುನಾವಣೆಗೆ ಹೋಗುವವರು ಇದ್ದೇವೆ. ಜನತೆಯ ನ್ಯಾಯಾಲಯದ ಮುಂದೆ ಹೋಗುವವರಿದ್ದೇವೆ. ಹೇಗೂ ನಿಮ್ಮ ನಿರೀಕ್ಷೆ ಮೀರಿ ನಿಮಗೆ ದಯನೀಯ ಸೋಲಾಗುವುದು ಇದೆ. ಕೌಂಟಿಂಗ್ ನಡೆದಾಗ ರಾಜೀನಾಮೆ ಕೊಡುವುದರ ಬದಲು, ಜನ ನಿಮ್ಮನ್ನು ವಿಸರ್ಜನೆ ಮಾಡುವ ಬದಲು ನೀವೇ ನೇರವಾಗಿ ವಿಧಾನಸಭೆಯನ್ನು ವಿಸರ್ಜನೆ ಮಾಡಿ. ಆಗಲೇ ನಿರ್ಜೀವವಾದ ಕೋಮ ಸ್ಥಿತಿಯಲ್ಲಿರುವ ಈ ಸರ್ಕಾರಕ್ಕೆ ಕೃತಕ ಆಕ್ಸಿಜನ್ ನೀಡುವಂತಹ ವ್ಯರ್ಥ ಪ್ರಯತ್ನ ಮಾಡಬೇಡಿ. ಈಗಾಗಲೇ ಸರ್ಕಾರ ಕೋಮ ಸ್ಥಿತಿಯಲ್ಲಿದೆ ಅದಕ್ಕೆ ಮತ್ತೆ ಆಕ್ಸಿಜನ್ ನೀಡುವಂತಹ ಕೆಲಸ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಕಥೆ ಮುಗಿದಿದೆ. ನೀವು ಗೌರವದಿಂದ ರಾಜೀನಾಮೆಯನ್ನು ಕೊಟ್ಟು ಜನತೆಯ ನ್ಯಾಯಾಲಯದ ಮುಂದೆ ಹೋಗುವುದನ್ನು ಮಾಡಿದರೆ ನಿಮ್ಮನ್ನು ಜನರು ಮೆಚ್ಚುತ್ತಾರೆ. ಮಾನ್ಯ ಜೆ.ಹೆಚ್.ಪಟೇಲ್‌ರವರು ಶಕ್ತಿಮೀರಿ ಪ್ರಯತ್ನ ಮಾಡಿದರೂ ಅವರ ಕಡೆಯ ಶಾಸಕರು ಕೈಕೊಟ್ಟಾಗ, ಜನರ ವಿಶ್ವಾಸವನ್ನು ಕಳೆದುಕೊಂಡಾಗ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನತೆಯ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಟ್ಟು ವಿಧಾನಸಭೆಯನ್ನು ವಿಸರ್ಜನೆ ಮಾಡಿ ಜನತೆಯ ನ್ಯಾಯಾಲಯದ ಮುಂದೆ ಹೋದರೆ ನಿಮಗೆ ಗೌರವ ಬರುತ್ತದೆ. ಇವತ್ತೋ ನಾಳೆಯೋ ಮಾನ್ಯ ರಾಜ್ಯಪಾಲರ ಹತ್ತಿರ ಹೋಗುವುದನ್ನು ಬಿಟ್ಟು ಮೊದಲು ಆ ಕೆಲಸ ಮಾಡಿ. ವಿಧಾನಸಭೆಯನ್ನು ವಿಸರ್ಜನೆ ಮಾಡಿ ತಮ್ಮ ನೇತೃತ್ವದಲ್ಲಿ ಉಸ್ತುವಾರಿ ಸರ್ಕಾರ ಮಂತ್ರಿಮಂಡಲ ಇಟ್ಟುಕೊಂಡು ರಾಜಕಾರಣ ಮಾಡಬೇಕೆನ್ನುವ ಇಚ್ಛೆಯಿದ್ದರೆ ಮಾಡಿ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಯಡಿಯೂರಪ್ಪನವರು ವಿಧಾನಸಭೆಯನ್ನು ವಿಸರ್ಜನೆ ಮಾಡಿಯೆಂದು ಕೇಳಿದ್ದಾರೆ. ನಾಳೆ ವಿಧಾನಸಭೆಯನ್ನು ವಿಸರ್ಜನೆ ಮಾಡಿದರು ಎಂದು ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕ ಪ್ರಯತ್ನ ಮಾಡುತ್ತಾರೆ. ಅವರು ಬೆಳಿಗ್ಗೆ ಆಡಿದ ಮಾತನ್ನು ಈಗ ಜ್ಞಾಪಕದಲ್ಲಿಟ್ಟುಕೊಳ್ಳುವುದಿಲ್ಲ. ಸುಮ್ಮನೆ ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾವು ಯಾರೂ ಏನೂ ಕೇಳುವುದಕ್ಕೆ ಹೋಗುವುದಿಲ್ಲ. ನೀವೇ ನೇರವಾಗಿ ಎದ್ದುನಿಂತು ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ, ಈ ಸರ್ಕಾರ ಗೊಂದಲದಲ್ಲಿ ಇದೆಯೋ ಇಲ್ಲವೋ? ಮಂತ್ರಿಗಳು ಕೈಬಿಟ್ಟು ಹೋಗುತ್ತಿಲ್ಲವೆ? ಶಾಸಕರು ಕೈಬಿಟ್ಟು ಹೋಗುತ್ತಿಲ್ಲವೇ? ದಯಮಾಡಿ ವಿಧಾನಸಭೆಯನ್ನು ವಿಸರ್ಜನೆ ಮಾಡಿ ಅಲ್ಲಿಗೆ ಅದು ಮುಗಿದೇ ಹೋಗುತ್ತದೆ. ನೇರವಾಗಿ ಚುನಾವಣೆಗೆ ಹೋಗೋಣ. ನೀವು ಕೊಟ್ಟ ಭರವಸೆಗಳನ್ನು ಈಡೇರಿಸಲಿಲ್ಲ. ಜನರನ್ನು ಕಣ್ಣೀರು ಹಾಕುವ ಸ್ಥಿತಿಗೆ ತಂದಿದ್ದೀರಿ. ಈ ಮಾತು ಬರಗಾಲ, ಅತಿವೃಷ್ಟಿ, ನೆರೆಹಾವಳಿ, ಭೂಕಂಪ ಇಂತಹ ಪರಿಸ್ಥಿತಿಯಲ್ಲಿ ಹೇಳುವಂತಹದ್ದು. ನಾಳೆ ಜನ ಭಾರತೀಯ ಜನತಾ ಪಕ್ಷವನ್ನು ಆಡಳಿತಕ್ಕೆ ತರುವವರಿದ್ದಾರೆ. ನಾವು ಒಂದು ಒಳ್ಳೆಯ ಆಡಳಿತವನ್ನು ಕೊಡುವವರಿದ್ದೇವೆ. ದಯವಿಟ್ಟು ಈ ಸಂದರ್ಭದಲ್ಲಿ ನೀವು ನೇರವಾಗಿ ವಿಧಾನಸಭೆಯನ್ನು ವಿಸರ್ಜನೆ ಮಾಡಬೇಕು. ಅದಕ್ಕೆ ಈ ಕಡೆ ಇರುವವರೆಲ್ಲರ ಬೆಂಬಲವಿದೆ. ಆ ಕಡೆಯವರು ನಿಮಗೆ ಕೈಎತ್ತುತ್ತಾರೆ. ಕೈ ಎತ್ತಿಯೆಂದು ನೀವೇನು ಕೇಳಲೇಬೇಡಿ. ವಿಧಾನಸಭೆ ವಿಸರ್ಜನೆಗೆ ಬಹುಮತ ಕೇಳಿ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೇ, ಈಗ ವಿಧಾನಸಭೆಯನ್ನು ವಿಸರ್ಜನೆ ಮಾಡತಕ್ಕ ಪರಿಸ್ಥಿತಿ ಬಂದಿಲ್ಲವೆಂದು ನಾನು ಹೇಳತಕ್ಕದ್ದು. ಈ ರಾಜ್ಯದ ಜನತೆ ಐದು ವರ್ಷಗಳ ಕಾಲ ಸರ್ಕಾರ ನಡೆಸಿ ಎಂದು ಅಧಿಕಾರ ಕೊಟ್ಟಿರತಕ್ಕದ್ದು. ವಿಧಾನಸಭೆ ವಿಸರ್ಜನೆಗೆ ಇದು ಕಾಲ ಅಲ್ಲ. ವಿಧಾನಸಭೆ ವಿಸರ್ಜನೆಗೆ ನನ್ನದು ಸ್ಪಷ್ಟವಾದ ವಿರೋಧವಿದೆ. ಎರಡನೆಯದು, ಶಾಸನಸಭೆಯನ್ನು ಏಕೆ ಕರೆದರು ಎನ್ನುವ ಪ್ರಶ್ನೆ ಬಂದಾಗ ಅದಕ್ಕೆ ನಾನು ಹೇಳುತ್ತೇನೆ. ಶಾಸನಸಭೆಯನ್ನು ಕರೆದಿರುವುದನ್ನು ನಾನು ಸಮರ್ಥಿಸುತ್ತೇನೆ. ಇವತ್ತು ಸ್ಥಿರ ಸರ್ಕಾರ ಇದೆಯೆಂದು ಶಾಸನಸಭೆಯನ್ನು ಕರೆಯಲಿಲ್ಲ. ನಾವೇನು ಹೇಳುತ್ತಿದ್ದವು ಎಂದರೆ, ನೀವು ರಾಜೀನಾಮೆ ಕೊಡಿಯೆಂದು ಹಗಲುರಾತ್ರಿ ಹೇಳುತ್ತಿದ್ದವು. ಆದರೆ ನಾನು ಹೇಳುತ್ತಿದ್ದೇನೆ, ಒಂದು ಸ್ಥಿರ ಸರ್ಕಾರ ಇರಬೇಕೆಂದು ಒಂದು ಕಡೆ ಹೇಳುತ್ತಿದ್ದೇವೆ, ಸ್ಥಿರ ಸರ್ಕಾರ ಇರಬೇಕೆಂದು ವಾದ ಮಾಡುವುದಾದರೆ, ಸ್ಥಿರಸರ್ಕಾರ ಇದೆಯೋ ಅಥವಾ ಇಲ್ಲವೋ ಎನ್ನತಕ್ಕದ್ದನ್ನು ಅವರು ರುಜುವಾತು ಪಡಿಸುವುದಕ್ಕೆ, ಇವತ್ತು ಅದು ಈ ಸಭೆಯಲ್ಲಿ ತೀರ್ಮಾನವಾಗಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಓಟು ಆ ಕಡೆಗೆ ಹೋಗುತ್ತದೆ ಎನ್ನುವುದು ನಮಗೆ ಗೊತ್ತಿತ್ತು.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಇವೊತ್ತು ಅಪರೂಪವಾದುದು, ವಿಶೇಷವಾದುದು ಈ ಸಭೆ. ಏಕೆಂದರೆ ತಮ್ಮ ನೇತೃತ್ವದಲ್ಲಿ ನಂಬಿಕೆಯನ್ನು ವ್ಯಕ್ತಪಡಿಸುವುದಕ್ಕೋಸ್ಕರ ಒಂದು ಸಭೆ ಕರೆಯತಕ್ಕದ್ದು ಅದು ಅಪರೂಪವಾಗಿದೆಯೆಂದು ನಾನು ಹೇಳತಕ್ಕದ್ದು. ಅದು ಬೇರೆ ಕಡೆ ಆಗಿದ್ದರೆ ಅದು

ಬೇರೆ. ಈ ಸಭೆಗೆ ಅಂತಹ ವಿಶೇಷವಾದ ಪರಿಸ್ಥಿತಿ ಏನು ಬಂತು? ಒತ್ತಡ ಏನು ಬಂತು? ಸೂಚನೆ ಇಟ್ಟಿರತಕ್ಕದ್ದು ಸಭಾನಾಯಕರು, ಅದನ್ನು ಮೊದಲು ತಿಳಿಸಬೇಕಾಗಿತ್ತು. ಅಂತಹ ವಿಶೇಷವಾದ ಪರಿಸ್ಥಿತಿ ಏನು? ಅದರ ಮೇಲೆ ಚರ್ಚೆ ಪ್ರಾರಂಭವಾಗಲಿ.

ಶ್ರೀ ಎಂ.ವೀರಪ್ಪಮೊಯ್ಲಿ: ಮಾನ್ಯ ಅಧ್ಯಕ್ಷರೆ, ನಾನು ವಿಶ್ವಾಸ ಮತದ ನಿರ್ಣಯದ ಮೆರಿಟ್ ಬಗ್ಗೆ ಮಾತನಾಡುತ್ತಿಲ್ಲ. ಏಕೆಂದರೆ ಅದಕ್ಕೆ ಅವಕಾಶ ಇದೆ; ಮುಂದೆ ಮಾತನಾಡಬಹುದು. ಆದರೆ ಇಲ್ಲಿ ಈ ಸದನದ ಕೆಲವು ಸಂಪ್ರದಾಯ ಮತ್ತು ಪ್ರಿಸಿಡೆಂಟ್ಸ್ ಏನಿದೆ ಅದನ್ನೆಲ್ಲಾ, ಸ್ವಲ್ಪ ಪರಾಂಭರಿಸಬೇಕೆಂದು ತಮ್ಮ ಗಮನವನ್ನು ಸೆಳೆಯುತ್ತೇನೆ. ಏಕೆಂದರೆ, ವಿಧಾನ ಸಭೆ ಸಂಪ್ರದಾಯದ ಪ್ರಕಾರ ಯಾವತ್ತೂ, ಎಂದಿಗೂ ಕೂಡ ನಿಯಮ 159ರ ಪ್ರಕಾರ ವಿಶ್ವಾಸಮತವನ್ನು ಕೇಳಿರತಕ್ಕದ್ದು ಇಲ್ಲ. ಇದು ಪ್ರಥಮ ಬಾರಿಯಾಗುತ್ತದೆ. ನಾನು ಏನು ಹೇಳುತ್ತೇನೆ, ಮೊದಲು ತಾವು ಕೇಳಿ, ನಂತರ ಉತ್ತರ ಹೇಳಿ. ತಾವು ಅವರಿಗೆ ಇವತ್ತು 159ರ ನಿಯಮದ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾವು ಇನ್ನೂ ಪ್ರಿಲಿಮಿನರಿ ಸ್ಟೇಜ್‌ನಲ್ಲಿ ಇದ್ದೇವೆ. ಅದರಲ್ಲಿ ಕೆಲವು conditions of admissibility ಎಲ್ಲಾ ಹಾಕಿದ್ದೀರಿ. ಆ ಕಕ್ಷೆಯಲ್ಲಿ ಈ ವಿಚಾರವನ್ನು ನೀವು ಹೇಗೆ ತರುವುದಕ್ಕೆ ಆಗುತ್ತದೆ ಎಂಬುದನ್ನು ತಾವು ವಿಶೇಷವಾಗಿ ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ, ಇಲ್ಲಿ ಏನು ಹೇಳಿದ್ದಾರೆಂದರೆ, 'It shall raise substantially one definite issue.' ಎಂದು, What is that definite issue? ಏಕೆಂದರೆ ತಾವು ಈ ಮೋಷನ್ ಆಫ್ ಕಾನ್ಫಿಡೆನ್ಸ್ ಅನ್ನು ನಿಯಮ 159ರ ಅಡಿಯಲ್ಲಿ ತಂದರೆ ನಾವು ಮಾತನಾಡುವುದಕ್ಕೆ ಆಗುವುದಿಲ್ಲ, ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಯಾವುದಾದರೂ ಒಂದು ವಿಚಾರವನ್ನು ತೆಗೆದುಕೊಳ್ಳಬಹುದು. ಅವರು ವಿಧಾನ ಪರಿಷತ್ತಿನ ಚುನಾವಣೆ ವಿಚಾರ ತೆಗೆದುಕೊಂಡರೆ ತಾವು ಆ ವಿಚಾರಕ್ಕೆ ಕಡಿವಾಣ ಹಾಕಬಹುದು. ಆದರೆ ಬೇರೆ ವಿಚಾರ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ಹೇಳಬಹುದು. ಏಕೆಂದರೆ ಇಲ್ಲಿ ಅದರ ವ್ಯಾಪ್ತಿ ಬಹಳ ಸೀಮಿತವಾಗಿದೆ. ಇದು ನಿರ್ದಿಷ್ಟವಾದ ವಿಚಾರ. ಮೋಷನ್ ಆಫ್ ಕಾನ್ಫಿಡೆನ್ಸ್ ವಿಚಾರ ಅಲ್ಲ. It is only an umbrella. ಆ ಅಂಬ್ರೆಲಾದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅದರ ವ್ಯಾಪ್ತಿ ಇಂತಿಷ್ಟು ಎಂದು ಇರಬೇಕಾಗುತ್ತದೆ. ಆ ವಿಸ್ತಾರ ಇಲ್ಲದೇ ಇರತಕ್ಕಂಥ ಕಲಂ 159ರ ಅಡಿಯಲ್ಲಿ ಈ ವಿಚಾರವನ್ನು ತಂದರೆ ಏನರ್ಥ? ಇದು ಏನು ಆಗುತ್ತದೆ ಎಂದರೆ ಇವತ್ತು We will be silencing the Opposition parties to raise any issue. ಇದು ಒಂದು ರೀತಿಯಲ್ಲಿ ಪ್ರಿವಿಲೇಜ್ ಪ್ರಶ್ನೆ ಕೂಡ ಆಗುತ್ತದೆ. ಏಕೆಂದರೆ vote of confidence, privilege ಅವರಿಗೆ ಹೇಗಿದೆಯೋ ಅದೇ ಪ್ರಕಾರದ ವ್ಯಾಪ್ತಿಯಲ್ಲಿ ಬಹಳ ಸುದೀರ್ಘವಾಗಿ ಯಾವುದೇ ಒಂದು ವಿಚಾರವನ್ನು ಈ ಕಕ್ಷೆಯಲ್ಲಿ ತಂದು

ಮಾತನಾಡುವಾಗ ಅವುಗಳಿಗೆ ಅವಕಾಶ ಇರಬೇಕು. ಈ ಒಂದು ಅವಕಾಶ ಇಲ್ಲದೇ ಹೋದರೆ it will become a farce under the parliamentary procedure. ಅವರ ದೃಷ್ಟಿಯಲ್ಲಿ ಹೇಳುವುದಾದರೆ, ವಿಶ್ವಾಸ ಮತ ಬೇಕೆಂದು ಏನು ತಾವು ಹೇಳುವುದಕ್ಕೆ ಹೊರಟ್ಟಿದ್ದೀರಿ, ನಿಮ್ಮ ದೃಷ್ಟಿಯಲ್ಲಿ ಕೂಡ ಈ ದೊಡ್ಡ ವಿಚಾರವನ್ನು ಈ ವ್ಯಾಪ್ತಿಯಲ್ಲಿ ಚರ್ಚೆ ಮಾಡಬೇಕೆಂದು ನೀವು ಬಂದಿದ್ದೀರಿ. ಆದರೆ, ನಿಮ್ಮ ಉದ್ದೇಶ ಕೂಡ ಸಾರ್ಥಕವಾಗುವುದಿಲ್ಲ, ನಮ್ಮ ಉದ್ದೇಶ ಕೂಡ ಸಾರ್ಥಕವಾಗುವುದಿಲ್ಲ. We will be silencing the Opposition on this issue. I don't think the Hon'ble Speaker has an intention to silence the debate on this.

MR. SPEAKER: I am feeling sorry that you will be going away to Parliament. You are such a veteran parliamentarian.

SRI M.P.PRAKASH: Speaker Sir, this is a perverse argument that will prove farce.

SRI M.VEERAPPA MOILY: How can you say? What? How can it be perverse?

SRI M.P.PRAKASH: How can the Speaker silence the Hon'ble Members? How can he?

SRI M.VEERAPPA MOILY: We can raise only one issue.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸೆಕ್ಷನ್ 147 ಬೇಕಾದರೆ ನೋಡಿ, 159ರ ಲಿಮಿಟೇಷನ್ ನೋಡಿ.

SRI M.VEERAPPA MOILY: You can totally limit it. You can raise only one definite issue. How can we raise so many issues against the government? You are not entitled to do. It is not perverse.

SRI P.G.R.SINDHIA: Where is the privilege? On the contrary, we are allowing you to debate.

SRI M.VEERAPPA MOILY: Vote of confidence is the privilege of this House to discuss in depth, in detail, to deliberate on this. Rule 159 will not allow you, will not permit you.

"It shall not contain agruments, inferences, ironical expressions, imputations or defamatory statements;" ಯಾವುದೂ ಮಾತನಾಡುವುದಕ್ಕೆ ಆಗುವುದಿಲ್ಲ. "It shall be restricted to a matter of recent occurrence." What is that? What is the matter of recent occurrence in vote of confidence? I am not coming in the way. ಆದರೆ ನಿಯಮ 159ರ ವ್ಯಾಪ್ತಿಯಲ್ಲಿ ಇವತ್ತಿನವರೆಗೆ ಈ ವಿಧಾನ ಸಭೆಯ ಇತಿಹಾಸದಲ್ಲಿ ವಿಶ್ವಾಸ ಮತವನ್ನು ಯಾವಾಗಲೂ ಯಾರೂ ಕೂಡ ಯಾಚಿಸಲಿಲ್ಲ. AT the most Resolution ಮೂಲಕ ತಂದದ್ದು ಇದೆ. I am telling you we are not preventing. ವಿಶ್ವಾಸ ಮತದ ಕಲಂ ಪ್ರಕಾರ ಈ ಸದನದ ಪರಂಪರೆ ಇದೆ. ಇದನ್ನು ತಾವು ಆ ರೀತಿಯಲ್ಲಿ ತರಲಿಲ್ಲ. ಅದನ್ನು ತಂದಿದ್ದರೆ ಅದರ ವ್ಯಾಪ್ತಿ it is not limitation. ತಾಂತ್ರಿಕ ದೃಷ್ಟಿಯಿಂದ, ನಿಯಮದ ದೃಷ್ಟಿಯಿಂದ ದೊಡ್ಡ ವ್ಯಾಪ್ತಿಯಲ್ಲಿ ಚರ್ಚೆ ಆಗುತ್ತಿತ್ತು. ಏಕೆಂದರೆ ನಮ್ಮ ರೂಲ್ ಇರುವಾಗ ನಾವು ಪಾರ್ಲಿಮೆಂಟ್ ಮಾದರಿಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. It is not required. We cannot get a comparison under the rule 181 of the Parliament. ಇದರಲ್ಲಿ ನಾವು ಇದನ್ನು ಇಂಪೋಸ್ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ, ರೂಲ್ 159ರ ಪ್ರಕಾರ ತರುವುದಕ್ಕೆ ಆಗುವುದಿಲ್ಲ. When our rule limits the scope of the discussion, I don't think we can afford to stretch the discussion too far when it comes to 159. ಏಕೆಂದರೆ ಚರ್ಚೆ ಆಗಬೇಕು ಎಂದು ಇದನ್ನು ತಂದಿದ್ದೀರಿ. ಚರ್ಚೆ ಆಗಬಾರದು ಎನ್ನುವ ಹಾದಿಯಲ್ಲಿ ಹೋದರೆ ಇದು ಯುಕ್ತವಾಗುವುದಿಲ್ಲ. ದಯಮಾಡಿ, You have to definitely uphold our views and reject this motion and if they want to bring it in some other form, it is left to them. I don't have any argument on that.

ಅಧ್ಯಕ್ಷರು: ಹಿಂದೆ ಈ ಸದನದಲ್ಲಿ ಇಂತಹ ಸನ್ನಿವೇಶದಲ್ಲಿ ರೂಲ್ 146ರಲ್ಲಿ ತೆಗೆದುಕೊಂಡಿದ್ದಾರೆ. ಆ ನಂತರ ನಮ್ಮ ನಿಯಾಮಾವಳಿಗಳು ತಿದ್ದುಪಡಿಯಾಗಿದ್ದು, ನಿಯಮಾವಳಿಗಳ ಸಂಖ್ಯೆ ಬದಲಾವಣೆಯಾಗಿದೆ. ನಿಯಮ 159, 160ರಲ್ಲಿ ಇದೇ ಸದನದಲ್ಲಿ, ಇದೇ ವಿಚಾರದಲ್ಲಿ ಚರ್ಚೆ ಮಾಡಿರತಕ್ಕ ಪ್ರಿಸಿಡೆಂಟ್ ಕೂಡ ನಮ್ಮಲ್ಲಿ ಇದೆ.

ಇದು ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. I will ask my office to guide you. ಆಮೇಲೆ ಲೋಕಸಭೆಯಲ್ಲಿ ಇರತಕ್ಕಂಥ ಪದ್ಧತಿ ಏನಿದೆ it is not binding on us. But, it guides us. ಇತ್ತೀಚಿಗೆ ಅಷ್ಟೇ ಇಂತಹ ಸಂದರ್ಭ ಏರ್ಪಟ್ಟಾಗ ಲೋಕಸಭೆಯಲ್ಲಿ ಈ ವಿಷಯವನ್ನು by way of a substantive motion, not by way of a resolution ತಂದಾಗ ಅದು ಯಾವ ಸಂದರ್ಭದಲ್ಲೂ ಹೌಸನಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ತಾವು ಏನು ಒಂದು ವಿಚಾರ ಹೇಳಿದಿರಿ, incriminatory, defamatory- nobody can speak. Not only on this. They are the general principles. Here, it relates to a matter like this-material facts and material particulars. The motion moved by the Leader of the House is the material facts. What you want to say is material particulars. To substantiate either for or against the material fact that is before the House, All the evidences that the Hon'ble Members would desire to adduce by way of material particulars, they would be welcome and I have no intention, as Speaker to silence any Member of the House. I have determination to regulate the business of the House. I am equally desirous of a very fair and impartial elections in the state. In view of the election process that has already begun, I will take enough care to see that no Member of the House indulges in such utterances which would have some bearing on the electorate of the state. I would now request you to kindly permit the Leader of the House to make his preliminary submission. Hon'ble Leader of the House.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಹಿಂದೆ ಯಾವ ಕಾಲದಲ್ಲೂ ಮುಖ್ಯಮಂತ್ರಿಗಳು ಈ ತರಹ ತಾವಾಗಿಯೇ ಸದನದಲ್ಲಿ ವಿಶ್ವಾಸ ಮತ ಕೇಳಿಲ್ಲ. ಅವರು ಏಕೆ ಕೇಳಿಲ್ಲ ಎಂದರೆ, ಅವರಿಗೆ ಧೈರ್ಯ ಇರುತ್ತಿರಲಿಲ್ಲ. ಎಲ್ಲಿ ಬಿದ್ದು ಹೋಗುತ್ತೇನೋ, ಏನಾಗುತ್ತದೋ ಎನ್ನುವ ಭಯ ಇತ್ತು. ನನಗೆ ಆ ಅಪನಂಬಿಕೆ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಬರೇ ಇದೇ ಕಥೆಯನ್ನು ಹೇಳಿಕೊಂಡು ಹೋಗಿ. ಏನು ಧೈರ್ಯ ನಿಮ್ಮದು? ಧೈರ್ಯ ಇದ್ದರೆ ಇದನ್ನು ತರುತ್ತಿರಲಿಲ್ಲ....

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್: ಸ್ವಲ್ಪ ಚುನಾವಣೆ ಆಗುವವರೆಗೆ ತಾಳಿ, ನೀವು ಎಲ್ಲೆಲ್ಲಿ, ಇರುತ್ತೀರೋ ನೋಡೋಣ. ತಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ನಾನು ಮಾತನಾಡುವಾಗ ದಯವಿಟ್ಟು ಮಧ್ಯೆ ಬಾಯಿ ಹಾಕಬೇಡಿ.

ಶ್ರೀ ಎಂ.ವೀರಪ್ಪ ಮೊಯಿಲಿ: ಯಾವ ಮುಖ್ಯಮಂತ್ರಿಗಳೂ ಕೇಳಿಲ್ಲ ಎಂದು ಹೇಳಿದಿರಲ್ಲ, ನಿಯಮ 146ರಲ್ಲಿ ಕೇಳಿದ್ದಾರೆ. ಆದರೆ ನಿಯಮ 159ರ ಪ್ರಕಾರ ಯಾವತ್ತೂ ಯಾರೂ ಕೇಳಿಲ್ಲ.

ಅಧ್ಯಕ್ಷರು: ನಿಯಮ 159 ಹಾಗೂ 160ರ ಪ್ರಕಾರ ಕೇಳಿದ್ದಾರೆ.

SRI J.H.PATEL: Let us not go by the letter, but by the spirit of it. ಅದಕ್ಕೆ ವಿಶ್ವಾಸಮತ ಏಕೆ ಕೇಳಬೇಕಾಗಿತ್ತು ಅಂದರೆ.

1.20 ಪಿ.ಎಂ

ನಮ್ಮ ಪಕ್ಷದ ಒಳಗಡೆ ನಡೆದ ವಿಷಯಗಳು, ಅದು ಬೇರೆ. ಅದನ್ನು ನಾವು ಪಬ್ಲಿಕ್ ಆಗಿ ನಮ್ಮ ಪಾರ್ಟಿಯಲ್ಲಿ ಹೀಗೆ ಆಯಿತು, ಅವರ ಪಾರ್ಟಿಯಲ್ಲಿ ಹೀಗೆ ಆಯಿತು ಎಂದು ಹೇಳಿಲ್ಲ, ನಡೆದಿರಬಹುದು. ನಿಮ್ಮ ಪಾರ್ಟಿಗಳಲ್ಲೂ ಬಿಡುವವರು ಇದ್ದಾರೆ, ಸೇರುವವರು ಇದ್ದಾರೆ. ನಿಮ್ಮದು ದಿನವೂ ಸಂತೆ ನಡೆಯುತ್ತಾ ಇದೆ, ಜನರನ್ನು ಕರೆಯುತ್ತಿದ್ದೀರಿ. ಮಾನ್ಯ ಯಡಿಯೂರಪ್ಪನವರು 'ಬನ್ನಿ ಬನ್ನಿ' ಎಂದು ಜಾತ್ರೆಯಲ್ಲಿ ಜನರನ್ನು ಕರೆಯುತ್ತಾರಲ್ಲ, ಹಾಗೆ ಕರೆಯುತ್ತಿದ್ದಾರೆ. ರಾಜ್ಯದ ಜನತೆಯ ಮನಸ್ಸಿನ ಮೇಲೆ ಯಾವುದೇ ಸಂಶಯ ಉಳಿಯಬಾರದು; ನಾಯಕತ್ವದ ಬಗ್ಗೆ ಅನುಮಾನ ಇದ್ದರೆ, ನೀವು ಹೇಳಿದ ಹಾಗೆ ನಾನು ಜೆ.ಡಿ.ಎಲ್.ಪಿ. ಅವರನ್ನು ಕರೆದು ತೀರ್ಮಾನ ಮಾಡುತ್ತಿದ್ದೆ. ನನಗೆ ಅದರದ್ದು ಅನುಮಾನ ಇರಲಿಲ್ಲ. ನಾಯಕತ್ವದ ಬಗ್ಗೆ ಅನುಮಾನ ಇಲ್ಲ. ಸರ್ಕಾರದ ಸ್ಥಿರತೆ ಬಗ್ಗೆ ನೀವು ಹೇಳಿ ಕೊಳ್ಳುತ್ತಾ ಹೋದಿರಲ್ಲ, ಅದೂ ಲೋಕಸಭಾ ಚುನಾವಣೆ ಅನೌನ್ಸ್ ಆದಮೇಲೆ ಈ ಸರ್ಕಾರ ಉಳಿಯುವುದಿಲ್ಲ, ಇದು ಈಗ ಬಿದ್ದುಹೋಗಿಬಿಡುತ್ತದೆ, ಆಗ ಬಿದ್ದುಹೋಗಿ ಬಿಡುತ್ತದೆ' ಎಂದು ಹೇಳಿ ಆಮೇಲೆ ರಾಜೀನಾಮೆ ಕೇಳಿದಿರಿ. ಸದನವನ್ನು ವಿಸರ್ಜನೆ ಮಾಡಿ ಎಂದು ಕೇಳಿದಿರಿ. ಇದು ಪ್ರಜಾತಂತ್ರವೇನು? ನಿಮಗೆ ಬೇಡವಾದಾಗ ಡಿಸಾಲ್ವ್ ಮಾಡುವುದು, ನಿಮಗೆ ಬೇಕಾದಾಗ ಎಲೆಕ್ಟ್ ಮಾಡುವುದು. ಮಾನ್ಯ ಅಧ್ಯಕ್ಷರೇ, ಲೋಕಸಭೆ ಡಿಸಾಲ್ವ್ ಆಗುವುದಕ್ಕೂ ಇಂಥಾದ್ದೇ ಹುಡುಗಾಟಿಕೆ ಕಾರಣ. ಅದು ಈ ದೇಶದಲ್ಲಿ ಆಗಬಾರದು. ಒಂದೊಂದು ಚುನಾವಣೆಗೂ ಸರ್ಕಾರಕ್ಕೆ ಖರ್ಚು ಎಷ್ಟು ಆಗುತ್ತದೆ? ಸಮಾಜದಲ್ಲಿ ಎಷ್ಟು ಹಿಂಸೆ? ಅದನ್ನು ಗೊತ್ತಿದ್ದೂ ಗೊತ್ತಿದ್ದೂ, ಐವತ್ತು ವರ್ಷಗಳ ನಂತರವೂ ನಾವು

ಇವತ್ತು, ಸ್ಟೆಬಿಲಿಟಿ ಎಂದರೆ ಏನು? ಸ್ಥಿರಸರ್ಕಾರ ಎಂದರೆ ಏನು? ಮಾನ್ಯ ಅಧ್ಯಕ್ಷರೇ, ಈ ಸ್ಥಿರತೆ ಬಗ್ಗೆ ಬಹುಶಃ ಬಹಳ ಕಡಿಮೆ ಕಲ್ಪನೆ ಇರತಕ್ಕಂಥವರು ಸ್ಥಿರ ಸರ್ಕಾರ ಎಂದು ಹೇಳುತ್ತಾರೆ. 45 ವರ್ಷ ಕಂಟಿನ್ಯೂಯಸ್ ಆಗಿ ಆಳಿದಂಥ ಒಂದು ಪಕ್ಷ; ಆ ಪಕ್ಷ ಇವತ್ತು 45 ವರ್ಷಗಳ ನಂತರ ಇವತ್ತು 45-46 ಪರ್ಸೆಂಟ್ ಇಲ್ಲಿಟ್ರೇಟ್ ಶೇಕಡ 49 ಬಿಲೋದಿ ಪಾವರ್ಟಿ ಲೈನ್. ಇದು ಸ್ಥಿರ ಸರ್ಕಾರ, 45ವರ್ಷಗಳಿಂದ ಮಾಡಿದ್ದು. ಏನು ಮಾಡಿತು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಪಾರ್ಲಿಮೆಂಟ್ ಚುನಾವಣೆಯೇ? ಏನಿದು?

(ಮಾನ್ಯ ಸದಸ್ಯರುಗಳು ಏಕಕಾಲದಲ್ಲಿ ಎದ್ದುನಿಂತುಕೊಂಡು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಸದನಕ್ಕೆ ಸಂಬಂಧಪಟ್ಟಂಥಾದ್ದು, ಅವರು ತಂದಂಥ ಸಂದರ್ಭ ಅದನ್ನು ಬೇಕಾದರೆ ಹೇಳಲಿ. 50ವರ್ಷ 40 ವರ್ಷ ಎಂದು ಈ ವಿಚಾರದಲ್ಲಿ ಹೇಳಿಕೊಳ್ಳುತ್ತಾ ಕುಳಿತುಕೊಂಡರೆ ಇದು ಸರಿಯೇ?

(ಸಭೆಯಲ್ಲಿ ಅತೀವ ಗೊಂದಲ. ಅನೇಕ ಮಾನ್ಯ ಸದಸ್ಯರುಗಳು ಎರಡೂ ಕಡೆಯಲ್ಲಿ ಎದ್ದುನಿಂತು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು: ನಾನು ತಮ್ಮಲ್ಲಿ, ಮತ್ತೇನು ವಿನಂತಿ ಮಾಡಿಕೊಳ್ಳುತ್ತೇನೆ, ಎಂದರೆ, ಹೊಸ ಕಾರ್ಯಕ್ರಮ,' ಹೊಸನೀತಿ, ಜನರನ್ನು ಪ್ರಲೋಭನೆ ಮಾಡತಕ್ಕಂಥ ಯಾವುದೇ ಪ್ರಯತ್ನವನ್ನು, ಆಡಳಿತವನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡಿರತಕ್ಕಂಥವರು ಮಾಡಿದರೆ ಯಾವುದೇ ಮುಲಾಜು ಇಲ್ಲದೆ ಅವರಿಗೆ ಎಚ್ಚರಿಕೆ ಕೊಟ್ಟು ನಿಗ್ರಹಿಸುತ್ತೇನೆ. ಈಗ ರಾಜಕೀಯವಾಗಿ ಅವರು ಮಾತನಾಡುತ್ತಾ ಇರತಕ್ಕಂಥಾದ್ದಕ್ಕೆ ತಾವು ಉತ್ತರ ಕೊಡುವುದಕ್ಕೆ ತಮಗೆ ಅವಕಾಶ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಡಳಿತದ ಬಗ್ಗೆ ಮಾತನಾಡಿರಿ. ನೀವು ಮಾಡಿದ್ದರ ಬಗ್ಗೆ ಮಾತನಾಡಿರಿ. ಹಿಂದೆ ಐದು ವರ್ಷ ಇದ್ದರು, ಕೇಂದ್ರಸರ್ಕಾರ ಏನು ಮಾಡಿದರು, ಕಾಂಗ್ರೆಸ್ ಏನು ಮಾಡಿತು ಎಂದು ಅದನ್ನು ಇಲ್ಲಿ ಹೇಳುವುದಲ್ಲ. ಆ ಪ್ಲಾಟ್‌ಫಾರಮ್ ಅಲ್ಲ ಇದು. You are misusing the platform.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಅರ್ಥಮಾಡಿಕೊಳ್ಳಿ. ಮಾನ್ಯ ಸಭಾನಾಯಕರು ಎದ್ದು ನಿಂತಿದ್ದಾರೆ. ಒಂದುವೇಳೆ ಮಧ್ಯದಲ್ಲೇ ವಿವರಣೆ ಕೊಡಬೇಕಾಗಿದ್ದರೆ ನಾನು

ಕೊಡುತ್ತೇನೆ. ತಾವೆಲ್ಲರೂ ಎದ್ದುನಿಂತರೆ ನನಗೆ ಸ್ವಲ್ಪ ತೊಂದರೆ ಇದೆ. ನಾವು ಇಡೀ ಕಲಾಪವನ್ನು ಬೇಗ ಮುಗಿಸಿ, ನಾನು ಗೆಳೆಯ ಜಯರಾಮ್ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕಾಗಿದೆ. ದಯಮಾಡಿ ನಿಮ್ಮ ಸಹಕಾರವನ್ನು ಬಯಸುತ್ತಾ ಇದ್ದೇನೆ. You will be getting full opportunity to reply.

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದ ಅವಶ್ಯಕತೆ ಏನಿತ್ತು ಎಂದು ಹೇಳಿದ್ದು ನಾನು. ಈ ಅಧಿವೇಶನ ಸೇರಿ ನಾವು ಸರ್ಕಾರ ಮಾಡಿದ್ದನ್ನು ಹೇಳುವುದಕ್ಕೆ ಇನ್ನೂ ಒಂದು ಗಂಟೆ ನನಗೆ ಬೇಕಾಗುತ್ತದೆ. ಸರ್ಕಾರ ಮಾಡಿದ್ದನ್ನು ನಾನು ಹೇಳುವುದಿಲ್ಲ, ಅಥವಾ ಯಾವುದೇ ಹೊಸ ಪಾಲಿಸಿಯನ್ನು ಡಿಕ್ಲೇರ್ ಮಾಡುವುದಿಲ್ಲ. ಎಲೆಕ್ಷನ್ ಲಾ ನನಗೆ ಗೊತ್ತಿದೆ. ಈಗ ಏನೂ ಮಾಡಿಲ್ಲ, ಈ ಸರ್ಕಾರ ಎರಡು ವರ್ಷ ಏನೂ ಮಾಡಿಲ್ಲ. ಅವರೂ ಮಾಡುವ ಹಂತದಲ್ಲಿ ಅಂಥಾದ್ದನ್ನು ಏನೂ ಮಾಡಿಲ್ಲ. ಇಲ್ಲಿ ಮಾನ್ಯ ಖರ್ಗೆಯವರಿಗೆ ಒಂದು ಪುಸ್ತಕವನ್ನು ಕಳಿಸಿಕೊಡುತ್ತೇನೆ. ಅವರು ಸ್ವಲ್ಪ ನೋಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮತ್ತೊಂದು ಪುಸ್ತಕ ಹೇಗೆ ಇದೆ ಎಂದು ನೋಡುವುದಕ್ಕೆ ನಾನು ನಿಮಗೆ ಕೊಡುತ್ತೇನೆ.

ಅಧ್ಯಕ್ಷರು: ಅದನ್ನು ನನಗೆ ಕೊಡಿ...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರದ್ದು, ಇವರದ್ದು, ಬದಲಾವಣೆ ಮಾಡಿಕೊಂಡರೆ ಜನ ನಮ್ಮನ್ನು ನೋಡುತ್ತಿದ್ದಾರೆ. ಇವರು ಇಬ್ಬರದ್ದೂ ಕೈಬಿಟ್ಟು ನಮ್ಮ ವಿಚಾರವನ್ನು ಒಪ್ಪಿಕೊಂಡು ಇದು ಸ್ಟೇಬಲ್ ಗವರ್ನಮೆಂಟ್ ಎಂದು ಏನು ಹೇಳುತ್ತಿದ್ದಾರೆ ಅದನ್ನು ನಾವು ಒಪ್ಪುವುದಿಲ್ಲ. ಇದು ನಾಟಕ ಕಂಪನಿ ಎಂದು ಜನ ಹೇಳುತ್ತಿದ್ದಾರೆ.

ಅಧ್ಯಕ್ಷರು: ಈಗ ಯಡಿಯೂರಪ್ಪನವರಿಗೆ ಅನುಮಾನ, ನೀವಿಬ್ಬರೂ ಅಂದರೆ, ನೀವೂ ಖರ್ಗೆಯವರು ಒಂದಾಗಿದ್ದೀರಿ. ಎಂದು.

ಶ್ರೀ ಜೆ.ಹೆಚ್.ಪಟೇಲ್: ಇಲ್ಲ, ಹಾಗೆ ಒಂದಾಗುವುದಿದ್ದರೆ ಅದು ಕದ್ದುಮುಚ್ಚಿ ಏಕೆ ಆಗಬೇಕು? ನಾನು ಓದಿಕೊಂಡು ಹೋಗಿಬಿಡುತ್ತೇನೆ, ಯಾವುದನ್ನೂ ಎಕ್ಸ್‌ಪ್ಲೇನ್ ಮಾಡುವುದಿಲ್ಲ.

''ಹುಬ್ಬಳ್ಳಿ ಈದ್ಗಾ ಮೈದಾನ ವಿವಾದ ಪರಿಹಾರ- ಆಯಿತೊ ಇಲ್ಲವೋ? ಅಧಿಕಾರಕ್ಕೆ ಬಂದಕೂಡಲೇ ರೈತರ ಸುಸ್ತಿಬಡ್ಡಿ 136 ಕೋಟಿ ರೂಪಾಯಿ ಮನ್ನಾ, ಬಡವರಿಗೆ ಅಗ್ಗದ

ದರದಲ್ಲಿ ಆಹಾರ ಧಾನ್ಯ, ಪ್ರತಿವರ್ಷ ಸರ್ಕಾರದಿಂದ 120 ಕೋಟಿ ರೂಪಾಯಿ ವೆಚ್ಚ. ಅಧಿಕಾರ ವಿಕೇಂದ್ರೀಕರಣ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಚುನಾವಣೆ...

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಬೇರಯವರಿಗೆ ಹೇಗೆ ಗೊತ್ತಾಗುತ್ತದೆ?

ಶ್ರೀ ಜೆ.ಹೆಚ್.ಪಟೇಲ್: ಅವರಿಗೆ ನಾನು ಪುಸ್ತಕವನ್ನು ಕಳಿಸಿಕೊಡುತ್ತೇನೆ. ಇದರಲ್ಲಿ ಯಾವುದೇ ಒಂದು ಅಂಶವನ್ನು ನಾನು ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್: ನಮಗೂ ಒಂದು ಪುಸ್ತಕವನ್ನು ಕಳಿಸಿಕೊಟ್ಟು ಬಿಡಿ, ನಾವೇ ಓದಿಕೊಂಡುಬಿಡ್ತೀವಿ. ಏಕೆಂದರೆ ಜನ ಓದಿದವರು ಗ್ರಾಮಮಟ್ಟದಲ್ಲಿ ಇದರ ಫಲಿತಾಂಶವನ್ನು ಅವರಿಗೆ ಕೊಟ್ಟಿದ್ದಾರೆ. ಜೊತೆಗೆ ಇವರ ಸರ್ಕಾರದ ಸಾಧನೆಗೆಳನ್ನು ಹೇಳುವುದಕ್ಕಾಗಿ ರೆವಿನ್ಯೂ ಮಂತ್ರಿಗಳು, ಭಾರಿ ಕೈಗಾರಿಕಾ ಮಂತ್ರಿಗಳು ಈ ಸದನಕ್ಕೆ ವಿವರಣೆ ಕೊಟ್ಟರೆ ಸಾಕು. ಆಗ ಇವರ ಸಾಧನೆಗಳು ನಮಗೆ ಗೊತ್ತಾಗುತ್ತವೆ.

ಶ್ರೀ ಜೆ.ಹೆಚ್.ಪಟೇಲ್: ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಲ್ಲಿ ದುರ್ಬಲವರ್ಗದವರಿಗೆ ಮತ್ತು ಮಹಿಳೆಯರಿಗೆ ಸ್ಥಾನ ಮೀಸಲು. ಅದೂ ಈ ರಾಜ್ಯದಲ್ಲಿ ಮಾತ್ರ. ಇಡೀ ದೇಶದಲ್ಲಿ ಅಲ್ಲ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್: ದಯವಿಟ್ಟು ಮಾನ್ಯ ಅಧ್ಯಕ್ಷರೇ....

(ಗೊಂದಲ)

ಶ್ರೀ ಎಲ್.ಆರ್.ಶಿವರಾಮೇಗೌಡ: ನಿಮಗೆ ಅವಕಾಶ ಸಿಕ್ಕಿದಾಗ ಹೇಳಬಹುದಲ್ಲ. ಮೊದಲೇ ಏಕೆ ಹೇಳಬೇಕು? ನಿಮಗೆ ಅವಕಾಶ ಸಿಕ್ಕಿದಾಗ ಹೇಳಿ.

ಶ್ರೀ ಜೆ.ಹೆಚ್.ಪಟೇಲ್: ಜಿಲ್ಲಾ ಪುನರ್ ವಿಂಗಡಣೆ-ಏಳು ಹೊಸ ಜಿಲ್ಲೆಗಳ ಕಾರ್ಯಾರಂಭ-ನೀರಾವರಿಗೆ ಅಧಿಕ ಆದ್ಯತೆ-ನೂರು ವರ್ಷಗಳಲ್ಲಿ...

ಅಧ್ಯಕ್ಷರು: ರಮಾನಾಥರೈಅವರೇ, ನೀವು ಮಂತ್ರಿಯಾಗಿ ಕೆಲಸ ಮಾಡಿದವರು. ಅವರು Leader of the House. ನೀವು ಕುಳಿತಲ್ಲಿಂದಲೇ ವ್ಯಾಖ್ಯಾನ ಮಾಡುವುದಾದರೆ ನಾನು ಅದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಕ್ಕೆ ಬರುವುದಿಲ್ಲ. ದಯಮಾಡಿ ತಮ್ಮೆಲ್ಲರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಿಮ್ಮದೊಂದು ಅಧಿಕೃತ ಮಾನ್ಯತೆ ಪಡೆದಂಥ ವಿರೋಧ ಪಕ್ಷ. ತಮ್ಮ ನಾಯಕರು, ಉಪನಾಯಕರು ಇತರ ಪ್ರಮುಖರೆಲ್ಲ ಇಲ್ಲಿ ಕುಳಿತಿದ್ದಾರೆ. ಇದಕ್ಕೆಲ್ಲಾ ಉತ್ತರ ಕೊಡತಕ್ಕಂಥ ಶಕ್ತಿ ಅವರಿಗೆ

ಇದೆ. ನಾನು ಅವಕಾಶ ಕೊಡುತ್ತೇನೆ. ತಾವೆಲ್ಲರೂ ಕುಳಿತಲ್ಲಿಂದಲೇ ಸಭೆ ನಡೆಸಿದರೆ ನಾನು ಸಭೆಯನ್ನು ನಿಗ್ರಹಿಸುವುದು ಕಷ್ಟವಾಗುತ್ತದೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ಈ ಕಡೆ ಕೂಡ ಅಷ್ಟೆ, ಕೆಲವರು... ಕೃಷ್ಣಮೂರ್ತಿಯವರೆ, ನೀವೆಲ್ಲರೂ ಅತ್ಯುತ್ಸಾಹದಿಂದ ಏನೂ ಮಾಡಬೇಕಾಗಿಲ್ಲ. ದಯಮಾಡಿ ಸಹಕರಿಸಿ.

ಶ್ರೀ ಜೆ.ಹೆಚ್.ಪಟೇಲ್: ನೀರಾವರಿಗೆ ಅಧಿಕ ಆದ್ಯತೆ- ಮೂರು ವರ್ಷಗಳಲ್ಲಿ; 3,089 ಕೋಟಿ ರೂಪಾಯಿ ವೆಚ್ಚ. ಶಿಕ್ಷಣಕ್ಕೆ ಮೂರು ವರ್ಷಗಳಲ್ಲಿ 50 ಸಾವಿರ ಶಿಕ್ಷಕರ ನೇಮಕ, ಈ ವರ್ಷದ್ದೂ ಸೇರಿ. ಪ್ರಾಥಮಿಕ ಆರೋಗ್ಯಕ್ಕೆ ಆದ್ಯತೆ - 800 ವೈದ್ಯರ ನೇಮಕ. ವಿದ್ಯುತ್ ಸ್ಥಾಪಿತ ಸಾಮರ್ಥ್ಯವನ್ನು 3,200 ಮೆಗಾವ್ಯಾಟ್‌ನಿಂದ 7,500 ಮೆಗಾವ್ಯಾಟ್‌ಗೆ ಹೆಚ್ಚಿಸಲು ಕ್ರಮ. ಕೈಗಾರಿಕೆ - 56 ಸಾವಿರ ಕೋಟಿಗಳಷ್ಟು ಬಂಡವಾಳ ಆಕರ್ಷಣೆ. ನಿರ್ಮಲ ಗ್ರಾಮ- ಮೂರೂವರೆ ಲಕ್ಷ ಶೌಚಾಲಯಗಳ ನಿರ್ಮಾಣ. ಸ್ವಸ್ತಿಗ್ರಾಮ- ನೂರು ಗ್ರಾಮಗಳಲ್ಲಿ ಕಾರ್ಯಕ್ರಮ ಜಾರಿ, ಗಂಗಾ ಕಲ್ಯಾಣ - 8,900 ಕೊಳವೆಬಾವಿಗಳ ನಿರ್ಮಾಣ. ವಸತಿ - ಒಂದು ಲಕ್ಷದ ಅರವತ್ತೈದು ಸಾವಿರ ಮನೆಗಳ ನಿರ್ಮಾಣ ಮತ್ತು ಎರಡು ಲಕ್ಷ ನಿವೇಶನಗಳ ಹಂಚಿಕೆ. ರೈತರಿಗೆ, 2,090 ಕೋಟಿ ರೂಪಾಯಿ ಸಾಲ ಹಂಚಿಕೆ. ಕುಡಿಯುವ ನೀರು - 4,270 ಯೋಜನೆಗಳು ಪೂರ್ಣ, 22,454 ಕೊಳವೆ ಬಾವಿಗಳ ನಿರ್ಮಾಣ. ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 280 ಹಾಸ್ಟೆಲ್‌ಗಳ ಪ್ರಾರಂಭ. ಉತ್ತಮ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕೆ.ಎಸ್.ಆರ್.ಟಿ.ಸಿ. ವಿಭಜನೆ; ಮೂರು ಸ್ವಾಯತ್ತ ಸಾರಿಗೆ ನಿಗಮ ಸ್ಥಾಪನೆ, ನಾಲ್ಕು ಸಾವಿರ ಬಸ್ಸುಗಳ ಸೇರ್ಪಡೆ. ವಿಶೇಷ ಘಟಕ ಯೋಜನೆಯಲ್ಲಿ ಮತ್ತು ಗುಡ್ಡಗಾಡು ಉಪಯೋಜನೆಯಲ್ಲಿ ಹಣವನ್ನು ವಿವಿಧ ಇಲಾಖೆಗಳಿಂದ ಒಗ್ಗೂಡಿಸಿ ಮೊದಲಬಾರಿಗೆ ಸಮಾಜಕಲ್ಯಾಣ ಇಲಾಖೆಯ ಮೂಲಕ ಪರಿಶಿಷ್ಟರಿಗಾಗಿ ವಸತಿ, ಶಿಕ್ಷಣ ಮತ್ತು ನೀರಾವರಿ ಯೋಜನೆ ಜಾರಿ. ರಾಷ್ಟ್ರದಲ್ಲೇ ಮೊದಲಬಾರಿಗೆ ಮೂಲಭೂತ ಸೌಲಭ್ಯ ಸೃಷ್ಟಿಸಲು ಪ್ರತ್ಯೇಕ ಇಲಾಖೆ ಸ್ಥಾಪನೆ, ಓವರ್ ಡ್ರಾಫ್ಟ್ ಪಡೆಯದ ಹೆಗ್ಗಳಿಕೆ, ಶಿಕ್ಷಕರು, ವೈದ್ಯರು, ಗೆಜೆಟೆಡ್ ಅಧಿಕಾರಿಗಳು ಹಾಗೂ ಗ್ರೂಪ್- ಸಿ ವರ್ಗದವರು ಸೇರಿ ಸುಮಾರು 80 ಸಾವಿರ ಮಂದಿ ನೇಮಕ. 1997-98ನೇ ಸಾಲಿಗೆ 4,545 ಕೋಟಿ ರೂಪಾಯಿ ನಿಗದಿ, ಪ್ರತಿ ವ್ಯಕ್ತಿಗೆ 924 ರೂಪಾಯಿ ಖರ್ಚು; 1994-95ರಲ್ಲಿ 717 ರೂಪಾಯಿ, 1995-96ನಲ್ಲಿ 784 ರೂಪಾಯಿ, 1996-97ರಲ್ಲಿ 897 ರೂಪಾಯಿ. ನೂತನ ಕೃಷಿ ನೀತಿ, ವಿದ್ಯುತ್ ನೀತಿ, ಕೈಗಾರಿಕಾ ನೀತಿ, ಪ್ರವಾಸೋದ್ಯಮ ನೀತಿ ಜಾರಿ. ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನೆ. ನಾವು ಏನೂ ಮಾಡಿಲ್ಲ ಎಂದು ಹೇಳಿದರು. ಏನೂ ಮಾಡಿಲ್ಲವೆಂದರೆ, ಇಲ್ಲ ಕಣ್ಣಿದ್ದೂ ಕುರುಡರಾಗಿರಬೇಕು, ಇಲ್ಲ ಕಂಡೂ ಹೇಳದ ಹಾಗೆ ಸುಮ್ಮನಿರಬೇಕು. ಯಾವುದಾದರೂ ಒಂದು ಆಗಿರಬೇಕು. ಆದರೆ, ಅವರಿಗೆ ಆ ಕಣ್ಣೂ ಇಲ್ಲ, ಬುದ್ಧಿಯೂ ಇಲ್ಲ. ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದವರು ನಾವು ಮಾಡಿರುವ ಕೆಲಸದಲ್ಲಿ ದೋಷವನ್ನು ಕಂಡು,

ಸರಿಪಡಿಸುವುದಕ್ಕೆ ಹೇಳಿದರೆ ನಮ್ಮದೇನೂ ಅಭ್ಯಂತರವಿಲ್ಲ, ನಾವು ಅದನ್ನು ತಿದ್ದಿಕೊಳ್ಳುತ್ತೇವೆ. ಆದರೆ, ಕೆಲಸ ಆಗಿರುವುದನ್ನೂ ಆಗಿಲ್ಲವೆಂದು ಹೇಳುತ್ತಾರೆ. ಮಾನ್ಯ ನಂಜೇಗೌಡರೇ, ಈಗ ಈ ವಿಶ್ವಾಸಮತ ಕೇಳಿರುವುದು ಏಕೆ? ಜನರ ಎದುರಿನಲ್ಲಿ ತಾವುಗಳು ಸೃಷ್ಟಿ ಮಾಡಿದ ಗೊಂದಲ ಏನಿದೆ, ಸರ್ಕಾರ ಬಿದ್ದು ಹೋಗುತ್ತದೆ, ಸರ್ಕಾರದ ಬಿದ್ದುಹೋಗುತ್ತದೆ ಎಂಬುದು. ಆದರೆ, ಸರ್ಕಾರ ಎಲ್ಲಿ ಬೀಳುತ್ತದೆ? ಬಿದ್ದರೆ ಇಲ್ಲಿತಾನೇ ಬೀಳಬೇಕು. ಇದಕ್ಕಿಂತ ಸರ್ವಶ್ರೇಷ್ಠವಾದ ಸದನ ಯಾವುದಿದೆ? ಸರ್ಕಾರ ಬೀಳಿಸುವುದಕ್ಕೆ ತಾಕತ್ತು ಇದ್ದರೆ, ಇಲ್ಲಿ ಬೀಳಿಸಲಿ; ಹೊರಗೆ ಅಲ್ಲ. ಸದನವನ್ನು ವಿಸರ್ಜನೆ ಮಾಡಬೇಕೆಂದು ಕೇಳುತ್ತಾರೆ. ಅದು ಸರಿಯೇ? ಸದನವನ್ನು ವಿಸರ್ಜನೆ ಮಾಡಬೇಕಾದರೆ, ದೇಶದಲ್ಲಿ ಆ ಅಸ್ಥಿರತೆಯನ್ನು ಉಂಟು ಮಾಡಿರುವವರು ಯಾರು? ನಾವೆಲ್ಲರೂ ಇದಕ್ಕೆ ಕಾರಣರು. ಅದಕ್ಕೆ ಅಡಿಗರು ಒಂದುಕಡೆ ಬಹಳ ಚೆನ್ನಾಗಿ ಹೇಳಿದ್ದಾರೆ. ದೊಂಬರು ಎಂದು, ಎಂತಹ ದೊಂಬರು? ಮಹಾಪುರುಷರು ಉಪವಾಸದ ಸಮ್ಮುಹಿಡಿದು, ತೃಪ್ತಿ ತೇಗು ಬರಿಸಬಹುದು. ಪಾಪ, ಅವನು ಉಪವಾಸವಿದ್ದು ತೇಗಿದರೆ, ಉಂಡಿದ್ದಾನೆ ಅದಕ್ಕಾಗಿ ತೇಗುತ್ತಾನೆ ಎಂದು ಹೇಳಿದವರು. ಉಪವಾಸದ ಸಮ್ಮುಹಿಡಿದು ತೃಪ್ತಿ ತೇಗು ಬರಿಸುವವರು, ಸಾಲ ಮಾಡಿ ತುಪ್ಪ ತಿಂದು ನಿಮ್ಮ ಮೂತಿಗೆ ಒರೆಸುವವರು. ಯೋಜನೆಯ ಯಜ್ಞದಲ್ಲಿ ವಪೆಯ ರುಚಿಯ ಕಂಡವರು. ಕಾನೂನಿನ ಗಾಣದಿಂದ ಮರಳಿ ಎಣ್ಣೆ ತೆಗೆದವರು. ಕತ್ತೆ, ಕುದುರೆಯಾಗುವಂತೆ, ಹುಲಿ ಹೊಟ್ಟನ್ನು ಉಣ್ಣುವಂತೆ, ನೆಲವೇ ನಾಕವಾಗುವಂತೆ, ನಾಯಿಬಾಲ ನಿಗುರುವಂತೆ ಮಾಡಬಲ್ಲ ಈ ದೊಂಬರು. ಯಾರು ಇವರು? ಯಾರು ಎಷ್ಟು ವರ್ಷ ಆಳಿದರು? ನಾನು ಹೇಳಿದ ತಕ್ಷಣ, ಅದನ್ನು ಅರ್ಥ ಮಾಡಿಕೊಳ್ಳದೆ, ನಾನು ಯಾರಿಗೆ ಹೇಳಿದೆ, ನಾನು ಅಂತಹ ಅವಮಾನದ ಮಾತುಗಳನ್ನು ಆಡಿದ್ದಲ್ಲ. ಈ ಅರ್ಥದಲ್ಲಿ, ಈ ದೇಶವನ್ನು ಇಷ್ಟುವರ್ಷ ಆಳಿ, ಈ ಸ್ಥಿತಿಗೆ ತಂದಿದ್ದೇವೆ, ಅದನ್ನು ವಿಚಾರ ಮಾಡುವುದನ್ನು ಬಿಟ್ಟು, ನಾವೇನೂ ಮಾಡಿಲ್ಲವೆಂದು ಹೇಳುತ್ತಾರೆ. ನಾವು ಮಾಡಿದ್ದೇವೆ ಅಂದರೆ ಇದು ವಸ್ತುಸ್ಥಿತಿಯಲ್ಲಿ ನಾವು ಎಲ್ಲಾ ಇಲಾಖೆಗಳಲ್ಲಿ ಕೆಲಸ ಮಾಡಿ ತೋರಿಸಿರುವುದು; ಇಲ್ಲಿಗೆ ಎಲ್ಲಾ ಕೆಲಸ ಮುಗಿದುಹೋಯಿತು ಎಂದು ನಾನು ಹೇಳುವುದಿಲ್ಲ, ಇನ್ನೂ ಮಾಡಬೇಕಾದ ಕೆಲಸ ಇದೆ. ಕೆಲಸ ಇರುವುದಕ್ಕೇ ನಾವು ಇನ್ನೂ ಎರಡು ವರ್ಷ ಇರುತ್ತೇವೆ. ಅದಕ್ಕೆಲ್ಲಾ ಸರಿಯಾದ ಹಣಕಾಸಿನ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಮತ್ತೆ ರಾಜಕೀಯವಾಗಿ ನಾವು ಈ ರೀತಿ ದೊಂಬರಾಟ ಮಾಡಬಾರದು. ಜನರ ಮನಸ್ಸನ್ನು ಕಲಕಬಾರದು. ನಾವು ಇವತ್ತು ಏನಾದರೂ ರಾಷ್ಟ್ರಕ್ಕೆ, ನಾಡಿಗೆ ಸೇವೆ ಮಾಡಬೇಕೆಂದರೆ ನಿಜವಾದುದನ್ನೇ ಹೇಳೋಣ. ಆಕಸ್ಮಾತ್ ತಪ್ಪಾಗಿದ್ದರೆ, ನಾವು ಅದನ್ನು ಒಪ್ಪಿಕೊಂಡುಬಿಡುತ್ತೇವೆ. ನಾವು ಅದರ ಬಗ್ಗೆ ಹಠ ಮಾಡಿ, ವಾದ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಲೋಕಸಭಾ ಚುನಾವಣೆ ಪ್ರಕಟವಾದ ಮೇಲೆ, ನೀವು ರಾಜೀನಾಮೆ ಕೊಡಿ, ಸರ್ಕಾರ ಉಳಿಯುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ನಾವು ಎಲ್ಲಿ ಹೇಳಬೇಕು? Where should I show

my strength? This is the place. ನಾನು ಲೆಜಿಟಿಮೇಟ್ ಪ್ಲೇಸಿಗೆ ಬಂದು ಯಾವ ಕೋರಂಗೆ ಬರಬೇಕೋ ಆ ಕೋರಂಗೆ ಬರದೇ ಇದ್ದಿದ್ದರೆ, ನೀವು ಆವಾಗ ಹೇಳಬೇಕಾಗಿತ್ತು. ನೋಡಿ ಅವರಿಗೆ ಧೈರ್ಯ ಇಲ್ಲ ಅಸೆಂಬ್ಲಿ ಕರೆಯುವುದಕ್ಕೆ ಎಂದು. ಆವಾಗ ನೀವು ಹೇಳಿದ್ದರೆ, ನಾನು ಒಪ್ಪಿಕೊಳ್ಳುತ್ತಿದ್ದೆ. ಅದಕ್ಕೆ ಇದು ಅಖಾಡ. ಕುಸ್ತಿಯನ್ನು ಬಚ್ಚಲು ಮನೆಯಲ್ಲಿ ಮಾಡುತ್ತಾರೆಯೇ? ಕುಸ್ತಿಯನ್ನು ಆಡುವುದು ಅಖಾಡದಲ್ಲಿಯೇ. ಅದಕ್ಕೆ ಇದನ್ನು ಅಖಾಡ ಎಂದು ಕರೆದಿದ್ದು. ಇನ್ನೊಂದು, ಸರ್ಕಾರ ನಡೆಸತಕ್ಕಂಥವರು, ಅಂತಹ ಅಳುಕು ನಮಗಿದ್ದರೆ, ಬಿದ್ದುಹೋಗುತ್ತದೆ, ನಮ್ಮ ಪಾರ್ಟಿ ಹೋಗುತ್ತದೆ ಎಂದು ಆಗ ನಾವು ನಮ್ಮ ಪಾರ್ಟಿ ಶಾಸಕರನ್ನೇ ಕರೆದು ಮೀಟಿಂಗ್ ಮಾಡುತ್ತಿದ್ದೆವು. ನಾನು ಅದಕ್ಕೆ ಎಲ್ಲಾ ಶಾಸಕರ ಎದುರಿನಲ್ಲೇ ತೀರ್ಮಾನ ಆಗಲಿ ಎಂದು ಅಸೆಂಬ್ಲಿ ಕರೆದಿದ್ದೇವೆ. ಇರಬಹುದು, ನಮ್ಮ ಮನೆಯಲ್ಲಿ ಕೆಲವರಿಗೆ ತೊಂದರೆಯಾಗಿರಬಹುದು. ಕೆಲವರು ಮುನಿಸಿಕೊಂಡಿರಬಹುದು ಅಥವಾ ಮತ್ತೊಂದು ಏನೋ ಆಗಿರಬಹುದು. ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಬಗ್ಗೆ ನೀವು ಯಾರಾದರೂ, ಏನಾದರೂ ಹೇಳಿಕೊಳ್ಳಬಹುದು. ಆದರೆ, ನಾವು ಹೇಳುವುದಿಲ್ಲ. ನಮ್ಮ ಪಾರ್ಟಿಯವರೂ ಹೇಳುವುದಿಲ್ಲ. ಅದು ಅವರಿಗೆ ಬಿಟ್ಟಿದ್ದು. ಆದರೆ, ಸರ್ಕಾರದ ಕಾರ್ಯಕ್ರಮ, ಸರ್ಕಾರ ಮಾಡಿರತಕ್ಕ ಕಾರ್ಯಕ್ರಮವನ್ನು ಇದಕ್ಕೆ ಏಕೆ ಹೋಲಿಸುವುದಕ್ಕೆ ಹೋಗುತ್ತೀರಿ. ಏನೋ ಕಾರಣಕ್ಕೆ ಆಗಿರುವುದನ್ನು ಸರ್ಕಾರದ ನೀತಿಯನ್ನು, ಸರ್ಕಾರದ ಸ್ಥಿರತೆಯನ್ನು ಹೇಳುತ್ತಾರೆ. ಆಮೇಲೆ, ಸ್ಥಿರ ಸರ್ಕಾರ ಎಂದರೆ, ಸರ್ಕಾರ ಸ್ಥಿರ ಆಗುತ್ತಾ, ಸಮಾಜ ದುರ್ಬಲವಾಗುತ್ತಾ ಹೋಗುವುದಲ್ಲ. The concept of a stable Government ಏನೆಂದರೆ, ಯಾವಾಗ ಒಂದು ಸಮಾಜ, ಒಂದು ರಾಷ್ಟ್ರ ಸಬಲವಾಗುತ್ತದೆ ಆವಾಗ ಸರ್ಕಾರ ಬರುತ್ತವೆ, ಹೋಗುತ್ತವೆ, ಯಾರೂ ನೋಟೀಸ್ ಮಾಡುವುದಿಲ್ಲ. That is what is happening in Japan now, that is what is happening in France now, that is what is happening in Italy recently, ಯಾವ ದೇಶ ಸಮರ್ಥವಾಗುತ್ತದೆ, ಆರ್ಥಿಕವಾಗಿ ಸದೃಢತೆಯನ್ನು ಹೊಂದುತ್ತದೆ ಅದನ್ನು ನಾನು ಒಪ್ಪುತ್ತೇನೆ. ಆರ್ಥಿಕವಾಗಿ ಸದೃಢತೆ, economic stability, social stability, social justice ಅದನ್ನು ಮಾಡಬೇಕು. ಅದು ಮಾಡದೇ, ಸ್ಥಿರ ಸರ್ಕಾರ ಇದು ಅಂದರೆ, ಈ ಸ್ಥಿರ ಸರ್ಕಾರದಿಂದ ಏನಾಗಿದೆ? ಈ ದೇಶದಲ್ಲಿ ಇವತ್ತು ಸ್ಥಿರ ಸರ್ಕಾರಗಳಿಂದ ಏನಾಗಿದೆ? ಅದೇ ಅಸ್ಥಿರವಾಗಿ ಬಂದವಲ್ಲ, ನಾಲ್ಕು ಸರ್ಕಾರಗಳು. ಮುರಾರ್ಜಿದೇಸಾಯಿ ಸರ್ಕಾರದಿಂದ, ಅಥವಾ ದೇವೇಗೌಡರ ಸರ್ಕಾರದಿಂದ ದೇಶಕ್ಕೆ ಏನಾಗಿದೆ? ಸ್ವಲ್ಪ ನಿರ್ಮಲವಾದ ಮನಸ್ಸಿನಿಂದ ಅದನ್ನು ಹೋಲಿಸಿ ನೋಡಿ. ನೀವು ಹೇಳಿದಹಾಗೆ ಲೋಕಸಭಾ ಚುನಾವಣೆಯ ಪಬ್ಲಿಕ್ ಮೀಟಿಂಗ್‌ನಲ್ಲಿ ಮಾತನಾಡುತ್ತೇನೆ. ಆದರೆ, ಈ ಸದನದಲ್ಲಿ ನಾವು ಇವತ್ತು ಸೇರಿರುವುದು, ನೀವು ಹೇಳುವುದಕ್ಕೆ. ನೀವು ಹೊರಗಡೆ

ಬರೀ ಬೆದರುಬೊಂಬೆ ತೋರಿಸಿದರೆ, ನಾವು ಹೆದರುವುದಿಲ್ಲ. ಜನರ ಹತ್ತಿರ ಹೋಗುತ್ತೇವೆ, ಜನರ ಮೆಚ್ಚುಗೆ ಏನಾಗುತ್ತದೆ, ಅದಾದ ಮೇಲೆ ನೀವು ಭವಿಷ್ಯ ಹೇಳುವುದು ಹೇಳಿ. ಅದೇನಾಗುತ್ತದೆ ನೋಡೋಣ ಯಾರು ಯಾರು ಇರುತ್ತಾರೋ, ಯಾರು ಯಾರು ಹೋಗಿಯೇಬಿಡುತ್ತಾರೋ ಏನೇನಾಗುತ್ತದೋ ನೋಡೋಣ. ಆ ವಿಶ್ವಾಸವೂ ನಮಗೆ ಇದೆ. ಆ ವಿಶ್ವಾಸಕ್ಕೆ, ನಮ್ಮ ದೇಶದ ಒಂದು ಕ್ಲಾಸ್ ಇದೆ. The class is described as "In every country the intellectual call is the most influential class if not the governng class. The intellectual class is the class which can forsee. It is the class which can advise and give relief. In no country does the mass of the people live the life of intellectual thought and action. It is largely imitative and follow the intellectual class. There is no exaggeration in saying that the entire destiny of any country depends upon this intellectual class. If the intellectual class is honest, independent and dis-interested, it can be trusted to take the initiative and give a proper lead when the crisis arises. It is true that intellect by itself is no virtue. It is only a means and the use of means depends upon the ends which are on the intellectual person pursued. An intellectual man can be a good man but he can easily be a rogue" ಇದು ಅಂಬೇಡ್ಕರ್‌ರವರು ಹೇಳಿರುವುದು. ಅವರು ಕೊನೆಗೆ ಏನು ಹೇಳುತ್ತಾರೆಂದರೆ, "An intellectual man can be a good man but he can easily be a rogue. Similarly an intellectual class may be a band of household persons ready to help, ready to emancipate erring humanity or it can easily be a gang of crooks or a body of advocates of a narrow cliff from which it draws support." This is exactly the position where we are ಇದನ್ನು, ಇವತ್ತು ಎಲ್ಲರೂ ತಿಳಿದುಕೊಂಡು ಬರಬೇಕು. ಅವರು ಇದು ಮಾಡಿಲ್ಲ, ಅದು ಮಾಡಿಲ್ಲವೆಂದು ಹೇಳಿ, ದೋಷ ಹುಡುಕುವುದರಲ್ಲಿ ಅವರು ಬಹಳ ಜಾಣರು. ದೇಶ ಇವತ್ತು ಏನಾದರೂ ಪರವಾಗಿಲ್ಲ. ಅದರ ಶವದ ಮೇಲೆ ನಾವು ಇವತ್ತು ಡ್ಯಾನ್ಸ್ ಮಾಡುತ್ತಾ ಇದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೃಷ್ಣಾ ಕಾಮಗಾರಿ ಯೋಜನೆಯಲ್ಲಿ

ಲೂಟಿಯಾಗಿರುವ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕೆಂದು ಮಾನ್ಯ ಶ್ರೀ ಜಾಲಪ್ಪನವರು ಹೇಳಿದ್ದಾರೆ, ಅದನ್ನು ತಮ್ಮ ಪಟ್ಟಿಯಲ್ಲಿ ಹೇಳಬೇಕು. ಪಟ್ಟಿ ನನ್ನ ಹತ್ತಿರ ಇದೆ, ಬೇಕಾದರೆ ಕಳುಹಿಸಿಕೊಡುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್: ದಿವಂಗತ ಶ್ರೀ ಗೋಪಾಲಕೃಷ್ಣ ಅಡಿಗರು ನಮಗೆ ಯಾವ ರೀತಿ ಭಾವನೆ ಇರಬೇಕೆಂಬುದರ ಬಗ್ಗೆ ಈ ರೀತಿ ಹೇಳುತ್ತಾರೆ:

''ಕಟ್ಟುವೆವು ನಾವು,
ಹೊಸ ನಾಡೊಂದನ್ನು ರಸದ ಬೀಡೊಂದನ್ನು
ಹೊಸ ನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ
ಹರೆಯದಿ ಮಾಂತ್ರಿಕನ ಮಾಟ ಮುಸುಳುವ ಮುನ್ನ
ಉತ್ಸಾಹ ಸಾಹಸದ ಉತ್ತುಂಗ ಬೀಚುಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನ್ನು

ಜಾತಿ, ಮತ ಭೇದಗಳ ಕಂದಕವು ಸುತ್ತಲೂ
ದುರ್ಭೇದ್ಯವೆನೆ ಕೋಟೆಗಳು ಕೊತ್ತಲು
ರೂಢಿ ರಾಕ್ಷಸನ ಅಸುರುಗ್ರೈಯುವ
ತೋಳ್ ತಟ್ಟಿ, ತೊಡೆತಟ್ಟಿ ಕರೆಯುವನು ಸಂಗ್ರಾಮಕೆ
ಕೋಟೆ ಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು
ನಮ್ಮ ಸಾವು, ನೋವು ಹೊಸ ನಾಡ ತೊಟ್ಟಿಲು

ಆದಾವು ಅಂಜುವೆದೆ ನಮ್ಮದಲ್ಲ
ಸೋಲುವೆದೆ ವೀರನಿಗೆ ಸಲ್ಲ ಬಲ್ಲ
ಇರುವುದೆಲ್ಲವನು ಎಲ್ಲಾ ಜನಕೆ ತೆರವಾಗಿಸುವ
ಸಮ ಬಗೆಯ ಸಮಸುಖದ, ಸಮದುಃಖದ
ಸಾಮರಸ್ಯದ ಸಾಮಾಗಾನ ಲಹರಿಯಮೇಲೆ
ತೇಲಿ ಬರಲಿದೆ ನೋಡು ನಮ್ಮ ನಾಡು

ಕೊಟ್ಟೆವಿದೆಯೋ ವೀಳ್ಯೆವ ನಿಮ್ಮೆಲ್ಲರನು
ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನ್ನು

ಇದಕ್ಕೆ ಈಗ ನೀವು ಏನು ಹೇಳುತ್ತೀರಿ ಹೇಳಿ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಡಿ.ವಿ.ಜಿ.ರವರ ಒಂದು ಕವನ

ನೆನಪಿಗೆ ಬರುತ್ತದೆ, ಅದನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಜ್ಞಾಪಿಸುತ್ತೇನೆ.

''ಸರಕಾರ ಹರಿಗೋಲು ತೆರೆಸುಳಿಗಳು ಅತ್ತಿತ್ತ
ಸುರೆ ಕುಡಿದವರು ಕೆಲವರು ಹುಟ್ಟುಹಾಕುವರು
ಜನವೆದ್ದು ಕುಣಿಯುವುದು ಬಿರುಗಾಳಿ ಬೀಸುವುದು
ಮುಳುಗುವುದೇನಚ್ಚರಿಯೋ ಮಂಕುತಿಮ್ಮ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ರೂಲ್ 159ರ ಕೆಳಗೆ ತಂದಿರುವ ಈ ನಿಲುವಳಿ ಸೂಚನೆಯನ್ನು ನಾನು ವಿರೋಧಿಸುತ್ತಾ, ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ಯಾವ ಉದ್ದೇಶಕ್ಕಾಗಿ ಈ ಸದನವನ್ನು ಕರೆದಿದ್ದಾರೆ ಎನ್ನತಕ್ಕಂಥದ್ದನ್ನು ಗಂಭೀರವಾಗಿ ಆಲೋಚನೆ ಮಾಡಿ ತಾವು ಜನರ ಮನಸ್ಸಿಗೆ ಹಿಡಿಸತಕ್ಕ ರೀತಿಯಲ್ಲಿ ಮತ್ತು ಈ ಸದನದ ಮುಖಾಂತರ ಯಾವ ರಾಜ್ಯ ಮತ್ತು ರಾಷ್ಟ್ರದ ಜನತೆಗೆ ಏನಾದರೊಂದು ಹೊಸ ಸಂದೇಶವನ್ನು ನೀಡಿ ಒಂದು ಪರಿಸ್ಥಿತಿಯಲ್ಲಿ ಅವರು ವಿಶ್ವಾಸ ಮತ ಕೇಳುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಅವರು ತಮ್ಮ ಇಡೀ 30-40 ನಿಮಿಷ ಭಾಷಣದಲ್ಲಿ ಯಥಾ ಪ್ರಕಾರ ಫಿಲಾಸಫಿ, ಹಾಸ್ಯ ಮತ್ತು ವಿಷಯದ ಗಂಭೀರತೆಯನ್ನು ತೆಗೆದು ಹಾಕುವಂತಹ ರೀತಿಯಲ್ಲಿ ಮಾತನಾಡಿ ಸದಸ್ಯರ ಮನಸ್ಸನ್ನು ಒಲಿಸಿಕೊಳ್ಳುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಇವತ್ತು ಸದನವನ್ನು ಕರೆಯತಕ್ಕಂಥ ಅವಶ್ಯಕತೆ, ಭ್ರಮೆ ಏಕೆ ಬಂತೆಂದು ನಾವು ಬೇಸಿಕ್ಕಾಗಿ ಕೇಳಿದ್ದೇವೆ. ಇದು ನಿಮ್ಮ ಒಳ ಜಗಳದಿಂದ ಇರಬಹುದು. ವಿರೋಧಪಕ್ಷದವರು ನಿಮ್ಮ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಿ ಎಂದು ಕೇಳಿದ ತಕ್ಷಣವೇ ನೀವು ಎಷ್ಟು ಸಲ ಈ ರೀತಿ ಸದನವನ್ನು ಕರೆದಿದ್ದೀರಿ? ಅನೇಕ ಸಲ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಕೇಳಿರಬಹುದು, ತಮ್ಮ 3 ವರ್ಷದ ಅವಧಿಯಲ್ಲಿ ಎಷ್ಟು ಸಲ ಅವರ ಮಾತಿಗೆ ಮನ್ನಣೆ ಕೊಟ್ಟು ಅಥವಾ ಪತ್ರಿಕೆಯ ಹೇಳಿಕೆಗೆ ಮನ್ನಣೆ ಕೊಟ್ಟು, ರೇಡಿಯೋಗೆ ಮನ್ನಣೆ ಕೊಟ್ಟಿದ್ದೀರಿ?

ಶ್ರೀ ಜೆ.ಹೆಚ್.ಪಟೇಲ್: ಎಷ್ಟೋ ಸಾರಿ ಕೇಳಿದಾಗ ನಾವು ಮನ್ನಣೆ ಕೊಟ್ಟಿರಲಿಲ್ಲ, ಆದರೆ ಈ ಸಾರಿ ಕೊಡೋಣ ಎಂದುಕೊಂಡಿದ್ದೆವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಸಾರಿ ಏಕೆ ಕೊಟ್ಟಿದ್ದೀರಿ ಎಂದರೆ, ನಿಮ್ಮ ಸಮಾಧಿ ಮಾಡಲು ಹೊರಟಿದ್ದಾರಲ್ಲಾ, ಅದಕ್ಕೋಸ್ಕರ ಸ್ವಲ್ಪ ಉಸಿರಾಡಬೇಕೆಂಬ ದೃಷ್ಟಿಯಿಂದ ಎಚ್ಚೆತ್ತಿದ್ದೀರೇ ಹೊರತಾಗಿ, ಬಾಕಿ ದೃಷ್ಟಿಯಿಂದಲ್ಲ. ಇವತ್ತು ಒಂದು ಕಾರಣ ಇದೆ, ನೀವು ರಾಷ್ಟ್ರದ ಬಗ್ಗೆ ಎಷ್ಟೇ ಚಿಂತನೆ ಮಾಡತಕ್ಕಂಥ ಒಂದು ಮಾತನ್ನು ಹೇಳಿದರೂ ಕೂಡ ಅಥವಾ ನಿಮ್ಮ ಇಡೀ ಫಿಲಾಸಫಿಯಲ್ಲಿ ಡಾ॥ ಅಂಬೇಡ್ಕರ್ ಮತ್ತು

ಶ್ರೀ ಗುಂಡಪ್ಪ ಮತ್ತು ಶ್ರೀ ಅಡಿಗರವರು ಮತ್ತು ಇನ್ನಿತರ ತತ್ವಜ್ಞಾನಿಗಳೆಲ್ಲಾ ಹೇಳಿರುವ ಸಾರ ಏನೆಂದರೆ ಯಾವಾಗ ವಿಷಯಗಳು ಇರುವುದಿಲ್ಲ ಮತ್ತು ವಿಷಯಗಳಿಗೆ ಪ್ರತಿಪಾದನೆ ಮಾಡತಕ್ಕಂಥ ಶಕ್ತಿ ಇರುವುದಿಲ್ಲ ಆ ಸಂದರ್ಭದಲ್ಲಿ ಫಿಲಾಸಫಿಯ ಸಪೋರ್ಟ್ ತೆಗೆದುಕೊಂಡು ಅಥವಾ ಯಾವುದೇ ರೀತಿಯಿಂದ ಮನವೊಲಿಸಿಕೊಂಡು ವಿಷಯವನ್ನು ಡೈವರ್ಟ್ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೀರಿ ಎಂಬುದು ಸ್ಪಷ್ಟವಾಗುತ್ತದೆ. ಇವತ್ತು ನಿಮ್ಮ ಸರ್ಕಾರ ಏನು ಮಾಡಿದೆ ಎಂಬುದರ ಬಗ್ಗೆ ಪಟ್ಟಿ ಮಾಡಿ ಓದಿದ್ದೀರಿ. ನಾನು ಸರ್ಕಾರ ಮಾಡಿರತಕ್ಕ ಕೆಲಸದ ಬಗ್ಗೆ 60 ಪುಟಗಳ ಪಟ್ಟಿಯನ್ನು ತಯಾರು ಮಾಡಿದ್ದೇನೆ. ಬೇಕಾದರೆ ಪ್ರತಿಯೊಂದನ್ನು ಪಟ್ಟಿ ಮಾಡಿ ಹೇಳುತ್ತೇನೆ. ಯಾವ ರೀತಿಯಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಅವ್ಯವಹಾರ ನಡೆಸಿದ್ದೀರಿ ಅದರ ಎನ್‌ಕ್ವೈಯರಿ ಯಾವ ರೀತಿ ಮಾಡುತ್ತೀರೆಂದು ಕೇಳಿದ್ದೇವೆ, ಐ.ಎಂ.ಎಫ್. ಬಗ್ಗೆ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ನಲ್ಲಿ ಆದಂಥ ಕಾನೂನು ತಿದ್ದುಪಡಿಯ ಬಗ್ಗೆ ನಾವು ಸ್ಪಷ್ಟವಾಗಿ ಹೇಳಿದ್ದೇವೆ ಮತ್ತು ಯೋಜನಾ ಗಾತ್ರದಲ್ಲಿ ಯಾವ ರೀತಿ ಕೊರತೆ ಆಗಿದೆ ಎಂಬುದನ್ನು ಕೂಡ ಹೇಳಿದ್ದೇವೆ. ಮನೆಗಳ ಕಟ್ಟಡಗಳಲ್ಲಿ ಎಷ್ಟರಮಟ್ಟಿಗೆ ಪ್ರತಿ ವರ್ಷ ಯಾವ್ಯಾವ ರೀತಿಯಲ್ಲಿ ತಾವು ಹಣವನ್ನು ಖರ್ಚು ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ಹೇಳಿದ್ದೇವೆ ಮತ್ತು ಕಾವೇರಿ ವಿವಾದದಲ್ಲಿ ತಾವು ಯಾವ ರೀತಿ ಎಡವಿದ್ದೀರಿ ಅದರ ಬಗ್ಗೆ ಹೇಳಿದ್ದೇವೆ. ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಪ್ರತಿಯೊಂದನ್ನು ಕೂಡ ಪಟ್ಟಿ ಮಾಡಿ ಹೇಳುತ್ತೇನೆ. ಈ 5 ವರ್ಷಗಳಲ್ಲಿ ಒಂದು ಯೂನಿಟ್ ಕೂಡ ಕೆಲಸ ಆಗಿಲ್ಲ, ಆದರೆ ಮುಂದೆ ಮಾಡುತ್ತೇವೆಂದು ಹೇಳುತ್ತಾರೆ. ಹೊರದೇಶದಿಂದ ಬರತಕ್ಕಂಥ ಬಂಡವಾಳ ಬರುತ್ತಿದೆ ಮತ್ತು ವಿದ್ಯುಚ್ಛಕ್ತಿಯನ್ನು ಹೊಸದಾಗಿ ನಿರ್ಮಾಣ ಮಾಡತಕ್ಕಂಥದ್ದು ಮತ್ತು ದೇವನಹಳ್ಳಿ ಏರ್‌ಪೋರ್ಟ್ ಕೂಡ. ಹೀಗೆ ಎಲ್ಲವು ಕೂಡ ಬರುತ್ತಿದೆ ಎಂದು ಅವರು ತಮ್ಮ ಪುಸ್ತಕವನ್ನು ಓದಿದರೇ ಹೊರತಾಗಿ, ನಿರ್ದಿಷ್ಟವಾಗಿ ಜನರಿಗೆ ಇವತ್ತು ಯಾವುದೇ ರೀತಿಯಿಂದ ಅನುಕೂಲವಾಗಿಲ್ಲವೆಂಬುದು ಸ್ಪಷ್ಟವಾಗಿದೆ. ಜನ ಇದಕ್ಕಾಗಿಯೇ ಇವತ್ತು ರೊಚ್ಚಿಗೆದ್ದು ತಮ್ಮ ಭಾಷಣ ಕೇಳುವುದಕ್ಕಾಗಿ ಯಾರೂ ಸೇರುತ್ತಿಲ್ಲ, ತಾವು ಏನು ಚುನಾವಣೆ ಪ್ರಚಾರಕ್ಕಾಗಿ ಹೋಗುತ್ತಿದ್ದೀರಿ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಏಕೆ ಸೇರುತ್ತಿಲ್ಲವೆಂದರೆ, ಜನ ನಿರಾಶರಾಗಿದ್ದಾರೆ. ನಿಮ್ಮ ಕಾರ್ಯಕ್ರಮದ ಬಗ್ಗೆ ಈಗಾಗಲೇ ಎಲ್ಲಾ ಪತ್ರಿಕೆಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜಾಹಿರಾತುಕೊಟ್ಟು ತಮ್ಮ ಎರಡು ವರ್ಷಗಳ ಅವಧಿಯಲ್ಲಿ ಏನೇನು ಕೆಲಸ-ಕಾರ್ಯಗಳನ್ನು ಮಾಡಿದ್ದೀರಿ ಎಂಬುದರ ಬಗ್ಗೆ ಹೇಳಿದ್ದೀರಿ, ಇದು ಹೊಸದೇನಲ್ಲ. ಪುನಃ ಸದನದ ಮುಖಾಂತರ ಓದಿ ಹೇಳತಕ್ಕಂಥ ಅವಶ್ಯಕತೆ ಇರಲಿಲ್ಲ. ಇದರ ಬಗ್ಗೆ ಜನ ಈಗಾಗಲೇ ತಿಳಿದುಕೊಂಡಿದ್ದಾರೆ. ಇದರಲ್ಲಿ ಹೊಸದೇನು ಮಾಡಿಲ್ಲ ಮತ್ತು ಅದರಲ್ಲಿ ಬೆನ್ನು ಚಪ್ಪರಿಸಿಕೊಂಡು ಅಥವಾ ಶಹಭಾಷ್‌ಗಿರಿ ಪಡೆಯತಕ್ಕಂಥ ವಿಷಯ ಯಾವುದೂ ಕೂಡ ಇಲ್ಲ. ಇಂದು ಸದನ ಕರೆದದ್ದರಿಂದ ಸಾರ್ವಜನಿಕ ಬೊಕ್ಕಸಕ್ಕೆ ಕನಿಷ್ಠಪಕ್ಷ 40-50 ಲಕ್ಷ ರೂಪಾಯಿ ಖರ್ಚಾಗಿದೆ

ಮತ್ತು ತಮ್ಮ ಒಳ ಜಗಳವನ್ನು ಜನರಿಗೆ ತೋರಿಸಿಕೊಡಬಾರದೆಂದು ಮತ್ತು ಚುನಾವಣೆ ಮೇಲೆ ಪರಿಣಾಮ ಆಗಬಾರದೆಂದು ಚುನಾವಣೆಯಲ್ಲಿ ನಮ್ಮ ಸರ್ಕಾರ ಭದ್ರವಾಗಿದೆ, ಒಗ್ಗಟ್ಟಾಗಿದೆ ಎಂದು ತೋರಿಸಿಕೊಡಬೇಕೆಂಬ ದೃಷ್ಟಿಯಿಂದ ಸದನ ಕರೆದು, ಈ ಸದನದಲ್ಲಿ ವಿಶ್ವಾಸ ಮತವನ್ನು ಗಳಿಸಿಕೊಳ್ಳಬೇಕೆಂದು ಜನರಿಗೆ ತೋರಿಕೆಗೋಸ್ಕರ ಮಾಡಿದ್ದಾರೆಯೇ ಹೊರತಾಗಿ ಇದರಿಂದ ಬಡ ಜನರಿಗೂ ಮತ್ತು ಈ ರಾಷ್ಟ್ರದ ಯಾವ ಜನತೆಗೂ ಕೂಡ ಲಾಭ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

1.50 ಪಿ.ಎಂ

ಇದು ಕೇವಲ ಅವರಿಗೆ ಲಾಭ, ಅವರ ಪಕ್ಷಕ್ಕೆ ಲಾಭ, ಮತ್ತು ಅವರ ಸರ್ಕಾರಕ್ಕೆ ಲಾಭ ಮತ್ತು ಅವರ ಮುಖಂಡತ್ವವನ್ನು ಉಳಿಸಿಕೊಳ್ಳಬೇಕು ಎನ್ನುವಂತಹ ಒಂದೇ ಒಂದು ದೃಷ್ಟಿಯಿಂದ ಮಾಡಿದ್ದು, ತಮ್ಮ ಸರ್ಕಾರ ಭದ್ರವಾಗಿದ್ದರೆ ಸಾಕು ಎಂಬ ದೃಷ್ಟಿಯಿಂದ ಮಾಡಿದ್ದು. ಈ ಚುನಾವಣೆಯಲ್ಲಿ ಕೂಡ ಅವರಿಗೆ ಜನಬೆಂಬಲ ಬೇಕು: ಹಣ ಬೇಕು. ಸರ್ಕಾರ ಹೋಗುತ್ತದೆ ಹೋಗುತ್ತದೆ ಅಂದರೆ ಬಹಳ ಜನ ತಮ್ಮ ಸಮೀಪ ಬರುವುದಿಲ್ಲ; ಸರ್ಕಾರ ಇವತ್ತು ಬೀಳುತ್ತದೆಯೋ ನಾಳೆ ಬೀಳುತ್ತದೆಯೋ ಎನ್ನುವ ಅಂಜಿಕೆ. ಇದನ್ನು ನಾವು ಹೇಳುವುದಲ್ಲ, ಅವರ ಪಕ್ಷದಲ್ಲಿರತಕ್ಕಂಥ ಮಂತ್ರಿಗಳು ಹೇಳುತ್ತಿದ್ದಾರೆ, ಅವರ ಸರ್ಕಾರದಲ್ಲಿರತಕ್ಕಂಥ ಶಾಸಕರು ಹೇಳುತ್ತಿದ್ದಾರೆ, ಅವರ ಪಕ್ಷಕ್ಕೆ ಬೆಂಬಲ ನೀಡತಕ್ಕಂಥ ಶಾಸಕರು ಇವತ್ತು ಬಹಿರಂಗವಾಗಿ ಹೇಳುತ್ತಿದ್ದಾರೆ. 'ಇವೊತ್ತು ನಾವು ಓಟು ಹಾಕಿ ನಾಳೆ ಮತ್ತೆ ಬೇರೆ ಪಕ್ಷಕ್ಕೆ ಸೇರುತ್ತೇವೆ, ಅದು ನವನಿರ್ಮಾಣ ವೇದಿಕೆ ಆಗಲಿ ಅಥವಾ ಲೋಕಶಕ್ತಿಯೇ ಆಗಲಿ ಬೇರೆ ಪಕ್ಷಕ್ಕೆ ನಾವು ಹೋಗುತ್ತೇವೆ ಎಂದು ಹೇಳಿ ಈಗಾಗಲೇ ಸುಮಾರು 30-40ಜನ ಶಾಸಕರು ರೆಡಿಯಾಗಿದ್ದಾರೆ. ನಿಮಗೆ ಆ ಭಯ ಇರುವುದರಿಂದಲೇ ಅಧಿವೇಶನ ಕರೆದಿದ್ದು, ಆ ಭಯದ ಛಾಯೆಯಲ್ಲಿ ನೀವು ಅಧಿವೇಶನ ಕರೆದಿದ್ದು, ಇಲ್ಲ ಅಂದರೆ ತಾವು ಸ್ವಲ್ಪ ತಮ್ಮ ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳಿ, ತಮ್ಮ ಹೃದಯದ ಮೇಲೆ ಕೈ ಇಟ್ಟುಕೊಂಡು ಹೇಳಿ, ಸುಮ್ಮನೇ ಮಾತನಾಡುವುದು ಅಲ್ಲ. ನೀವು ಅದನ್ನು ತಿಳಿದುಕೊಂಡು ಯಾವುದೇ ರೀತಿಯಿಂದ ಆದರೂ ಸರಿ ಇದನ್ನು ನಿಲ್ಲಿಸಬೇಕು, ಇದಕ್ಕೆ ಕಡಿವಾಣ ಹಾಕಬೇಕು. ಕನಿಷ್ಟ ಪಕ್ಷ ಒಂದು ತಿಂಗಳಾದರೂ ಈ ಚುನಾವಣೆ ಸಂದರ್ಭದಲ್ಲಿ ನಾವು ಒಗ್ಗಟ್ಟಿನಿಂದ ಇದ್ದೇವೆ ಎನ್ನುವುದನ್ನು ತೋರಿಸುವ ಸಲುವಾಗಿ ಅಧಿವೇಶನ ಕರೆದಿದ್ದೀರೆ ಹೊರತಾಗಿ ಮತ್ತೆ ಯಾವ ಪುರುಷಾರ್ಥಕ್ಕೂ ಅಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಹಿಂದೆ ಅನೇಕ ಜ್ವಲಂತ ಪ್ರಶ್ನೆ ಇದ್ದವು, ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವು ಸದನ ಕರೆಯಿರಿ, ಅಪ್ಪರ್ ಕೃಷ್ಣಾ ಬಗ್ಗೆ ಚರ್ಚೆಮಾಡುವುದಕ್ಕೆ ಕರೆಯಿರಿ, ಅನೇಕ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದಾಗ ಈಗ ಅವಶ್ಯಕತೆ ಇಲ್ಲ, ಇನ್ನೂ ನಮಗೆ 6 ತಿಂಗಳು ಸಮಯ ಇದೆ ಎಂಧು ಹೇಳತಕ್ಕಂಥವರು ಇವತ್ತು ಸದನ ಕರೆಯಬೇಕು ಅಂದರೆ ಇದು ಕೇವಲ ನಿಮ್ಮ ಸ್ವಾರ್ಥಕೋಸ್ಕರ, ನಿಮ್ಮ

ಉಳುವಿಗೋಸ್ಕರ ಮತ್ತು ಜನತೆಯ ಕಣ್ಣಲ್ಲಿ ಮಣ್ಣು ಎರೆಚಿ ನಮ್ಮ ಸರ್ಕಾರ ಭದ್ರವಾಗಿದೆ, ನಾವೆಲ್ಲ ಒಗ್ಗಟ್ಟಾಗಿದ್ದೇವೆ ಎನ್ನುವುದನ್ನು ತೋರಿಸುವ ದೃಷ್ಟಿಯಿಂದ ನೀವು ಸದನವನ್ನು ಕರೆದಿದ್ದೀರಿ ಎನ್ನತಕ್ಕಂಥ ಆಪಾದನೆಯನ್ನು ನಾನು ಮಾಡುತ್ತಿದ್ದೇನೆ. ಇದಕ್ಕೆ ನಿಮ್ಮ ಉತ್ತರ ಏನೆಂದರೆ, ಪದೇ ಪದೇ ಅದನ್ನೇ ತಾವು ಹೇಳುತ್ತೀರಿ. ನಾವು ಏಕೆ ಕರೆದಿದ್ದೇವೆ ಅಂದರೆ, ನೀವು ರಾಜೀನಾಮೆಯನ್ನು ಕೊಡಿ ಅಂದಿರಿ ಅದಕ್ಕೆ ಕರೆದಿದ್ದೇವೆ ಎಂದು ಹೇಳುತ್ತೀರಿ. ನೀವು ಅದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಎಷ್ಟೋ ಸಲ ವಿರೋಧಪಕ್ಷದವರು ಅನೇಕ ಕಾರಣಗಳಿಗೋಸ್ಕರ ರಾಜೀನಾಮೆಯನ್ನು ಕೇಳಿದ್ದಾರೆ. ಕೆಲವೊಂದು ಸಲ ಕಾನೂನು ಮತ್ತು ಸುವ್ಯವಸ್ಥೆ ಕೆಟ್ಟಾಗ ರಾಜೀನಾಮೆಯನ್ನು ಕೇಳಿದ್ದಾರೆ. ಕಾವೇರಿ ಸಮಸ್ಯೆಯನ್ನು ಬಗೆಹರಿಸಲಿಲ್ಲ ಎಂದು ಕೇಳಿದ್ದಾರೆ. ಬಾರ್ಡರ್ ಡಿಸ್‌ಪ್ಯೂಟ್ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಯಲ್ಲಿ ತಾವು ಏಕಾಂಗಿಯಾಗಿ ಹೋಗಿ ಮಾತನಾಡಿದ್ದೀರಿ. ಮಹಾಜನ್ ವರದಿ ಅಂತಿಮವಾಗಿದ್ದರೂ ಕೂಡ ಅದರಮೇಲೆ ಹೆಚ್ಚು ಕಡಿಮೆ ಯಾವುದೇ ರೀತಿಯಲ್ಲಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ ಎನ್ನುವುದು ಇದ್ದರೂ ಕೂಡ ಪುನಃ ಹೊಸದಾಗಿ ಮಾತುಕತೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ ಎಂದು ಹೇಳಿ ಮಾನ್ಯ ಜೋಶಿಯವರ ಜೊತೆಯಲ್ಲಿ ಮಾತುಕತೆ ಮಾಡತಕ್ಕಂಥಾದ್ದು ಹೀಗೆ ಒಂದಲ್ಲ ಅನೇಕ ರೀತಿಯಿಂದ ತಾವು ಎಡವಿದ್ದೀರಿ. ಇವತ್ತು ಕೇವಲ ತಮ್ಮ ರಾಜಕೀಯ ಗುರಿಯನ್ನು ತಮ್ಮ ಉದ್ದೇಶದಲ್ಲಿಟ್ಟುಕೊಂಡು ಈ ಸರ್ಕಾರ ಭದ್ರವಾಗಿದೆ ಎನ್ನುವುದನ್ನು ತೋರಿಸಿಕೊಳ್ಳುವುದಕ್ಕೋಸ್ಕರ ಮಾತ್ರ ಸದನವನ್ನ ತಾವು ಕರೆದಿದ್ದೀರಿ ಎನ್ನುವ ಆಪಾದನೆಯನ್ನು ನಾನು ಮಾಡುತ್ತಿದ್ದೇನೆ. ಇದರಿಂದ ಒಂದು ರೀತಿಯಲ್ಲಿ ನಾವು ನಗೆಪಾಟಲಿಗೆ ಈಡಾಗಿದ್ದೇವೆ. ಇವತ್ತು ವಿಶ್ವಾಸ ಮತ ತೆಗೆದುಕೊಂಡು ಅಧಿಕಾರದಲ್ಲಿ ಉಳಿಯಬೇಕು ಎನ್ನುವ ದೃಷ್ಟಿಯಿಂದ ಸದನ ಕರೆದಿದ್ದಾರೆ ಅಂದರೆ ಜನ ನಗುತ್ತಾರೆ. ಏಕೆಂದರೆ ನಾವು ಬೇರೆ ಯಾವುದೇ ಉದ್ದೇಶಕ್ಕೆ ಸದನ ಕರೆದಿಲ್ಲ. ಈ ಅಧಿವೇಶನದಲ್ಲಿಯೇ ನಾವು ಅನೇಕ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದಿತ್ತು. ಬಹುಶಃ ಅವರು 10-15 ದಿವಸಗಳ ಹಿಂದೆ ಸದನವನ್ನು ಕರೆದಿದ್ದರೆ ನಾವು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಹುದಿತ್ತು. ಅದನ್ನು ಬಿಟ್ಟು ಇವತ್ತು ತಮಗೆ ಏನು ಅನುಕೂಲ ಇದೆ, ತಮ್ಮ ಅನುಕೂಲಸಿಂಧು ಎಂದು ಹೇಳಿ ಇವತ್ತಿನ ದಿವಸ ಈ ಸದನವನ್ನು ಕರೆದು ಎರಡು ಗಂಟೆಯಲ್ಲಿ ತಮ್ಮ ಭಾಷಣವನ್ನು ಮಾಡಿ ಈ ಸದನದ ಮುಖಾಂತರ ಒಂದು ಹೇಳಿಕೆಯನ್ನು ಕೊಟ್ಟರೆ ನಮ್ಮ ಮತದಾರರ ಮೇಲೆ ಪರಿಣಾಮ ಬೀರುತ್ತದೆ ಮತ್ತು ಲೋಕಸಭಾ ಚುನಾವಣೆ ಮೇಲೂ ಸಹ ಇದರ ಪರಿಣಾಮ ಬೀರುತ್ತದೆ. ಅದಕ್ಕೆ ನಾನು ಹೇಳಬೇಕಾಗುತ್ತದೆ, ಚುನಾವಣಾ ಆಯೊಗದ ಕಡಿವಾಣ ಬೇರೆ ದೃಷ್ಟಿಯಿಂದ ಇದ್ದರೂ ಕೂಡ ಇದಕ್ಕೆ ತಾವು ಅವಕಾಶ ಮಾಡಿಕೊಡಬಾರದು. ಏಕೆಂದರೆ ಈ ಪಟ್ಟಿಯನ್ನು ಅವರು ಎಲ್ಲಾ ಕಡೆ ಪಬ್ಲಿಸಿಟಿ ಮಾಡಿಕೊಂಡಿದ್ದರು. ಪುನಃ ಅದೇ ಪಟ್ಟಿಯನ್ನು ಇಲ್ಲಿ ಓದಿದರು. ಪುನಃ ಅದರ ಮೇಲೆ ಅವರು ಇಲ್ಲಿ ಭಾಷಣ ಮಾಡುತ್ತಾರೆ. ಈ ಭಾಷಣದ ಪ್ರತಿಯನ್ನು ಹಂಚಿಕೊಂಡು

ಚುನಾವಣೆ ಭಾಷಣ ಮಾಡುವುದಕ್ಕೆ ಬಂದಿದ್ದಾರೆ. ಜನ ಇವರ ಭಾಷಣವನ್ನು ಅಲ್ಲಿ ಕೇಳುತ್ತಿಲ್ಲ. ಈ ಸದನದ ಮುಖಾಂತರ ಆದರೂ ಭಾಷಣ ಮಾಡಿಕೊಂಡು ಹೋಗೋಣ ಎಂದು ಹೇಳಿ ಬಂದಿದ್ದಾರೆಯೇ ಹೊರತಾಗಿ ಜನರ ಕಲ್ಯಾಣಕ್ಕಾಗಿ ಜನರ ಅಭಿವೃದ್ಧಿಗೆ ಆಗಲಿ, ಅವರ ನೋವು, ಕಷ್ಟವನ್ನು ಕಡಿಮೆ ಮಾಡಬೇಕು ಎನ್ನುವ ದೃಷ್ಟಿಯಿಂದ ಅವರು ಈ ಸದನವನ್ನು ಕರೆದಿಲ್ಲ. ಇವತ್ತು ನಾನು ಸುಮಾರು 20-25 ವಿಷಯಗಳ ಪಟ್ಟಿಯನ್ನು ಮಾಡಿದ್ದೇನೆ. ಆ ಪಟ್ಟಿಯನ್ನು ನಾನು ಇಲ್ಲಿ ಓದುತ್ತಾ ಕುಳಿತರೆ ಅದು ಪುನಃ ರಿಪಿಟೇಶನ್ ಆಗುತ್ತದೆ. ಬಹುಶಃ ಅವರು ಓದದೇ ಇದ್ದಿದ್ದರೆ ನಾನು ಕೂಡ ಓದುತ್ತಾ ಇರಲಿಲ್ಲ. ಇಷ್ಟೆಲ್ಲಾ ಅವರು ಮಾಡಿದ್ದಾರೆ. ಯಾವ ದೃಷ್ಟಿಯಿಂದ ನೀವು ಮಾಡಿಲ್ಲ ಎಂದು ಹೇಳುತ್ತಿದ್ದೀರಿ? ಅವರು ಮಾಡಿದ್ದು ಸರಿ ಎಂದು ಒಪ್ಪಕೊಳ್ಳುವಂತಹ ಪರಿಸ್ಥಿತಿ ಕೂಡ ಇವತ್ತು ಬರುತ್ತದೆ. ಆದ್ದರಿಂದ ನಾನು ಕೆಲವೇ ಕೆಲವು ವಿಷಯಗಳನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಶ್ರೀಮಾನ್ ಜೆ.ಹೆಚ್.ಪಟೇಲರು ಹಿಂದೆ ಇದ್ದ ಹಾಗೆ ಈಗ ಇಲ್ಲ. ಏಕೆಂದರೆ ಒಂದು ಗಾದೆ ಮಾತು ಹೇಳುತ್ತಾರೆ. ಸೋತಾಗ ಸೋಗತಿ ಗುಣ ನೋಡಬೇಕು, ಮತ್ತು ಹೊಲಸಾದಾಗ ಹೆಂಡತಿ ಗುಣ ನೋಡಬೇಕು ಎಂದು. ಅಂದರೆ ಮನುಷ್ಯ ಖಾಯಿಲೆ ಬಿದ್ದಾಗ ಹೆಂಡತಿ ಯಾವ ರೀತಿಯಲ್ಲಿ ನೋಡಿಕೊಳ್ಳುತ್ತಾಳೆ ಎನ್ನತಕ್ಕಂಥಾದ್ದು. ಹಾಗೆ ಪಟೇಲರ ಗುಣ ನಾವು ಯಾವಾಗ ನೋಡಬೇಕಾಯಿತು ಅಂದರೆ ಸಮಾಜವಾದಿ ಪಟೇಲರು ಅಧಿಕಾರಕ್ಕೆ ಬಂದ ಮೇಲೆ ಅಧಿಕಾರದಲ್ಲಿ ಇಲ್ಲದೇ ಇದ್ದಾಗ ಅವರು ಅನೇಕ ಮಾತುಗಳನ್ನು ಹೇಳಿದ್ದರು, ಲೋಹಿಯಾ ಫಿಲಾಸಫಿ, ಗಾಂಧಿ ಫಿಲಾಸಫಿ ಸಣ್ಣ ಕೈಗಾರಿಕೆಗಳು, ಭೂಸುಧಾರಣಾ ಕಾನೂನು, ಈ ದೇಶದಲ್ಲಿ ಮಾಡಬೇಕಾದ ಹೋರಾಟ ಎಲ್ಲಾ ಹೇಳಿದರು. ಅಧಿಕಾರಕ್ಕೆ ಬಂದಮೇಲೆ ತಾವು ಏನು ಮಾಡಿದಿರಿ? ಶಾಸ್ತ್ರ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ ಅಂದಹಾಗೆ. ತಾವು ಅಧಿಕಾರಕ್ಕೆ ಬಂದು ಎರಡು ವರ್ಷಗಳು ಆದವು. ಒಂದು ಮಾಮೂಲಿ ಭೂ ಸುಧಾರಣಾ ಕಾನೂನು; ಈ ರಾಜ್ಯದಲ್ಲಿ ಅದು ಬಡಜನರ ಜೀವಾಳ ಆಗಿತ್ತು. ಆ ಕಾನೂನಿಗೆ ಧಕ್ಕೆ ಕೊಟ್ಟಂತಹವರು ತಾವು, ಮತ್ತು ಶ್ರೀಮಾನ್ ದೇವೇಗೌಡರು ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದಕ್ಕೆ ತಾವು ಮನಸ್ಸು ಮಾಡಿ ಬೇರೆ ಯಾರು ಹೇಳಿದರೂ ತಾವು ಒಪ್ಪಬಾರದಿತ್ತು. ನಾವು ಬೇರೆಯವರಿಗೆ ಆಪಾದನೆ ಮಾಡುವುದಿಲ್ಲ.

ಶ್ರೀ ಸಿ.ಬೈರೇಗೌಡ: ಈ ಮನೆ ಆ ಕಾನೂನ್ನು ಪಾಸ್ ಮಾಡಿದೆ.

ಅಧ್ಯಕ್ಷರು: ನಾನು ಅದನ್ನೇ ಹೇಳುತ್ತಿದ್ದೇನೆ. ಇಲ್ಲಿ ಮಾನ್ಯ ದೇವೇಗೌಡರು ಇಲ್ಲ ಡಿಫೆಂಡ್ ಮಾಡಿಕೊಳ್ಳುವುದಕ್ಕೆ. ಇವರ ಮೇಲೆ ಎಷ್ಟು ಬೇಕಾಗಿದ್ದರೂ ಹೇಳಿ, ಅವರ ಮೇಲೆ ಏಕೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದ್ದರಲ್ಲ ಅವರು ಅದಕ್ಕೆ ನಾನು ಹೇಳಿದೆ.

ಅಧ್ಯಕ್ಷರು: ಆ ಸ್ಪೀಡ್‌ನಲ್ಲಿ ಎಲ್ಲಾ ಹೊರಗೆ ಬಂದುಬಿಡುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ಪೀಡಲ್ಲ, ತಂದವರು ಯಾರು? ನಾವು ದೇವರಾಜ ಅರಸ್ ಅವರ ಹೆಸರನ್ನು ತೆಗದುಕೊಳ್ಳುವುದಿಲ್ಲವೆ? ಒಳ್ಳೆಯ ಕಾನೂನು ತಂದರು ಎಂದು ಹೇಳುವುದಿಲ್ಲವೆ? ಅದನ್ನು ಇರಚುಮುರಚು ಮಾಡಿದವರು ದೇವೇಗೌಡರು ಅಂದರೆ ಅದನ್ನು ರೆಫರ್ ಮಾಡುವಂತೆ ಇಲ್ಲ. ಈ ಭೂಸುಧಾರಣಾ ಕಾನೂನಿನಲ್ಲಿ ಇಡೀ ಬಡಜನತೆಯ ಜೀವಾಳ ಇದರಲ್ಲಿ ಇದೆ. ಅವರ ಆರ್ಥಿಕ ಬದುಕು ಅದರಲ್ಲಿ ಇದೆ. ಇಂತಹ ಕಾನೂನನ್ನು ತಾವು ತಮ್ಮ ಕೈಯಿಂದ ಕೊಲೆ ಮಾಡಿದಿರಲ್ಲ, ಯಾವ ಬಾಯಿಂದ ಹೇಳುತ್ತೀರಿ ತಾವು ಅಧಿಕಾರ ಸಿಕ್ಕಾಗ ಸಾಮಾನ್ಯ ಜನರಿಗೆ ಒಳ್ಳೆಯದು ಮಾಡುತ್ತೇವೆಂದು? ಇದು ಒಬ್ಬಿಬ್ಬರ ಪ್ರಶ್ನೆ ಅಲ್ಲ. ಲಕ್ಷಾಂತರ ಜನರ ಪ್ರಶ್ನೆ ಇದರಲ್ಲಿ ಇದೆ. ಖಾಯಂ ಆದಂತಹ ಟೆನೆಂಟ್‌ಗಳು ಇರಬಹುದು, ಅಂತಹ ಒಂದು ಭೂ ಸುಧಾರಣಾ ಕಾನೂನಿಗೆ ಕಡಿವಾಣ ಹಾಕಿ ಅದಕ್ಕೆ ಒಂದು ಇತಿಮಿತಿಯನ್ನು ಇಟ್ಟು ಇಡೀ ಕರ್ನಾಟಕ ರಾಜ್ಯದಲ್ಲಿಯೇ ಒಂದು ಪ್ರಗತಿ ಪರವಾದ ಕಾನೂನು ಇದೆ ಎಂದು ಹೇಳಿ ಇದನ್ನು ಕಮ್ಯೂನಿಸ್ಟ್ ಪಾರ್ಟಿಯವರು ಸಹ ಹೊಗಳಿದರು. ಇದು ಒಂದು ರೀತಿ ಭಗವದ್ಗೀತೆ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಅಂಥ ಒಂದು ಒಳ್ಳೆಯ ಕಾನೂನಿಗೆ ಇವರು ತಿಲಾಂಜಲಿ ಕೊಟ್ಟಿರುವುದರಿಂದ, ಯಾವ ಬಾಯಿಯಿಂದ ಇವರು ಒಳ್ಳೆ ಕೆಲಸ ಮಾಡಿದ್ದಾರೆಂದು ಹೇಳಬೇಕು? ಸಮಾಜದಲ್ಲಿ ಪರಿವರ್ತನೆ ತರತಕ್ಕಂಥ ಪ್ರಮುಖವಾದ ಕಾನೂನುಗಳು ಇವು. ಇಂಥ ಕಾನೂನುಗಳಿಗೆ ಇವರಲ್ಲಿ ಗೌರವ ಇಲ್ಲ. ಅದೇ ರೀತಿಯಾಗಿ, ಹಿಂದುಳಿದ ಭಾಗಗಳಿಗೆ ಏನು ಮಾಡಿದ್ದಾರೆ? ಇದರ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ, ಭಾರಿ ಮತ್ತು ಮಧ್ಯಮ ನೀರಾವರಿಗಾಗಿ 1951 ರಿಂದ 1997 ರವರೆಗೆ ಖರ್ಚು ಮಾಡಿರುವ ವಿವರಗಳನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಈಗ ಇವರು ಕೊಟ್ಟಿರುವ ಸಾವಿರ ಕೋಟಿ ರೂಪಾಯಿ, 1970ರಲ್ಲಿ ಕೊಟ್ಟಿರುವ ನೂರು ಕೋಟಿ ರೂಪಾಯಿಗಳಿಗೆ ಸಮವಾಗಿರುತ್ತದೆ ಅಷ್ಟೆ. ಇವರು ಬಿಡುಗಡೆ ಮಾಡಿರುವ ಹಣ ಎಷ್ಟು? ಅದರಲ್ಲಿ ಖರ್ಚಾಗಿರುವುದೆಷ್ಟು ಮತ್ತು ಆ ಹಣದಿಂದ ಸಾಧಿಸಿರುವ ಭೌತಿಕ ಗುರಿ ಎಷ್ಟು? ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಖರ್ಚಾಗಿ ಎಷ್ಟೆಷ್ಟು ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿಯಾಗಿದೆ ಎಂಬುದನ್ನು ತಾವು ನೋಡಬಹುದು. ಆಮೇಲೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗಾಗಿ ನಾವು ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಎರಡು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳಿದರೆ ಸಾಲದು. ಆ ಹಣದಲ್ಲಿ ಎಷ್ಟು ಪೋಲಾಗಿದೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಈ ರೀತಿ ಹಣ ಪೋಲಾಗಿರುವ ಬಗ್ಗೆ ಸಿ.ಬಿ.ಐ, ಎನ್‌ಕ್ವೈರಿ ಮಾಡಿ ಎಂದು ಕೇಳಿದ್ದೇವೆ. ರಾತ್ರೋರಾತ್ರಿ ತರಾತುರಿಯಲ್ಲಿ ಕಂಟ್ರಾಕ್ಟರುಗಳಿಗೆ ಏನು ಕಂಟ್ರಾಕ್ಟ್ ಕೊಡಲಾಗಿದೆ ಅದರ ಬಗ್ಗೆಯೂ ಸಿ.ಬಿ.ಐ.ಎನ್‌ಕ್ವೈರಿ ಮಾಡಬೇಕು. ಕೋಟ್ಯಾಂತರ ರೂಪಾಯಿಗಳು ಅದರಲ್ಲಿ ಅವ್ಯವಹಾರವಾಗಿದೆ. ಸಾವಿರಾರು ಕಂಟ್ರಾಕ್ಟರುಗಳಿಗೆ ಒಂದೇ

ರಾತ್ರಿ ಕಂಟ್ರಾಕ್ಟ್ ಕೊಡಲಾಗಿದೆ. ವಿ.ಸಿ.ಕೆನಾಲ್ ಆಗಲಿ, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗಲಿ, ಇಲ್ಲೆಲ್ಲಾ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ಅದರ ಬಗ್ಗೆ ಸಿ.ಬಿ.ಐ, ಎನ್‌ಕ್ವೈರಿ ಮಾಡಿಯೆಂದು ನಾವು ಪದೇ ಪದೇ ಹೇಳಿದರೂ ಎನ್‌ಕ್ವೈರಿ ಮಾಡಿಸಲಿಲ್ಲ. ಎಲ್ಲಿ ಅನ್ಯಾಯವಾಗಿದೆಯೆಂದು ನಾವುಗಳು ಅವರ ನಜರಿಗೆ ತಂದಮೇಲೆ, ಈ ಸದನದ ಗಮನಕ್ಕೆ ತಂದ ಮೇಲೆ ಅದನ್ನು ಎನ್‌ಕ್ವೈರಿಗೆ ರೆಫರ್ ಮಾಡತಕ್ಕಂಥದ್ದು ತಮ್ಮ ಕರ್ತವ್ಯ. ಆದರೆ, ಅವ್ಯವಹಾರವಾಗಿರುವ ಕೋಟ್ಯಾಂತರ ರೂಪಾಯಿಗಳ ಬಗ್ಗೆ ಇವತ್ತು ಯಾವ ಮಾತೂ ಇಲ್ಲ, ಕಥೆಯೂ ಇಲ್ಲ. ಅದೇ ರೀತಿಯಾಗಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಯಾವ ರೀತಿ ಮಾಡಲಾಗಿದೆ ಎಂದು ಹೇಳುವುದಾದರೆ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಈ ಹಿಂದೆ 65 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಇವತ್ತು 42 ಕೋಟಿ ರೂಪಾಯಿಗಳನ್ನು ಮಾತ್ರ ಕೊಡಲಾಗಿದೆ. ಇಷ್ಟು ಕಡಿಮೆ ಹಣ ಏಕೆ ಕೊಡಲಾಗಿದೆ ಎಂದು ಕೇಳಿದರೆ, ಹಣದ ಕೊರತೆ ಎಂದು ಹೇಳುತ್ತಾರೆ. ಹಿಂದುಳಿದ ಪ್ರದೇಶಗಳ ಡೆವಲಪ್‌ಮೆಂಟ್ ಮಾಡುವ ಉದ್ದೇಶ ಏನು? ಅಲ್ಲಿ ಅಸಮಾನತೆ ಇದೆ, ಅದು ಹಿಂದುಳಿದಂಥ ಭಾಗ ಇದೆ, ಆ ಪ್ರದೇಶವನ್ನು ಅಭಿವೃದ್ಧಿ ಹೊಂದಿರುವ ಪ್ರದೇಶದ ಸರಿಸಮಾನವಾಗಿ ತರಬೇಕೆನ್ನುವ ಉದ್ದೇಶದಿಂದಲೇ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಆದರೆ, ಪ್ರತಿ ವರ್ಷ ಅಲ್ಲಿ ಕೊಡತಕ್ಕಂಥ ಹಣದಲ್ಲಿ ಕುಂಠಿತಗೊಳಿಸುತ್ತಿದ್ದಾರೆ. ಹೋದ ವರ್ಷ ಕೊಟ್ಟಷ್ಟು ಹಣ ಈ ವರ್ಷ ಕೊಟ್ಟಿಲ್ಲ, ಈ ವರ್ಷ ಕೊಟ್ಟಷ್ಟು ಹಣವನ್ನು ಮುಂದಿನ ವರ್ಷ ಕೊಡತಕ್ಕಂಥ ಸಾಧ್ಯತೆಯೂ ಇಲ್ಲ. ಇದು ಒಂದೇ ಅಲ್ಲ, ಇಂಥ ಹತ್ತಾರು ಉದಾಹರಣೆಗಳನ್ನು ನಾನು ಕೊಡಬಹುದು. 65 ಕೋಟಿ ರೂಪಾಯಿಗಳನ್ನು ಈ ಹಿಂದೆ ಕೊಟ್ಟಿರುವುದರಿಂದ ಈ ವರ್ಷ 100 ಕೋಟಿ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆಯನ್ನು ಇವರು ಮಾಡಬೇಕಾಗಿತ್ತು. ಆದರೆ, ಇವರು ಕೇವಲ 42 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇದು ಏಕೆ ಈ ರೀತಿ ಮಾಡಲಾಯಿತೆಂದು ಕೇಳಿದರೆ ಅದಕ್ಕೆ ಯಾವ ಉತ್ತರವೂ ಅವರ ಹತ್ತಿರ ಇಲ್ಲ. ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಇರಬಹುದು, ಹೈದರಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಇರಬಹುದು, ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಇರಬಹುದು, ಈ ಎಲ್ಲಕ್ಕೂ ಕೊಕ್ಕೆ ಹಾಕಿ ಇವತ್ತು ಹಣದ ಕೊರತೆಯನ್ನು ಅವರು ತೋರಿಸುತ್ತಿದ್ದಾರೆ. ಈ ಸರ್ಕಾರ ಅಭಿವೃದ್ಧಿಶೀಲ ಕೆಲಸಗಳನ್ನು ಮಾಡಿದ್ದರೂ ಏನೂ ಮಾಡಿಲ್ಲವೆಂದು ಇವತ್ತಿನ ದಿವಸ ಟೀಕೆ ಮಾಡುತ್ತಿರುವುದು ಸರಿಯಿಲ್ಲವೆಂದು ಸರ್ಕಾರದವರು ಹೇಳಿದ್ದಾರೆ. ಅಭಿವೃದ್ಧಿಶೀಲ ಕೆಲಸಗಳನ್ನು ಯಾವ ರೀತಿ ಮಾಡಲಾಗಿದೆಯೆಂದು ಈ ಸರ್ಕಾರ ಸಮರ್ಥನೆ ಮಾಡಿಕೊಳ್ಳಬೇಕಲ್ಲಾ? ಇವತ್ತು ಪ್ಲಾನಿಂಗ್ ತೆಗೆದುಕೊಳ್ಳಿ, ಅದರಲ್ಲೂ ಕಡಿತ; ಹಿಂದುಳಿದ ಭಾಗಗಳ ಅಭಿವೃದ್ಧಿಗೆ ಕೊಡತಕ್ಕಂಥ ಹಣ - ಅದರಲ್ಲೂ ಕಡಿತ ಮಲೆನಾಡು ಅಭಿವೃದ್ಧಿಗೆ ಕೊಡತಕ್ಕಂಥ ಹಣ- ಅದರಲ್ಲೂ ಕಡಿತ; ಯಾವುದೇ ದೃಷ್ಟಿಯಲ್ಲಿ ನೋಡಿದರೂ ಅಭಿವೃದ್ಧಿ ಕೆಲಸಗಳನ್ನು

ಮಾಡುವುದರಲ್ಲಿ ಈ ಸರ್ಕಾರ ವಿಫಲವಾಗಿದೆಯೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆಮೇಲೆ, ಅವರು ರೈತರ ಬಗ್ಗೆ ಕಾಳಜಿ ವಹಿಸಿಕೊಂಡು ಪದೇ ಪದೇ ಮಾತನಾಡುತ್ತಿದ್ದರು, ಹಿಂದಿನ ಕಾಂಗ್ರೆಸ್ ಸರ್ಕಾರ ಯಾವ ರೈತರುಗಳಿಗೆ ಪಂಪ್‌ಸೆಟ್‌ಗಳಿಗೆ ಎಲೆಕ್ಟ್ರಿಸಿಟಿ ಬಿಲ್ ಮೇಲೆ ರಿಯಾಯಿತಿ ಕೊಟ್ಟಿತ್ತೋ ಅದನ್ನು ಇವರು ಬಂದ ಮೇಲೆ ತೆಗೆದು ಹಾಕಿ ಎಷ್ಟು ದುಬಾರಿ ಮಾಡಲಾಗಿದೆಯೆಂದು ಅವರೇ ಹೇಳಬೇಕು. ಅಷ್ಟು ದುಬಾರಿ ಮಾಡಿ ರೈತರುಗಳಿಗೆ ಹೆಚ್ಚಿನ ಹೊರೆ ಹಾಕಿದರೂ ಇನ್ನೂ ಜನರು ನಮ್ಮನ್ನು ಮೆಚ್ಚುತ್ತಿದ್ದಾರೆ ಎನ್ನುವ ಭ್ರಮೆಯಲ್ಲಿ ಅವರಿದ್ದಾರೆ. ಬಸ್ ದರ ಹೆಚ್ಚು ಮಾಡಿದರು, ಎಲೆಕ್ಟ್ರಿಸಿಟಿ ದರ ಹೆಚ್ಚಿ ಮಾಡಿದರು, ಆಲ್ ಎಲೆಕ್ಟ್ರಿಸಿಟಿ ದರ ಹೆಚ್ಚಿಗೆ ಮಾಡಿದರು, ಆಲ್ ಎಲೆಕ್ಟ್ರಿಕ್ ಹೋಂಗಳ ದರವನ್ನು ಹೆಚ್ಚಿಗೆ ಮಾಡಿದರು, ಇಷ್ಟೆಲ್ಲಾ ಹೆಚ್ಚಿಗೆ ಮಾಡಿದ್ದರೂ ಜನರು ಇನ್ನೂ ನಮಗೇ ಓಟು ಕೊಡುತ್ತಾರೆ ಎನ್ನುವ ಭಾವನೆ ಏನು ಇಟ್ಟುಕೊಂಡಿದ್ದಾರೆ ಅದರ ಬಗ್ಗೆ ಮುಂಬರುವ ಪಾರ್ಲಿಮೆಂಟ್ ಚುನಾವಣೆಯ ಫಲಿತಾಂಶದಲ್ಲಿ ಅವರಿಗೆ ಗೊತ್ತಾಗುತ್ತದೆ. ಕೆಲವು ದಿವಸಗಳ ಹಿಂದೆ ನಡೆದಂಥ ಎ.ಪಿ.ಎಂ.ಸಿ. ಚುನಾವಣೆ, ಕಾರ್ಪೊರೇಷನ್ ಚುನಾವಣೆ ಮತ್ತು ಎಂ.ಎಲ್.ಸಿ.ಗಳ ಚುನಾವಣೆಯಲ್ಲಿ ಜನರು ಅವರ ಪಕ್ಷಕ್ಕೆ ಯಾವ ರೀತಿ ಬುದ್ಧಿ ಕಲಿಸಿದ್ದಾರೆಂಬುದನ್ನು ಅವರು ತಿಳಿದುಕೊಂಡಿದ್ದಾರೆಂದು ನಾನು ಅಂದುಕೊಂಡಿದ್ದೆ. ಆದರೂ ಇನ್ನೂ ಅವರಿಗೆ ಬುದ್ಧಿ ಬಂದಿಲ್ಲವೆಂದು ಗೊತ್ತಾಯಿತು. ಕೆಲವು ದಿವಸಗಳ ಹಿಂದೆ ನೀರಿನ ದರವನ್ನು ಹೆಚ್ಚಿಗೆ ಮಾಡಿದ್ದಾರೆ, ಮನೆಗಳ ಕಂದಾಯವನ್ನು ಹೆಚ್ಚು ಮಾಡಿದ್ದಾರೆ, ಅವರಿಗೆ ಏನೇನು ಬೇಕೋ ಅದೆಲ್ಲವನ್ನೂ ಇವತ್ತಿನ ದಿವಸ ಹೆಚ್ಚು ಮಾಡಿದ್ದಾರೆ. ಆಮೇಲೆ ಎಕ್ಸೈಜ್ ಬಗ್ಗೆ ನಾವು ಪದೇ ಪದೇ ಹೇಳಿದ್ದೇವೆ. ಈ ಅಬಕಾರಿ ರೂಲ್ಸ್ ಬಗ್ಗೆ ಹೈ ಕೋರ್ಟ್ ಕೂಡ 1987ರಲ್ಲಿ ಇದ್ದಂಥ ಗೌರ್ನರ್ ಪೀರಿಯಡ್‌ನಲ್ಲಿ ಆದಂಥ ರೂಲ್ಸ್‌ಗೆ ಪುನಃ ಚಾಲನೆ ಕೊಟ್ಟು ಅದನ್ನು ಮುಂದುವರಿಸಿದರು. ಆ ಒಂದು ರೂಲ್ಸ್‌ನ್ನು ಏಕೆ ತಿದ್ದುಪಡಿ ಮಾಡಿದರು? ಅದರಿಂದ ಸರ್ಕಾರಕ್ಕೆ ಬರತಕ್ಕಂಥ ಹಣವನ್ನು ನಿಲ್ಲಿಸತಕ್ಕಂಥ ಕೆಲಸ ಏಕೆ ಆಯಿತು? ಆ ರೂಲ್ಸ್‌ನ್ನು ಮಾಡಬೇಡಿ ಎಂದು ಅವರಿಗೆ ನಾವು ಎಷ್ಟು ಕೇಳಿಕೊಂಡರೂ ಸಹ ಅವರು ಆ ಬಗ್ಗೆ ಗಮನ ಕೊಡಲಿಲ್ಲ. ಅದರಿಂದ ಎಷ್ಟು ಹಣ ಸರ್ಕಾರಕ್ಕೆ ಲುಕ್ಸಾನು ಆಗುತ್ತದೆ ಎಂಬ ಬಗ್ಗೆ ಸಹ ನಾನು ಹೇಳಿದ್ದೇನೆ. ಈ ರಾಜ್ಯದಲ್ಲಿ ಒಂದು ಕೇಸ್‌ನ ಬೆಲೆ ಸುಮಾರು 225 ರೂಪಾಯಿಗಳಾದರೆ 50 ಕೇಸ್‌ನ ಬೆಲೆ ಇದರಲ್ಲಿ ಅಬಕಾರಿ ಸುಂಕ, ಎಲ್ಲಾ ಹಿಡಿದುಕೊಂಡು, 19,440 ರೂಪಾಯಿ ಆಯಿತು. ಇದರ ಮೇಲೆ ಮಾರಾಟ ತೆರಿಗೆ, ಸರ್ಚಾರ್ಜ್ ಇವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಒಟ್ಟು 421 ಕೋಟಿ ರೂಪಾಯಿಗಳು ಪ್ರತಿ ವರ್ಷ ನಮ್ಮ ರಾಜ್ಯದ ಬೊಕ್ಕಸಕ್ಕೆ ಲುಕ್ಸಾನು ಆಗುತ್ತದೆ ಎನ್ನುವ ವಿಷಯವನ್ನು ಪದೇ ಪದೇ ಅವರ ಗಮನಕ್ಕೆ ತಂದರೂ ಕೂಡ, ಸರ್ಕಾರ ಟ್ರಜರಿ ಖಾಲಿ ಆದರೂ ಚಿಂತೆ ಇಲ್ಲ, ನಾವು ಏನು ಮಾಡುತ್ತೇವೆಯೋ ಅದೇ ಸರಿ ಎಂದು ಅವರು ತಿಳಿದುಕೊಂಡಿದ್ದಾರೆ. ಇದರ ಬಗ್ಗೆ ಸುಪ್ರೀಮ್ ಕೋರ್ಟ್ ಆದೇಶ ಕೊಟ್ಟರೂ ಏನೂ ಮಾಡುವುದಿಲ್ಲ. ಹೈಕೋರ್ಟ್‌ನವರು, ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಮಾಡಿ ಎಂದು

ಹೇಳಿದ್ದಾರೆ. ಎಂ.ಎಸ್.ಐ.ಎಲ್. ಅನ್ನು ತಪ್ಪಿಸಿ ಬೇರೆಯವರಿಗೆ ಕೊಡತಕ್ಕಂಥ ವ್ಯವಸ್ಥೆ ಏನು ನಡೆದಿದೆ ಇದು ಸರಿಯಲ್ಲ ಮತ್ತು ಈ ಮಧ್ಯದ ಅವಧಿಯಲ್ಲಿ ಏನು ಲುಕ್ಸಾನು ಆಗಿದೆ ಆ ರೆವಿನ್ಯೂ ಲಾಸ್ ಎಷ್ಟು ಎಂಬುದನ್ನು ಕಂಡುಹಿಡಿಯಬೇಕಾದರೆ ಈ ಪ್ರಕರಣವನ್ನು ಸಿ.ಬಿ.ಐ., ಎನ್‌ಕ್ವೈರಿಗೆ ಒಪ್ಪಿಸಬೇಕೆಂಬ ಮಾತನ್ನು ಹೈಕೋರ್ಟ್ ಹೇಳಿದೆ. ಅದನ್ನು ಕೂಡ ತಾವು ಮಾಡಿಲ್ಲ. ಕೋರ್ಟ್ ಹೇಳಿದರೂ ಕೂಡ ಮಾಡುವುದಿಲ್ಲ, ಸದನದಲ್ಲಿ ನಾವು ಪ್ರಸ್ತಾಪ ಮಾಡಿದರೂ ತಾವು ಮಾಡುವುದಿಲ್ಲ. ಮತ್ತೆ ನಿಮ್ಮ ಉದ್ದೇಶ ಏನು? ನಿಮಗೆ ನಾವು ಏನು ಹೇಳಬೇಕು. ಎಲ್ಲದಕ್ಕೂ ನಿಮ್ಮ ಕುಮ್ಮಕ್ಕು ಇದೆ ಎಂದು ಹೇಳಬೇಕಾ? ಕುಮ್ಮಕ್ಕು ಇದೆ ಎಂದ ತಕ್ಷಣ ನಿಮಗೆ ಸಿಟ್ಟು ಬರುತ್ತದೆ. ಇಲ್ಲವೆಂದರೆ, ಇದು ಏನು? ನಾವು ಏನು ಮಾಡುವುದು? ಹೈಕೋರ್ಟ್‌ನವರು ಹೇಳಿದ್ದು, ಸುಪ್ರೀಂ ಕೋರ್ಟ್ ಆ ರೂಲ್ಸ್‌ನ್ನು ಗವರ್ನ್ ಮಾಡಿದ್ದು ಎತ್ತಿ ಹಿಡಿದಿದ್ದು ಇದೆ. ಇಲ್ಲಿ ನಿಮಗೆ ಏಕೆ ಭಯ? ಏನು ಅದರಲ್ಲಿ ಅಳುಕು ಇದೆ? ಈ ಮಾತನ್ನು ನಾವು ಕೇಳಬೇಕಾಗುತ್ತದೆ. ಈ ಬಗ್ಗೆ ಜನರು ನಮ್ಮನ್ನು ಕುತೂಹಲದಿಂದ ಕೇಳುತ್ತಾರೆ. ಇವತ್ತು ಕೋರ್ಟ್ ಹೇಳಿದರೂ ಕೂಡ ಸರ್ಕಾರ ಆ ಕಡೆ ಗಮನ ಕೊಡುತ್ತಿಲ್ಲವೆಂದರೆ ಇದರೊಳಗೆ ಶಾಮಿಲಾಗಿದ್ದಾರೆ ಎನ್ನತಕ್ಕಂಥ ಮಾತು ಬರುತ್ತದೆ. ಅದನ್ನು ನೀವು ಇಲ್ಲ ಎಂದು ಹೇಳಬೇಕಾದರೆ, ಹೈಕೋರ್ಟ್ ಹೇಳಿದ ಪ್ರಕಾರ ಆರ್ಡರ್ ಮಾಡಿ ಸಿ.ಬಿ.ಐ.ಗೆ ರೆಫರ್ ಮಾಡಿ. ಗ್ರಾನೈಟ್ ಬಗ್ಗೆ ಕೂಡ ನೀವು ಹಾಗೇ ಮಾಡಿದಿರಿ. ಎಲ್ಲೆಲ್ಲಿ ಸಂಶಯ ಇದೆ, ಆ ಸಂಶಯಗಳನ್ನು ನಿವಾರಣೆ ಮಾಡುವುದಕ್ಕೆ ನೀವು ಇವತ್ತಿನ ದಿವಸ ಮುಂದಕ್ಕೆ ಬನ್ನಿ ಎಂದರೆ ಅವೆಲ್ಲವನ್ನು ಬಚ್ಚಿಟ್ಟು ಅದರ ಬಗ್ಗೆ ಚಕಾರ ಮಾತನಾಡದೆ, ಕೇವಲ ಉಡಾಫೆಯಿಂದ ಮಾತನಾಡಿ, ಯಾವ ಸರ್ಕಾರದಲ್ಲಿ ಆಗಿಲ್ಲ, ಹಿಂದೆ ಆಗಿಲ್ಲವೇ ಮುಂದೆ ಆಗುವುದಿಲ್ಲವೆ, 50 ವರ್ಷ ಅವರು ಹಾಗೆ ಮಾಡಿದರು ಎಂದು ಈ ಉದಾಹರಣೆಗಳನ್ನು ಹೇಳಿಕೊಂಡು ಬಾಳಿ, ಬದುಕಿ ರಾಜ್ಯ ನಡೆಸಬೇಕು ಎಂದರೆ ನಿಮ್ಮ ಅವಶ್ಯಕತೆ ಇಲ್ಲ. ಮತ್ತೆ ಯಾರಾದರೂ ಮಾಡಲಿ. ನೀವು ಒಳ್ಳೆಯ ಆಡಳಿತವನ್ನು ಕೊಟ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟು, ಜನಪರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಏನಾದರೂ ಒಂದು ಏಳಿಗೆ ಮಾಡುತ್ತೀರಿ ಎನ್ನುವ ಭಾವನೆಯಿಂದ ಜನ ನಿಮಗೆ ಅಧಿಕಾರ ಕೊಟ್ಟರೆ, ಅದರ ದುರುಪಯೋಗ ಮಾಡಿಕೊಂಡು ಇವತ್ತಿನ ದಿವಸ ಪ್ರತಿಯೊಂದನ್ನೂ ಕೂಡ, ಸೀರಿಯಸ್ ಮ್ಯಾಟರ್ಸ್‌ನ್ನು ಕೂಡ, ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಂಥ ಮ್ಯಾಟರ್ಸ್‌ನ್ನು ಕೂಡ ತಳ್ಳಿಹಾಕತಕ್ಕಂಥ ಪ್ರಯತ್ನವನ್ನು ಸರ್ಕಾರದವರು ಮಾಡಿದ್ದಾರೆ. ಈ ಸರ್ಕಾರದಲ್ಲಿ ನಡೆಯತಕ್ಕದ್ದನ್ನು ಒಟ್ಟಾರೆ ತೋರಿಸಿಕೊಡಬೇಕೆಂದರೆ, ಅನೇಕ ಅರಾಜಕತೆ, ಶಾಸಕರ ಅರಾಜಕತೆ ಇವು ಅವರ ಪಕ್ಷದಲ್ಲಿ ಇವೆ, ಅವರಿಗೆ ಎಷ್ಟೇ ಹೇಳಿದರೂ ಅಸಮಾಧಾನ ಇದೆ. ಬರೀ ವರ್ಗಾವಣೆ ಪೋಸ್ಟಿಂಗ್ ಅಷ್ಟೇ ಅಲ್ಲ. ಎಲ್ಲಾ ವ್ಯವಹಾರದಲ್ಲೂ ಕೂಡ ಅಸಮಾಧಾನ ಇದೆ. ಆಡಳಿತದಲ್ಲೂ ಕೂಡ ಇವತ್ತು ಏನಾಗಿದೆ? ತಮಗೆ ಹೇಳಬೇಕಾದರೆ, ತಾವು ಕೂಡ ಬಜೆಟ್ ಪುಸ್ತಕ ತರಿಸಿನೋಡಿ. ಬಜೆಟ್ ಪುಸ್ತಕದಲ್ಲಿ ನಮೂದಾದ ಹಣದಲ್ಲಿ 20 ಪರ್ಸೆಂಟ್ ಕೂಡ ಖರ್ಚು ಆಗಿಲ್ಲ.

ಮೊದಲ 5-6 ತಿಂಗಳು ಬಜೆಟ್ ರೂಪಿಸುವುದರಲ್ಲೇ ಹೋಯಿತು. ಒಂದೆರಡು ತಿಂಗಳು ಟೆಕ್ನಿಕಲ್ ಅಪ್ರೂವಲ್, ಅಡ್ಮಿನಿಸ್ಟ್ರೇಷನ್ ಅಪ್ರೂವಲ್, ಆನಂತರ ಚುನಾವಣೆ ಬಂತು. ಯಾವುದಕ್ಕೂ ಕೂಡ ಅಡ್ಮಿನಿಸ್ಟ್ರೇಷನ್ ಅಪ್ರೂವಲ್, ಕೊಡಬೇಡಿ. ಟೆಕ್ನಿಕಲ್ ಅಪ್ರೂವಲ್ ಕೊಡಬೇಡಿ. ಚುನಾವಣೆಯ ಆದೇಶ ಇದೆ ಎಂದು ಹೇಳಿ, ಯಾವ ಒಂದು ಹೊಸ ಕಾಮಗಾರಿಗಳು ಪ್ರಾರಂಭವಾಗಲಿಲ್ಲ. ಇವತ್ತು ಯಾವುದಕ್ಕೂ ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಇಲ್ಲದೆ ಎಲ್ಲಾ ಕೆಲಸ ನಿಂತು ಹೋಯಿತು. ಮತ್ತು ಈಗ ಲೋಕಸಭಾ ಚುನಾವಣೆ ಬಂತು. ಕೆಲವು ನಿಂತು ಹೋಯಿತು. ಅದಕ್ಕಾಗಿ ನಿಮ್ಮ ಸಾಧನೆ ಈ ವರ್ಷ ಏನು ಎಂದರೆ ಶೂನ್ಯ. ಇಡೀ ವರ್ಷದ ಬಜೆಟ್ ಹಣದಲ್ಲಿ ನೀವು ಖರ್ಚು ಮಾಡಿಲ್ಲವೆಂದರೆ ಡೆವಲಪ್‌ಮೆಂಟ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನೀವು ಹೇಳಬಹುದು, ಖರ್ಚು ಮಾಡಲಿಲ್ಲ ನಮಗೆ ಹಣ ಉಳಿತಾಯವಾಯಿತು ಎಂದು ಹಣ ಉಳಿತಾಯ ಮಾಡಿಕೊಂಡು ಕಥೆ ಹೇಳಿಕೊಂಡು ಹೋಗಬಹುದು. ನಾವು ಸುಭದ್ರವಾಗಿ ಸರ್ಕಾರ ನಡೆಸುತ್ತಿದ್ದೇವೆ, ನಾವು ರಿಸೋರ್ಸ್‌ಸ್ ಮೊಬಿಲೈಸ್ ಮಾಡಿದ್ದೇವೆನ್ನುವ ಮಾತನ್ನು ಹೇಳುತ್ತೀರಿ. ಪದೇ,ಪದೇ ಆ ಟೀಚರ್ಸ್‌ಗೆ ಹೇಳುತ್ತೀರಿ. ಇಂಥದ್ದನ್ನು ನಾವು ಎಷ್ಟೋ ಮಾಡಿದ್ದೇವೆ, ಹಿಂದೆ ಕೂಡ ಎಷ್ಟೋ ಆಗಿವೆ. ಉದಾಹರಣೆಗೆ ನಾನು ನಿಮಗೆ ಹೇಳುತ್ತೇನೆ. ನಾನು ಸುಮಾರು ಮೂರೇ ತಿಂಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿದ್ದೇನೆ; 15 ಸಾವಿರ ಟೀಚರ್ಸ್ ಅನ್ನು ನೇಮಕ ಮಾಡಿರುತ್ತೇನೆ. ಅಂತಹ ಕ್ರೆಡಿಟ್ ತೆಗೆದುಕೊಳ್ಳಿ. ನೀವು ಪದೇ ಪದೇ ಹೇಳುತ್ತೀರಿ, 32 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೇವೆಂದು, ಅದು ರೋಟಿನ್ ವರ್ಕ್. ನಾವು ಕೂಡ ಹಿಂದೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೆವು. ಎಲ್ಲೆಲ್ಲಿ ಡಾಕ್ಟರ್‌ಗಳು ಇಲ್ಲ, ಅಂತಹ ಕಡೆ ನೇರವಾಗಿ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕೆಂದು ಹೇಳಿದ್ದೆವು. ಟೀಚರ್ಸ್ ಅಪಾಯಿಂಟ್‌ಮೆಂಟ್ ಎಂದು ನೇರವಾಗಿ ಹೇಳಿದ್ದೆವು. ಒಂದು ಹೊಸ ಪಕ್ಷ, ಒಂದು ಸರ್ಕಾರವನ್ನು ರಚನೆ ಮಾಡಿದ ಮೇಲೆ ಏನಾದರೂ ಒಂದು ಹೊಸ ಬದಲಾವಣೆ ಮಾಡಬೇಕು. ಆ ಬದಲಾವಣೆ ದೃಷ್ಟಿಯಿಂದ ನೀವು ರಾಜ್ಯವನ್ನು ಆಳತಕ್ಕಂಥದ್ದನ್ನು ನೋಡಬೇಕು; ನೀವು ಯಾವುದೇ ಒಂದು ರೊಟೀನ್‌ವರ್ಕ್ ಮಾಡಿರಬಹುದು. ನಮ್ಮ ಅಧ್ಯಕ್ಷರು ಹೇಳಿದರು, 1.65 ಸಾವಿರ ಮನೆ ಕಟ್ಟಿಸಿದ್ದೇವೆ. 30 ಸಾವಿರ ಶಿಕ್ಷಕರನ್ನು ನೇಮಕ ಮಾಡಿದ್ದೇವೆ. 400 ಡಾಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ.

ಅಧ್ಯಕ್ಷರು: ನೀವು ಮಾತನಾಡಲು ಪ್ರಾರಂಭ ಮಾಡಿ ಅರ್ಧಗಂಟೆಯಾಯಿತು. ಬೇಗ ಮುಗಿಸಿ, ಏಕೆಂದರೆ ನಾನು ಕ್ರಿಮೇಷನ್‌ಗೆ ಹೋಗುವ ರೆಸ್ಪಾನ್ಸಿಬಿಲಿಟಿ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅನೇಕ ವಿಷಯಗಳನ್ನು ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೆವು. ಈ ಪುಸ್ತಕದಲ್ಲಿ ಕೂಡ ಎಲ್ಲ ಉತ್ತರ ಇದೆ. ನಾನು ಹೆಚ್ಚಿಗೆ ವಿಷಯವನ್ನು ಪ್ರಸ್ತಾಪ ಮಾಡದೆ, ಇಷ್ಟು ಮಾತ್ರ ಹೇಳಬಯಸುತ್ತೇನೆ. ಈ ಸರ್ಕಾರ ತಾನು ಅಧಿಕಾರದಲ್ಲಿ ಉಳಿಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಸದನವನ್ನು

ಕರೆಸಿರುತ್ತಾರೆ. ಈ ಸದನ ಕರೆಯುವುದರಿಂದ ಪಬ್ಲಿಕ್ ಎಕ್ಸ್‌ಚೆಕರ್‌ಗೆ ಸುಮಾರು 50 ಲಕ್ಷ ರೂಪಾಯಿಗಳು ಇವತ್ತು ಲುಕ್ಸಾನ್ ಆಗಿದೆ. ನೀವು ನಿಮ್ಮ ಪ್ರತಿಷ್ಠೆಗಾಗಿ ಕರೆದರೆ ಈ ಹಣವನ್ನು ಮಂತ್ರಿಗಳಿಂದ ಮತ್ತು ಜನತಾದಳ ಪಕ್ಷದ ವತಿಯಿಂದ ವಸೂಲಿ ಮಾಡಬೇಕು. ಏಕೆಂದರೆ It is just farce ಕೇವಲ ತಮ್ಮ ಪ್ರತಿಷ್ಠೆಗೋಸ್ಕರ ಕರೆದು ಚುನಾವಣೆಗೆ ಪ್ರಚಾರ ತೆಗೆದುಕೊಳ್ಳಬೇಕು, ಜನರಿಗೆ ಒಂದು ಸಂದೇಶ ಮುಟ್ಟಿಸಬೇಕು, ತಮ್ಮ ಸರ್ಕಾರ ಜೀವಂತ ಇದೆ, ನಾವು ಒಗ್ಗಟ್ಟಾಗಿ ಇದ್ದೇವೆ, ನಮ್ಮದು ಸ್ಟೇಬಲ್ ಗೌರ್ನಮೆಂಟ್ ಇದೆ, ನೀವು ಏನು ಚಿಂತೆ ಮಾಡಬೇಡಿ ಎಂದು ಹೇಳಿ ಸಂದೇಶ ಕೊಡುವುದಕ್ಕೋಸ್ಕರ ಈ ವೇದಿಕೆಯನ್ನು, ಈ ಅಧಿವೇಶನವನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನತಕ್ಕಂಥ ಆಪಾದನೆಯನ್ನು ನಾನು ಮಾಡುತ್ತೇನೆ. ಇವರು ಸೀರಿಯಸ್ಸಾಗಿದ್ದರೆ, ಯುಕೆಪಿ ಸ್ಕ್ಯಾಂಡಲ್, ಗ್ರಾನೈಟ್‌ನಲ್ಲಿ ಆಗಿರತಕ್ಕಂಥದ್ದು, ಅಬಕಾರಿಯಲ್ಲಿ ಆಗಿರತಕ್ಕಂಥದ್ದು ಮತ್ತು ಆಡಳಿತದಲ್ಲಿ ಅನೇಕ ಲೋಪದೋಷಗಳು ಏನು ಇವೆ, ಎಲ್ಲದಕ್ಕೂ ಕೂಡ, ಸಿ.ಬಿ.ಐ. ತನಿಖೆ ಮಾಡಿಸಿ ಹೊರಗೆ ಬರಲಿ. ಇಷ್ಟೆಲ್ಲಾ ಇಟ್ಟುಕೊಂಡು ಇವತ್ತು ಕೇವಲ ತಮಗೆ ಬಹುಮತ ಇದೆಯೋ ಇಲ್ಲವೋ ಎಂದು ಹೇಳುವುದಕ್ಕೋಸ್ಕರ ಮಾತ್ರ ಈ ಅಧಿವೇಶನವನ್ನು ಕರೆದಿರುತ್ತಾರೆಂದರೆ ಸರಿಯಲ್ಲ ಮತ್ತು ಸಮರ್ಥನೆಯೂ ಅಲ್ಲ. ಇದರಿಂದ ಯಾವ ಪ್ರಯೋಜನ ಕೂಡ ಆಗುವುದಿಲ್ಲ, ರಾಜ್ಯದ ಜನ ಮರೆತಿಲ್ಲ. ಇವರು ರೈತರಿಗೆ ಮಾಡಿದಂಥ ತೊಂದರೆ ಮತ್ತು ಬಡವರಿಗೆ ಮಾಡಿದಂಥ ತೊಂದರೆ ಇವೆಲ್ಲವನ್ನು ನಾನು ಈ ಸದನದಲ್ಲಿ ಪ್ರತಿಸಲ ಹೇಳುತ್ತಿದ್ದೇನೆ. ಆ ಎಲ್ಲಾ ಸಮಸ್ಯೆಗಳು ಕೂಡ ಇನ್ನೂ ಜೀವಂತ ಇವೆ. ಆ ಸಮಸ್ಯೆಗಳಿಗೆ ಇವರ ಹತ್ತಿರ ಪರಿಹಾರವಿಲ್ಲ. ಅದಕ್ಕೆ ಉತ್ತರ ಕೂಡ ಇಲ್ಲ. ಕೇವಲ ಇವತ್ತು ನಗೆಪಾಟಲಿಗೀಡು ಮಾಡಿಕೊಂಡು ಅವರ ಮೇಲೆ, ಇವರ ಮೇಲೆ ಸಹಜವಾಗಿ ಟೀಕೆ ಮಾಡಿಕೊಂಡು ಅನಾವಶ್ಯಕವಾಗಿ ಹೋಗತಕ್ಕಂಥದ್ದು ಇವರು ಮಾಡುತ್ತಿದ್ದಾರೆ. ಸದನದ ಒಳಗಡೆ ಕೆಲವು ಸಲ ಮಾಡುತ್ತಾರೆ. ಹೊರಗಡೆಯಂತೂ ಅವರು ಬಾಯಿಗೆ ಬಂದಂತೆ ಹೇಳುತ್ತಾರೆ. ಇದಕ್ಕೆ ಸಂಬಂಧ ಇಲ್ಲ, ಕಡಿವಾಣ ಇಲ್ಲ. ನಾನು ಇನ್ನು ಹೆಚ್ಚಿನ ವಿಷಯವನ್ನು ಪ್ರಸ್ತಾಪ ಮಾಡದೆ ಇವತ್ತು ಕರೆದಂಥ ಸಭೆ ಅಪ್ರಸ್ತುತ, ಅವರ ಸ್ವಾರ್ಥಕ್ಕಾಗಿ, ಮತ್ತು ಅವರಿಗಾಗಿ ಕರೆದುಕೊಂಡಿದ್ದಾರೆ, ಅವರ ವರ್ಚಸ್ಸನ್ನು ಬೆಳೆಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಕರೆಸಿದ್ದಾರೆ. ಈ ದೇಶದ ಜನರನ್ನು ತಪ್ಪು ದಾರಿಗೆ ಎಳೆಯಬೇಕೆನ್ನುವ ದೃಷ್ಟಿಯಿಂದ ಕರೆದಿರುತ್ತಾರೆ. ಇದರಲ್ಲಿ ಯಾವ ಒಂದು ಸತ್ಯ ಕೂಡ ಇಲ್ಲ ಮತ್ತು ಇದರ ಅವಶ್ಯಕತೆ ಕೂಡ ಇರಲಿಲ್ಲ. ಅದಕ್ಕಾಗಿ ನಾನು ಈ ಒಂದು ಪ್ರಸ್ತಾವವನ್ನು ವಿರೋಧಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ರಾಜಣ್ಣ: ಸನ್ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ 50 ಲಕ್ಷ ರೂಪಾಯಿಗಳು ಖರ್ಚಾದರೆ ಮುಂದೆ ಬರತಕ್ಕಂಥ ಚುನಾವಣೆಗೆ 800- ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಆ 800 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಮಾಡಿದವರು ಯಾರು?

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ವಿಶ್ವಾಸ ಮತವನ್ನು ಕೇಳಿದ್ದಾರೆ. ಪರಸ್ಪರ ಒಂದು ವಿದಾಯ ಹೇಳುವಂಥ ಸಂದರ್ಭ ಇದು. ಜನತಾದಳ ಎಂದು ಒಂದು ಪಾರ್ಟಿ ಇತ್ತು. ಆ ಪಕ್ಷದ ಕೊನೆಯ ಮುಖ್ಯಮಂತ್ರಿಗಳು ಎಂದು ಜೆ.ಹೆಚ್.ಪಟೇಲರು ಇದ್ದರು. ಅವರ ಶಾಸಕರೆ, ಅವರ ಮಂತ್ರಿಗಳೆ, ಕೈಕೊಟ್ಟು ವಿಶ್ವಾಸ ಮತವನ್ನು ಕೇಳಿ, ಬಲತ್ಕಾರದಿಂದ ಅವರ ಬೆಂಬಲವನ್ನು ಪಡೆದು, ಅದು ಆದಮೇಲೆ ಕೆಲವೇ ದಿವಸಗಳಲ್ಲಿ ವಿಧಾನಸಭೆಯನ್ನು ವಿಸರ್ಜನೆ ಮಾಡಿ, ಜನರಿಂದ ತಿರಸ್ಕರಿಸಲ್ಪಡುವಂಥ ದುಸ್ಥಿತಿಗೆ ಬಂದಂಥದ್ದು ಜನತಾಪಾರ್ಟಿ ಎಂದು ಹೇಳಿ ಇತಿಹಾಸ ಬರೆಯತಕ್ಕಂಥ ಒಂದು ಪ್ರಯತ್ನವನ್ನು ತಾವು ಮಾಡಿದ್ದೀರಾ? ಬಿಹಾರದಲ್ಲಿ, ಒರಿಸ್ಸಾದಲ್ಲಿ ಏನು ಜನತಾದಳಕ್ಕೆ ತಿಲಾಂಜಲಿ ಆಯಿತು, ಇವತ್ತು ಕರ್ನಾಟಕದಲ್ಲಿಯೂ ಸಹ ಆ ಸ್ಥಿತಿ ಬಂದಿದೆ. ರಾಜ್ಯದ ಮುಖ್ಯಮಂತ್ರಿಗಳಿಗೆ ತಮ್ಮವರ ಮೇಲೆ ಅವಿಶ್ವಾಸ. ಮಂತ್ರಿಗಳು ಎಲ್ಲ ಸುಖವನ್ನು ಅನುಭವಿಸಿದ ಮೇಲೂ ಕೊನೆಯ ಗಳಿಗೆಯಲ್ಲಿ ಪಟೇಲರು, ಮನೆಗೆ ಹೋಗುತ್ತಾರೆಂದು ಗೊತ್ತಾದ ತಕ್ಷಣ, ಮುಖ್ಯಮಂತ್ರಿಗಳ ಮೇಲೆ ಅವಿಶ್ವಾಸ. ಶಾಸಕರಿಗೆ ಅವರ ಮುಂದಿನ ಭವಿಷ್ಯದ ಮೇಲೆ ಅವಿಶ್ವಾಸ. ರಾಜ್ಯದ ಜನರಿಗೆ ಸರ್ಕಾರದ ಮೇಲೆ ಅವಿಶ್ವಾಸ. ಈ ಅವಿಶ್ವಾಸದ ಸರಪಳಿ ಮಧ್ಯೆ ಮುಖ್ಯಮಂತ್ರಿಗಳು ವಿಶ್ವಾಸ ಮತ ಕೇಳುವಂಥ ಒಂದು ಧಾರುಣ ಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ಜೆ.ಹೆಚ್.ಪಟೇಲರಂಥವರಿಗೆ ಬಂತಲ್ಲ ಎಂದು ಅಯ್ಯೋ ಪಾಪ ಅನಿಸುತ್ತದೆ.

2.20 ಪಿ.ಎಂ.

ನಾನು ಆಗಲೇ ಹೇಳಿದ ಹಾಗೆ ನಿರ್ಜೀವಾವಸ್ಥೆಯಲ್ಲಿರತಕ್ಕಂಥ, ಕೋಮಾ ಸ್ಥಿತಿಯಲ್ಲಿರತಕ್ಕಂಥ ಸರಕಾರಕ್ಕೆ ಕೃತಕವಾಗಿ ಆಕ್ಸಿಜನ್ ನೀಡುವಂಥ ಒಂದು ವ್ಯರ್ಥ ಪ್ರಯತ್ನವನ್ನು ಮಾನ್ಯ ಜೆ.ಹೆಚ್.ಪಟೇಲರು ಮಾಡುತ್ತಾ ಇದ್ದಾರೆ. ಈಗಾಗಲೇ ಕೃತಕ ಆಕ್ಸಿಜನ್ ತೆಗೆದುಕೊಂಡು ತಿಂಗಳುಗಟ್ಟಳೆ ಉರುಳುತ್ತಾ ಇದೆ ಮತ್ತು ಅಂತ್ಯಕಾಲ ಸಮೀಪಿಸುತ್ತಾ ಇದೆ ಎಂಬು ನಿಮಗೂ ಗೊತ್ತಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ನಿಮ್ಮ ಸರಕಾರದ ಬಗ್ಗೆ ನಾವೇನಾದರೂ ಹೇಳಿದರೆ ಅದನ್ನು ನೀವು ಒಪ್ಪುವುದಿಲ್ಲ. ಪೂಜ್ಯ ಸಿದ್ಧಗಂಗಾಶ್ರೀಗಳವರು 90ನೇ ವರ್ಷದ ಜನ್ಮದಿನದ ಸಂದರ್ಭದಲ್ಲಿ ಅವರು ಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ಒಂದು ಮಾತನ್ನು ಸರಕಾರದ ಬಗ್ಗೆ ಹೇಳಿದ್ದಾರೆ. ''ಆಡಳಿತ ಯಂತ್ರವು ವಿಷಮ ಸ್ಥಿತಿಯಲ್ಲಿದೆ. ನೈತಿಕತೆ ಪತನಗೊಂಡಿದೆ. ಸಾರ್ವಜನಿಕ ಜೀವನದಲ್ಲಿ ಕ್ರಿಮಿನಲ್‌ಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ಅತ್ಯುತ್ತಮ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದ ಕರ್ನಾಟಕ ಎಲ್ಲಾ ವಲಯಗಳಲ್ಲಿ ವಿನಾಶದತ್ತ ಹೋಗುತ್ತಿದೆ. ಯಾರನ್ನೂ ಯಾರೂ ಕೇಳುವವರಿಲ್ಲ. ಮುಂದಿನ ದಿನಗಳನ್ನು ಆಶೆಯಿಂದ ನೋಡುವ ಪರಿಸ್ಥಿತಿಯಲ್ಲಂತೂ ನಾವಿಲ್ಲ.'' ನಾನು ಒಂದು ಮಾತನ್ನು ಈ ನಾಡಿನ ಜನರಿಗೆ ಹೇಳಲು ಇಷ್ಟಪಡುತ್ತೇನೆ. ಇದು ದೇಶದಲ್ಲಿ ಸ್ವರ್ಣ

ಜಯಂತಿಯನ್ನು ಆಚರಿಸುತ್ತಿರತಕ್ಕಂಥ ಕಾಲ. 50 ವರ್ಷಗಳ ಕಾಲ ನಮ್ಮ ಕಾಂಗ್ರೆಸ್‌ನ ಮತ್ತು ಅದರದ್ದೇ ಇನ್ನೊಂದು ಮುಖವಾದ ಜನತಾದಳದ ಬಣ್ಣ ಬಯಲಾಗಿದೆ. ಜನರು ಜಾಗೃತರಾಗಿದ್ದಾರೆ. ಒಂದು ಕಾಲದಲ್ಲಿ ''ರಾಜಾ ಕಾಲಸ್ಯ ಕಾರಣ:'' ಎಂದು ಹೇಳುತ್ತಾ ಇದ್ದರು. ಆದರೆ ಇವೊತ್ತು ''ಜನಶಕ್ತಿ ಕಾಲಸ್ಯ ಕಾರಣ:'' ಆಗುತ್ತಾ ಇದೆ. ಜನರು ನಿರ್ಧಾರ ಮಾಡಿದ್ದಾರೆ. ಸ್ವಾತಂತ್ರ್ಯ ಬಂದು 50 ವರ್ಷಗಳಲ್ಲಿ ಜನರ ಹಿತವನ್ನು ಸಂಪೂರ್ಣವಾಗಿ ಮರೆತು-ಹಗಲು ದರೋಡೆಯಲ್ಲಿ ನಿರತರಾಗಿರುವಂಥ ಸರಕಾರದ ಖಜಾನೆಯನ್ನು ಲೂಟಿ ಮಾಡುವಂಥ ಒಂದು ಪರಿಸ್ಥಿತಿಗೆ ಬಂದಿದೆ. ಇಂಥ ಕೆಲಸಗಳಲ್ಲಿ ನಿರತರಾಗಿರುವಂಥ ಪಕ್ಷಗಳನ್ನು ದೂರವಿಡಬೇಕೆಂಬ ತೀರ್ಮಾನಕ್ಕೆ ಜನರು ಬಂದಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ನಾನು ಈ ರಾಜ್ಯದ ಜನತೆಗೆ ಭರವಸೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ, ಸ್ವರ್ಣ ಜಯಂತಿಯನ್ನು ಆಚರಿಸತಕ್ಕಂಥ ಕಾಲದಲ್ಲಿ ನಾಡಿನ ಜನತೆಯು ಹೊಸ ಹೆಜ್ಜೆಯನ್ನು ಹೊಸ ಸಂಕಲ್ಪವನ್ನು ಮಾಡುತ್ತಾ ಇದ್ದಾರೆ. ಬೇರೆ ಬೇರೆ ಅನೇಕ ಆಪಾದನೆಗಳನ್ನು ಭಾರತೀಯ ಜನತಾ ಪಕ್ಷದ ಮೇಲೆ ಮಾಡಿದ್ದಾರೆ. ನಮ್ಮನ್ನು ಎಲ್ಲರಿಂದ ದೂರ ಮಾಡಲು ನೀವು ಮತ್ತು ಅವರುಗಳು ಪ್ರಯತ್ನ ಮಾಡಿದ್ದೀರಿ. ಆದರೆ ಈ ದೇಶದ ಜನರು ಇವೊತ್ತು ನಮ್ಮನ್ನು ಆಶೀರ್ವಾದ ಮಾಡುತ್ತಾ ಇದ್ದಾರೆ. ಕೇಂದ್ರದಲ್ಲಿ ಮಾರ್ಚ್ 10-11ನೇ ತಾರೀಖು ನಮ್ಮ ಬಹುಮತದ ಆಧಾರದ ಮೇಲೆ ಮತ್ತು ಬೇರೆ ಪಕ್ಷಗಳ ಸಹಕಾರವನ್ನೂ ತೆಗೆದುಕೊಂಡು ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗುವುದು ನಿಶ್ಚಿತ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿಯೂ ಸಹ ನಮ್ಮ ಜನತಾದಳದ ಸ್ನೇಹಿತರು ದಯನೀಯ ಸೋಲನ್ನು ಅನುಭವಿಸಿ ಆವತ್ತೇ ವಾಲಂಟಿಯರ್ ಆಗಿ ರಾಜಿನಾಮೆ ಕೊಡುವ ಬದಲು, ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರೇ, ನಿಮಗೆ ಕೈಕೊಡುವ ಜನರು ನಿಮ್ಮ ಸುತ್ತ ಇದ್ದಾರೆ, ಇದನ್ನು ಅರ್ಥ ಮಾಡಿಕೊಂಡು ಒಂದು ದಾಖಲೆಯನ್ನು ನಿರ್ಮಿಸಿ, ವಿಧಾನ ಸಭೆಯನ್ನು ವಿಸರ್ಜಿಸಿ, ಜನತಾ ನ್ಯಾಯಾಲಯಕ್ಕೆ ಹೋಗುವ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ. ಈ ಒಂದು ಸಲಹೆಯನ್ನು ನಾನು ನಿಮಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಹೇಳುತ್ತಿದ್ದೇನೆ, ಇದು ಜೆ.ಹೆಚ್.ಪಟೇಲ್‌ರವರ ಜನತಾದಳದ ಕೊನೆಯ ದಿವಸ. ಮತ್ತೆ ಅಧಿವೇಶನ ಸೇರುವ ಸಂದರ್ಭ ಬರುವುದಿಲ್ಲ. ಭಾರತೀಯ ಜನತಾಪಾರ್ಟಿ ಬಹುಮತವನ್ನು ಪಡೆದು, ಆ ಜಾಗದಲ್ಲಿ ಕುಳಿತು ಈ ನಾಡಿನ ಜನತೆಗೆ ನೀವೇನು ದ್ರೋಹ ಮಾಡಿದ್ದೀರಿ, ಅನ್ಯಾಯ ಮಾಡಿದ್ದೀರಿ, ಅದನ್ನು ಸರಿಪಡಿಸಿ ಈ ನಾಡಿನ ಜನರು ಗೌರವದಿಂದ ನೆಮ್ಮದಿಯಿಂದ, ಸ್ವಾಭಿಮಾನದಿಂದ ಬದುಕುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಆ ಭರವಸೆಯನ್ನು ನಾನು ನಾಡಿನ ಜನರಿಗೆ ಕೊಡುತ್ತೇನೆ. ಸರಕಾರದ ಖಜಾನೆಗೆ ಬರುವಂಥ ಹಣ ಮಾನ್ಯ ಸಿದ್ಧರಾಮಯ್ಯನವರ ಒಂದು ಸಾವಿರ ಕೋಟಿಗಳಿಗಿಂತಲೂ ಹೆಚ್ಚು ಹಣವು ಸೋರಿ ಹೋಗುತ್ತಾ ಇದೆ! ಆ ಹಣವನ್ನು ಸೋರಿ ಹೋಗದಂತೆ ತಡೆದು ಸರಕಾರದ ಖಜಾನೆಗೆ ತುಂಬಿ ಎರಡು ವರ್ಷ ಒಂದು ಪೈಸೆ ಹೊಸ ತೆರಿಗೆಯನ್ನು ಹಾಕದೆ ಈ ನಾಡಿನ ಜನತೆಗೆ ಒಂದು ಪ್ರಾಮಾಣಿಕ ಆಡಳಿತವನ್ನು, ಒಳ್ಳೆಯ

ಆಡಳಿತವನ್ನು, ರೈತರ ಮಗ ಗೌರವದಿಂದ ಸ್ವಾಭಿಮಾನದಿಂದ ಬದುಕುವಂಥ ಕಾಲವನ್ನು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳವರು ಮತ್ತು ಸ್ಲಂಗಳಲ್ಲಿ ವಾಸ ಮಾಡುವಂಥ ಜನರು ನಿಮ್ಮನ್ನು ನಂಬಿ ಮೋಸ ಹೋಗಿ ಯಾವ ರೀತಿಯಲ್ಲಿ ಪರಿತಪಿಸುತ್ತಾ ಇದ್ದಾರೋ ಅದರ ಬದಲಾಗಿ ಒಂದು ಒಳ್ಳೆಯ ಆಡಳಿತವನ್ನು ಕೊಡುತ್ತೇವೆ ಎಂಬ ಸಂಕಲ್ಪವನ್ನು ನಾವು ಮಾಡಿದ್ದೇವೆ. ಈ ಮಾತನ್ನು ಈ ಸದನದ ಮೂಲಕ ರಾಜ್ಯದ ಜನತೆಗೆ ಹೇಳಲು ಇಚ್ಛೆಪಡುತ್ತೇನೆ.

(ಗೊಂದಲ)

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೇ, ಇದು ಬಿ.ಜೆ.ಪಿ. ಕಾರ್ಯಕರ್ತರ ಸಭೆಯೋ ಅಥವಾ ಶಾಸನ ಸಭೆಯೋ ಎಂದು ಅರ್ಥವಾಗುತ್ತಾ ಇಲ್ಲ.

ಅಧ್ಯಕ್ಷರು: ನನಗೂ ಒಂದೇ ಒಂದು ಸಣ್ಣ ಸಮಸ್ಯೆ ಇದೆ. ಅಲ್ಲಿ ಮಾನ್ಯ ವಾಜಪೇಯಿಯವರು ಬರುತ್ತಾರೆ, ನಮ್ಮ ತಕರಾರು ಇಲ್ಲ. ಆದರೆ ಇಲ್ಲಿ ನೀವು ಬಂದರೆ ನಾನು ಎಲ್ಲಿ ಇರಲಿ ಎಂದು ನಿಮ್ಮನ್ನು ಕೇಳುತ್ತಾ ಇದ್ದೇನೆ.

(ಸಭೆಯಲ್ಲಿ ನಗು)

ನನ್ನ ವಿಚಾರ ಹೇಳಿದಲ್ಲಿ ನನಗೂ ಸಮಾಧಾನವಾಗುತ್ತದೆಯಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ತಾವು ಕೂಡ ನಮ್ಮ ಕಡೆಗೆ ಬನ್ನಿ, ಮಾನ್ಯ ಅಧ್ಯಕ್ಷರೇ, ತಾವು ಮರೆತಿದ್ದೀರಿ. ವಿಮಾನ ನಿಲ್ದಾಣದಲ್ಲಿ ಬೇರೆ ಯಾವುದೋ ಸಂದರ್ಭದಲ್ಲಿ ಹೋಗಿದ್ದಾಗ ನಿಮಗೆ ಇವರ ಕೈಯಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ ಎಂದು ಕಿವಿಯಲ್ಲಿ ಹೇಳಿದ್ದೆ. ಈಗ ತಾವು ತಮ್ಮ ಮನಸ್ಥಿತಿಯನ್ನು ಬದಲಾಯಿಸುತ್ತಾ ಇದ್ದೀರಿ, ನಿಮ್ಮಂಥ ಪ್ರಾಮಾಣಿಕರು ನಮ್ಮ ಪಕ್ಕದಲ್ಲಿರಬೇಕಲ್ಲದೆ ಇನ್ನೆಲ್ಲಿರಬೇಕು?

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ತಾವು ಯಡಿಯೂರಪ್ಪನವರ ಮಾತು ಕೇಳಿದರೆ ಅಪಾಯಕ್ಕೆ ಸಿಕ್ಕುತ್ತೀರಿ, ತಮಗೆ ಈ ಬಗ್ಗೆ ಎಚ್ಚರಿಕೆ ಕೊಡುತ್ತಿದ್ದೇನೆ, ನಾನು ನಿಮ್ಮ ಆತ್ಮೀಯ ಸ್ನೇಹಿತನಾಗಿ ಹೇಳುತ್ತಿದ್ದೇನೆ. ತಾವು ಹುಶಾರಾಗಿರಿ....

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಒಂದು ಸರಕಾರ ಜೀವಂತ ವಾಗಿದೆ ಎಂದು ಹೇಳಲು ಅದು ಪ್ರಜೆಗಳಿಗಾಗಿ ಕನಿಷ್ಟ ಕರ್ತವ್ಯಗಳನ್ನಾದರೂ ಮಾಡಿರಬೇಕು. ದೈನಂದಿನ ಕೆಲಸಕಾರ್ಯಗಳನ್ನಾದರೂ ತಾವು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಬೇಕಾಗುತ್ತದೆ. ಹೊಸ ಕಾಮಗಾರಿಗಳನ್ನು ಪ್ರಾರಂಭಿಸದಿದ್ದರೂ ಇರುವ ಕಾಮಗಾರಿಗಳನ್ನಾದರೂ ಮುಂದೆ ಹೋಗುವಂತೆ ನೋಡಿಕೊಳ್ಳಬೇಕಾಗುತ್ತದೆ. ರಾಜ್ಯದ ಜನತೆಗೆ, ಅವರ ಆಸ್ತಿಪಾಸ್ತಿಗಳಿಗೆ ರಕ್ಷಣೆ

ಕೊಡುವಷ್ಟಾದರೂ ಕಾನೂನು ಸುವ್ಯವಸ್ಥೆಯು ಇರಬೇಕಾಗುತ್ತದೆ. ಇದಾವುದೂ ಇಲ್ಲದೆ ಆಡಳಿತ ಯಂತ್ರದ ಮೇಲೆ ನಿಮ್ಮ ಹಿಡಿತ ತಪ್ಪಿ ಹೋಗಿ ರಾಜ್ಯದಲ್ಲಿ ಒಂದು ರೀತಿಯ ಅರಾಜಕತೆಯು ಉಂಟಾಗಿದೆ. ಇಂಥ ಒಂದು ಪರಿಸ್ಥಿತಿಗೆ ನಮ್ಮ ರಾಜ್ಯದ ಜನರು ಇವತ್ತು ಸಿಕ್ಕಿಕೊಂಡಿದ್ದಾರೆ, ನರಳುತ್ತಾ ಇದ್ದಾರೆ ಮತ್ತು ಯಾವಾಗ ಚುನಾವಣೆ ಬರುತ್ತದೆ ಎಂದು ಕಾತುರರಾಗಿದ್ದಾರೆ. ಯಾವಾಗ ನಾವು ಕಾಲ ಬದ್ಧರು? ಯಾವಾಗ ನಾವು ನಿಯಮ ಬದ್ಧರು? ಯಾವುದಕ್ಕೆ ಮಾನ್ಯ ಅಧ್ಯಕ್ಷರೆ? ನಾನು ಹೇಳುತ್ತೇನೆ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮತ್ತು ಬೇರೆ ಯಾವುದೇ ರಾಜ್ಯ ಸರಕಾರಗಳು ಅಲ್ಲಿನ ಜನರ ಮೇಲೆ ಹಾಕದೇ ಇರುವಷ್ಟು ತೆರಿಗೆಯನ್ನು ಇಲ್ಲಿ ನಮ್ಮ ಜನರ ಮೇಲೆ ಹಾಕಿದ್ದಾರೆ. ಒಂದು ಮಧ್ಯಮ ವರ್ಗದ ಸಾಮಾನ್ಯ ಕುಟುಂಬದ ಮೇಲೆ ತಿಂಗಳಿಗೆ 500ರೂಪಾಯಿ ಗಳಿಗೂ ಹೆಚ್ಚಿನ ತೆರಿಗೆ ಬೀಳುವಂತೆ ಮಾಡಿದ್ದೀರಿ. ಹಾಗಾದರೆ ನೀವು ತೆರಿಗೆ ಹಾಕುವುದಕ್ಕೆ ಕಾಲಬದ್ಧರು ಅಲ್ಲವೆ? ನೀವು ತೆರಿಗೆಯನ್ನು ವಸೂಲು ಮಾಡಲು ಕಾಲಬದ್ಧರು ಅಲ್ಲವೆ?. ಯಾರಿಗೆ ರಕ್ಷಣೆಯನ್ನು ಕೊಟ್ಟಿದ್ದೀರಿ? ಎಕ್ಸೈಸ್ ಮಾಲೀಕರುಗಳಿಗೆ. ರಕ್ಷಣೆ ಕೊಟ್ಟಿದ್ದು ಯಾರಿಗೆ? ಗ್ರಾನೈಟ್ ಮಾಲೀಕರುಗಳಿಗೆ. ಕಾಡು ಲೂಟಿ ಮಾಡುವವರಿಗೆ ಮತ್ತು ನೆಲಗಳ್ಳರಿಗೆ ರಕ್ಷಣೆ ಕೊಟ್ಟಿದ್ದೀರಿ. ಇದು ಹೌದೋ ಅಲ್ಲವೋ ಎಂಬುದಕ್ಕೆ ನಿಮ್ಮ ಆತ್ಮಸಾಕ್ಷಿಗೆ ಪ್ರಶ್ನೆ ಹಾಕಿಕೊಳ್ಳಿ. ನನಗೆ ದುಃಖವನ್ನು ತಂದ ವಿಚಾರ ಅಂದರೆ, ಮೊನ್ನೆ ನಮ್ಮ ಹಾಲಿ ಮುಖ್ಯಮಂತ್ರಿಯವರು ಬಿಜಾಪುರ, ಬೀದರ್, ಗುಲ್ಬರ್ಗಾ ಜಿಲ್ಲೆಗಳಲ್ಲಿ ಪ್ರವಾಸದಲ್ಲಿದ್ದರು. ನಾನು ಮೊನ್ನೆ ಗುಲಬರ್ಗದಲ್ಲಿದ್ದೆ. ಇಲ್ಲಿ ನಾವೆಲ್ಲರೂ ಪಾಠ ಕಲಿಯಬೇಕಾದಂಥಾದ್ದು ಒಂದು ಇದೆ. ಒಬ್ಬ ರಾಜ್ಯದ ಮುಖ್ಯಮಂತ್ರಿ ಬಂದರೆ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಮಾತನಾಡುವುದು ಸಹಜ. ಆದರೆ ಇಲ್ಲಿ ಕಾರ್ಯಕರ್ತರ ಮೀಟಿಂಗ್‌ಗೆ ಗೆಸ್ಟ್‌ಹೌಸ್‌ನಲ್ಲಿ ಎರಡು ಗಂಟೆಗಳ ಕಾಲ ಕಾದು ಎಲ್ಲರನ್ನು ಕರೆದುಕೊಂಡು ಬಂದು ಸಭೆ ಮಾಡುವಂಥ ದುಸ್ಥಿತಿಗೆ ನಮ್ಮ ಮುಖ್ಯಮಂತ್ರಿಯವರನ್ನು ತಂದಿದ್ದೀರಲ್ಲ? ಜಿಲ್ಲಾ ಮಂತ್ರಿಗಳು, ಉಸ್ತುವಾರಿ ಮಂತ್ರಿಗಳು ಇದ್ದೂ ಕೂಡ ಮುಖ್ಯಮಂತ್ರಿಯವರನ್ನು ಈ ಪರಿಸ್ಥಿತಿಗೆ ತಂದುಬಿಟ್ಟಿದ್ದೀರಲ್ಲ ಎಂದು ನಮಗೆ ಬೇಸರವಾಯಿತು.

ಶ್ರೀ ಎಂ.ಪಿ.ಪ್ರಕಾಶ್: ಬಿಜೆಪಿಯವರು ಇಂಥ ಸುಳ್ಳುಗಳನ್ನು ಹೇಳುವುದರಲ್ಲಿ ತುಂಬಾ ನಿಸ್ಸೀಮರು.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ನಾನು ಕೂಡ ಬೀದರ್‌ಗೆ ಹೋಗಿದ್ದೆ. ನಾನು ಕಣ್ಣಾರೆ ಕಂಡಿದ್ದೇನೆ. ಬೀದರ್‌ನ ಸಭೆಯಲ್ಲಿ 20 ಸಾವಿರ ಜನರು ಇದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ: ಹಾಗಾದರೆ ಅವರು ಬಿಜೆಪಿ ಮೀಟಿಂಗ್‌ಗೆ ಬಂದಿದ್ದರು ಎಂದು ಕಾಣುತ್ತದೆ. ನಮ್ಮ ಮೀಟಿಂಗ್‌ನಲ್ಲಿ 20 ಸಾವಿರ ಜನರು ಇದ್ದರು.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್: ನಾವು ಅವರ ಹಾಗೆ ಬಸ್‌ಸ್ಟ್ಯಾಂಡ್‌ನಲ್ಲಿ

ನಿಂತು ಭಾಷಣ ಮಾಡಲು ಹೋಗಿಲ್ಲ. ನಾವು ಜನರ ಮುಂದೆ ನಿಂತು ಭಾಷಣ ಮಾಡಲು ಹೋಗಿದ್ದೆವು.

ಶ್ರೀ ಡಿ.ಟಿ.ಜಯಕುಮಾರ್: ಪರಿಷತ್ ಚುನಾವಣೆಯಲ್ಲಿ ದಳದವರು ಎರಡು ಸೀಟ್ ಕೂಡ ಗೆಲ್ಲುವುದಿಲ್ಲ ಎಂದು ಹೇಳಿದ್ದೀರಿ, ಅದು ಏನಾಯಿತು?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮುಖ್ಯಮಂತ್ರಿಯವರೇ, ನೀವು ಲೋಕಸಭೆಯಲ್ಲಿ16ಸೀಟುಗಳನ್ನು ಗೆದ್ದಿದ್ದೀರಿ. ಈಗ ಒಂದು, ಎರಡು ಮೂರು, ನಾಲ್ಕು ಸ್ಥಾನಗಳನ್ನು ಗೆಲ್ಲುತ್ತೀರಾ? ಎಷ್ಟಕ್ಕೆ ನೀವು ರಾಜೀನಾಮೆ ಕೊಡುತ್ತೀರಿ ಎಂದು ಹೇಳಿ,

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಬೇರೆ ಒಂದು ಪಕ್ಷಕ್ಕೆ 10 ಸೀಟುಗಳನ್ನು ಕೊಟ್ಟು ತಮ್ಮ ದುರ್ಬಲತೆಯನ್ನು ತೋರಿಸಿಕೊಂಡಂತವರು ಬೇರೆಯವರನ್ನು ಪ್ರಶ್ನಿಸುತ್ತಿದ್ದಾರಲ್ಲ, ಏನಿದು? ನಿಮಗೆ ಸ್ವಂತ ಶಕ್ತಿ ಇದ್ದರೆ ಬೇರೆಯವರ ಜೊತೆಗೆ ಏಕೆ ಸೇರುತ್ತಾ ಇದ್ದಿರಿ? ಕಾಂಗ್ರೆಸ್‌ನವರು ನಮಗೆ ಯಾರ ಬೆಂಬಲವೂ ಬೇಕಾಗಿಲ್ಲ, ನಾವು ಏಕಾಂಗಿಯಾಗಿ ಹೋರಾಟ ಮಾಡುತ್ತೇವೆ ಎಂದು ಹೇಳಿದರು. ಹಾಗೆಯೇ ನೀವು ಏಕಾಂಗಿಯಾಗಿಯೇ ಹೋರಾಟ ಮಾಡಬಹುದಾಗಿತ್ತಲ್ಲವೆ? ಲೋಕಶಕ್ತಿಗೆ ಹತ್ತು ಸೀಟುಗಳನ್ನು ಏಕೆ ಕೊಡಬೇಕಾಗಿತ್ತು? ನಿಮ್ಮಲ್ಲಿ ಆತ್ಮವಿಶ್ವಾಸ ಇಲ್ಲವೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಪತ್ರಿಕೆಯಲ್ಲಿ ಒಂದು ವಿಷಯವನ್ನು ಓದಿದ್ದೆ. ಹೊಸಕೋಟೆಯಲ್ಲಿ ನಮ್ಮ ಜನತಾದಳದವರು ಲೋಕಸಭಾ ಚುನಾವಣೆಯ ಪ್ರಚಾರದ ಉದ್ಘಾಟನೆಯನ್ನು ಮಾಡಿದರು. ಅಲ್ಲಿ ಒಂದು ಮಾತನ್ನು ಬಾಯಿ ತಪ್ಪಿ ಹೇಳಿದರೋ ಏನೋ ಎಂಬುದು ನನಗೆ ಗೊತ್ತಿಲ್ಲ. ಅಲ್ಲಿ ನಮ್ಮ ಮಾಜಿ ಪ್ರಧಾನಿಯವರು ಮಾತನಾಡುತ್ತಾ ''ನಾವು ಹೊಸಕೋಟೆಯಿಂದ ಕೆಂಪು ಕೋಟೆಗೆ ಹೋಗುತ್ತೇವೆ''-ಎಂದು ಹೇಳಿದರು. ನಾನು ಅದಕ್ಕೆ ಯೋಚನೆ ಮಾಡುತ್ತಾ ಇದ್ದೆ. ಬೆಂಗಳೂರಿಗೆ ಹೊಸಕೋಟಿಯಿಂದ ಬಂದರೆ ಕೆಂಪೇಗೌಡ ನಗರ ಸಿಗುತ್ತದೆ. ಇಲ್ಲಿಗೆ ಬರುವುದರೊಳಗಾಗಿಯೇ ನಿಮ್ಮ ಅಡ್ರೆಸ್ ಇರುವುದಿಲ್ಲ. ಹಾಗಾದರೆ ಅಲ್ಲಿಂದ ನೀವು ಎಲ್ಲಿಗೆ ಹೋಗುತ್ತೀರಿ? ಆದ್ದರಿಂದ ನೀವು ಒಂದು ವೇಳೆ ಹೋದರೆ ಮೇಲುಕೋಟೆಗೆ ಹೋಗಬಹುದು. ಹೊಸಕೋಟೆಯಿಂದ ನೀವು ಮೇಲುಕೋಟೆಗೆ ಹೋದರೆ ಹೋಗಬಹುದು. ಇನ್ನೊಂದು ಸಂಗತಿ ಇದೆ, ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನಿಯಾದರೆ,...

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮೇಲುಕೋಟೆ ನೀವು ತೆಗೆದುಕೊಳ್ಳಿ. ಏಕೆಂದರೆ ಅದು ನಿಮಗೆ ಗೊತ್ತಿದೆ. ಹೊಸಕೋಟೆ ನೀವು ತೆಗೆದುಕೊಳ್ಳಿ. ಕೆಂಪುಕೋಟೆ ನಮಗೇ ಇರಲಿ.

ಶ್ರೀ ವಾಟಾಳ್ ನಾಗರಾಜ್: ದೆಹಲಿಯ ಕೆಂಪುಕೋಟೆಯಲ್ಲಿ ಹಾಳು ಸುರಿಯುತ್ತಿದೆ.

ಶ್ರೀಮತಿ ಬಿ.ಟಿ.ಲಲಿತ ನಾಯಕ್: ''ರಾಮ ನಾಮ ಜಪನ ಕುರ್ಚಿಕಾ ಸಪನಾ'' ಎಂದು ಆ ಪಾರ್ಟಿಗೆ ಹೆಸರು ಇಟ್ಟಿದ್ದಾರೆ, ಆದ್ದರಿಂದ ಅದು ಎಂದೂ ಉದ್ಧಾರವಾಗುವುದಿಲ್ಲ. ಸುಮ್ಮನೆ ಹೇಳುತ್ತಾರೆ ಅಷ್ಟೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಯಡಿಯೂರಪ್ಪನವರಿಗೆ ಸವಾಲುಗಳನ್ನು ಹಾಕಿ ಬಹಳ ಅಭ್ಯಾಸ ಇದೆ. ಈಗ ನೀವು ಸವಾಲು ಹಾಕಿದ್ದೀರಿ. ಮಾನ್ಯ ದೇವೇಗೌಡರು ಹಾಸನದಲ್ಲಿ ನಿಂತುಕೊಳ್ಳಲಿ ಎಂದು ಸವಾಲು ಹಾಕಿದ್ದೀರಿ. ಅಲ್ಲಿ ಅವರಿಂದ ಗೆಲ್ಲಲು ಆಗುವುದಿಲ್ಲ ಓಡಿ ಹೋಗುತ್ತಾರೆಂದು ಹೇಳುತ್ತಿದ್ದೀರಿ. ಈಗ ಅವರು ನಿಂತಿದ್ದಾರೆ, ಇದಕ್ಕೇನು ಹೇಳುತ್ತೀರಿ? ಇದಕ್ಕೆ ನಿಮ್ಮ ಸವಾಲು ಏನು?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಪ್ರಾಮಾಣಿಕವಾಗಿ ಒಂದು ಮಾತನ್ನು ಹೇಳುತ್ತೇನೆ. ನನಗೆ ಬಹಳ ದುಃಖವಾಗುತ್ತದೆ. ಶ್ರೀಮತಿ ಸುಶೀಲಾ ಶಿವಪ್ಪನವರು ಹಾಸನದಲ್ಲಿ ಅಭ್ಯರ್ಥಿ ಎಂದು ಚುನಾವಣಾ ಉದ್ಘಾಟನೆಗೆಂದು ನಾನು ಅಲ್ಲಿಗೆ ಹೋಗಿದ್ದೆ. ಗೆಸ್ಟ್ ಹೌಸಿನ ಹತ್ತಿರ ಹೋದಾಗ ಮಾಜಿ ಪ್ರಧಾನಿಯಾದ ದೇವೇಗೌಡರ 4-5 ಎಸ್ಕಾರ್ಟ್ಸ್ ಕಾರುಗಳು ಸಕಲೇಶಪುರದ ಕಡೆಗೆ ಹೋಗುತ್ತಿದ್ದವು. ನಾವೂ ಆ ಕಡೆಗೇ ಹೋಗುತ್ತಿದ್ದೆವು. ಒಬ್ಬ ಕನ್ನಡ ನಾಡಿನ ವ್ಯಕ್ತಿ ಮಣ್ಣಿನ ಮಗ ಈ ದೇಶದ ಪ್ರಧಾನಿಯಾಗಿದ್ದು ಅವರು ಮತ್ತೆ ಲೋಕಸಭೆಗೆ ಸ್ಪರ್ಧೆ ಮಾಡುತ್ತಾರೆಂದು ಗೊತ್ತಾದಾಗ, ಅವರು ಅಡ್ಡದಾರಿ ಹಿಡಿಯದೇ ಇದ್ದರೆ ನಾವೆಲ್ಲರೂ ಸೇರಿ ಒಬ್ಬ ಮಾಜಿ ಪ್ರಧಾನಿ, ಕನ್ನಡಿಗರು ಒಬ್ಬರು ಹಾಸನದಿಂದ ಸ್ಪರ್ಧೆ ಮಾಡುತ್ತಿದ್ದಾರೆ, ನಾವು ಸರ್ವಾನುಮತದಿಂದ ಅವರನ್ನು ಆಯ್ಕೆ ಮಾಡಿ ಕಳಿಸುತ್ತೇವೆನ್ನುವ ಸ್ಥಿತಿಗೆ ತರಬೇಕಾಗಿತ್ತು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಏನು ತಪ್ಪು ಹೇಳಿದೆ ಎಂದು ತಾವೆಲ್ಲರೂ ಕೂಗುತ್ತಿದ್ದೀರಿ?

(ಗೊಂದಲ)

ಶ್ರೀ ಸಿ.ಆರ್.ಸಗೀರ್ ಅಹಮದ್: ಇವರಿಬ್ಬರ ಚರ್ಚೆಯಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ ನಾನು ಹೊಡೆದ ಹಾಗೆ ಮಾಡುತ್ತೇನೆ, ನೀನು ಅತ್ತ ಹಾಗೆ ಮಾಡು ಎಂದು ಹೇಳಿ; ಅವರ ಕಡೆಯವರು ಇವರ ಕಡೆಗೆ ಹೋಗಿ ಎಂದು 5-6 ಜನರನ್ನು ಕಳಿಸುತ್ತಿದ್ದಾರೆ. ಇವರು ಅವರನ್ನು ಸ್ವೀಕಾರ ಮಾಡುತ್ತಾರೆ. ಇವರಿಬ್ಬರಲ್ಲಿ ಏನಾದರೂ ಹೊಂದಾಣಿಕೆ ಇದೆಯೋ ಏನೋ ಎನ್ನುವ ಅನುಮಾನ ನಮಗೆ ಬರುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಇಲ್ಲಿ ಎರಡು ಸಂಗತಿಯನ್ನು ಹೇಳುವುದಕ್ಕೆ ಹೊರಟೆ. ಮಾನ್ಯ ದೇವೇಗೌಡರು ನಮ್ಮ ದೇಶದ ಪ್ರಧಾನಿಯಾದಾಗ ಹರದನಹಳ್ಳಿ ಗ್ರಾಮ ಇಡೀ ಜಗತ್ತಿಗೇ ಗೊತ್ತಾಯಿತು. ಮಾನ್ಯ ದೇವೇಗೌಡರನ್ನು ಈ ಬಾರಿ ತಮ್ಮೆಲ್ಲರ ಸಹಕಾರದಿಂದ ಸೋಲಿಸಿ ಅದೇ ಹರದನ ಹಳ್ಳಿ ಮತ್ತು ಇಡೀ ಜಗತ್ತಿಗೇ ಗೊತ್ತಾಗುವ ಹಾಗೆ ಮಾಡುತ್ತೇವೆ, ಕಾದು ನೋಡಿ.

(ಗೊಂದಲ)

ಶ್ರೀ ಎಲ್.ಆರ್.ಶಿವರಾಮೇಗೌಡ: ಇದು ರಾತ್ರಿ ಕನಸಲ್ಲ ಇದು ಹಗಲುಗನಸು. ತಾವು ಬರೆದಿಟ್ಟುಕೊಳ್ಳಬೇಕು.

ಅಧ್ಯಕ್ಷರು: ನಾನು ಸಮಯವನ್ನು ನಿಗದಿ ಮಾಡಿದ್ದೇನೆ. ಎಲ್ಲೋ ಮಧ್ಯೆ ಮಧ್ಯೆ ಒಂದು ಸಲ ಎದ್ದು ಇಂಟರ್‌ವಿನ್ ಆಗುವುದು ಇರಬೇಕು. ಮಾನ್ಯ ಯಡಿಯೂರಪ್ಪನವರು ಮಾತನಾಡುವ ವೇಳೆಗೆ ಪ್ರತಿ ಸಲ ಇವರು ಎದ್ದು ಮಾತನಾಡುವುದಾದರೆ ನಾನು 4 ಗಂಟೆಗೆ ಸಭೆಯನ್ನು ಮುಗಿಸುವುದಕ್ಕಾಗುವುದಿಲ್ಲ; ಮಾನ್ಯ ಸಚಿವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಕ್ಕೂ ಆಗುವುದಿಲ್ಲ.

ಒಬ್ಬ ಸದಸ್ಯರು: ಚುನಾವಣಾ ಪ್ರಚಾರ ಭಾಷಣ ಬೇಡ. ಅವರು ಭಾಷಣ ಮಾಡಲಿ.

ಶ್ರೀ ಬಿ.ಎಸ್.ಬಚ್ಚೇಗೌಡ: ಅವರು ಸೋಲುವುದು ಗೆಲ್ಲುವುದು ಜನರ ಇಷ್ಟ. ಅವರು ಓಟು ಕೊಡುತ್ತಾರೆ, ಇವರು ಗೆಲ್ಲುತ್ತಾರೆ. ಮಾನ್ಯ ದೇವೇಗೌಡರ ಸುದ್ದಿ ಅವರಿಗೇಕೆ? ಅವರು ಅಭ್ಯರ್ಥಿಯಾಗಿ ಕಂಟೆಸ್ಟ್ ಮಾಡಿದ್ದಾರೆ. ಅವರು ಸೋಲುವುದು ಗೆಲ್ಲುವುದು ಜನರಿಗೆ ಬಿಟ್ಟಿದ್ದು. ಅವರಿಗೇಕೆ ಅದು? ಅವರ ಬಗ್ಗೆ ಇಲ್ಲಿ ಮಾತನಾಡುವುದು ಸೂಕ್ತವೇ?

ಶ್ರೀ ಎನ್.ಸುರೇಶ್ ಕುಮಾರ್: ಮಾನ್ಯ ಸಾರಿಗೆ ಸಚಿವರು ಸವಾಲು ಹಾಕಿದಾಗ ಇದು ಪ್ರಾರಂಭವಾಯಿತು. ಅದಕ್ಕೋಸ್ಕರ ಈ ಉತ್ತರ ಕೊಟ್ಟಿದ್ದು.

ಶ್ರೀ ಬಿ.ಎನ್.ಬಚ್ಚೇಗೌಡ: ಎಷ್ಟು ಸ್ಥಾನ ಬರುತ್ತದೆಂದು ಸವಾಲು ಹಾಕಿದವರು ಮಾನ್ಯ ಯಡಿಯೂರಪ್ಪನವರು. ಅದಾದ ಮೇಲೆ ಮಾಜಿ ಪ್ರಧಾನಿಯವರು ಗೆಲ್ಲುತ್ತಾರಾ ಸೋಲುತ್ತಾರಾ, ಹೊಸಕೋಟೆ ನನ್ನ ಕ್ಷೇತ್ರ, ಕೆಂಪುಕೋಟೆ, ಮೇಲುಕೋಟೆ ಎಂದರೆ ಇದು ಆರ್ಗ್ಯುಮೆಂಟ್ ಆಗುತ್ತದೆಯೆ?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ತಂದಿರತಕ್ಕಂತಹ ವಿಶ್ವಾಸ ಮತದ ಮೇಲಿನ ಚರ್ಚೆ ಏನು ಇದೆ ಇದಕ್ಕೆ ವಿರೋಧ ಪಕ್ಷದವರು ಈ

ಸಭೆಯನ್ನೇ ಕರೆಯಬೇಕಾಗಿರಲಿಲ್ಲವೆನ್ನುವ ವಾದವನ್ನು ಮಾಡಿಕೊಂಡೇ ಬಂದರು. ವಿರೋಧ ಪಕ್ಷದವರು ಮೂಡಿಸಿರತಕ್ಕಂತಹ ಸಂಶಯವನ್ನು ನಿವಾರಿಸಲಿಕ್ಕೆ ಆ ಜನರ ಮನಸ್ಸಿನಲ್ಲಿರತಕ್ಕಂತಸ ಸಂಶಯ ಏನು ಇದೆ ಇದನ್ನು ನಿವಾರಣೆ ಮಾಡುವುದಕ್ಕೆ ತಂದಿರತಕ್ಕಂತಹ ಈ ಒಂದು ವಿಶ್ವಾಸ ಮತ ಸೂಚನೆ ಇದಾಗಿದೆ ಎಂದರೆ ತಪ್ಪಾಗಲಾರದು. ಈ ಒಂದು ಪ್ರಾಮುಖ್ಯವಾಗಿರತಕ್ಕಂತಹ ವಿಚಾರದ ಬಗ್ಗೆ ಈ ಸಭೆಯಲ್ಲಿ ಸ್ವಲ್ಪ ಮಟ್ಟಿಗೆ ಗಂಭೀರವಾಗಿರತಕ್ಕಂತಹ ಚರ್ಚೆಯಾಗುತ್ತದೆಂಬ ಭಾವನೆ ನಮ್ಮೆಲ್ಲರಲ್ಲೂ ಇದೆ. ಆದರೆ ಇಲ್ಲಿ ಸವಾಲನ್ನು ಎಸೆಯುವ ಒಂದು ಚರ್ಚೆಯಾಗುತ್ತಿದೆ. ಮಾನ್ಯ ಯಡಿಯೂರಪ್ಪನವರು ಒಂದು ಸವಾಲನ್ನು ಹಾಕಿದ್ದಾರೆ. ನಾವು ಆಡಳಿತ ಪಕ್ಷದಿಂದ ಆ ಸವಾಲನ್ನು ಸ್ವೀಕಾರ ಮಾಡುತ್ತೇವೆ. ಮಾನ್ಯ ದೇವೇಗೌಡರನ್ನು ಇವತ್ತು ಹಾಸನದಲ್ಲಿ ನಿಲ್ಲಿಸಿದ್ದೀರಿ. ಅವರು ಒಂದು ಕಾಲದಲ್ಲಿ ಪ್ರಧಾನಿಯಾಗಿದ್ದರು. ಅವರನ್ನು ಮನೆಗೆ ಕಳಿಸುವಂತಹ ಪ್ರಯತ್ನ ಮಾಡುತ್ತೇವೆಂದು ನೀವು ಹೇಳುತ್ತಿದ್ದೀರಿ. ನಾವು ನಿಮ್ಮ ಸವಾಲನ್ನ ಸ್ವೀಕಾರ ಮಾಡುತ್ತೇವೆ. ನೀವು ನಾಳೆ 28ನೇ ತಾರೀಖು ಹಾಸನಕ್ಕೆ ಹೋಗಿ ಅಲ್ಲಿ ನಾಮ ಪತ್ರವನ್ನು ಸಲ್ಲಿಸುವ ಕಾರ್ಯವನ್ನು ಮಾಡಿ. ನಾವು ನಿಮ್ಮ ಸವಾಲನ್ನು ಸ್ವೀಕರಿಸತಕ್ಕಂತಹ ಕೆಲಸ ಮಾಡುತ್ತೇವೆ. ನಾಳೆ ಅವಕಾಶ ಇದೆ. ಭಾರತೀಯ ಜನತಾ ಪಕ್ಷದ ಪರವಾಗಿ ನೀವು ಆಡಳಿತ ಪಕ್ಷಕ್ಕೆ ಸವಾಲನ್ನು ಹಾಕಿದ್ದೀರಿ. ನಾವು ಆ ಸವಾಲನ್ನು ಸ್ವೀಕಾರ ಮಾಡಿದ್ದೇವೆ. ನಿಮಗೆ ಧೈರ್ಯ ಇದ್ದರೆ, ಸವಾಲನ್ನು ಸ್ವೀಕಾರ ಮಾಡತಕ್ಕಂತಹ ಶಕ್ತಿ ಇದ್ದರೆ, ಮಾನ್ಯ ದೇವೇಗೌಡರ ವಿರುದ್ಧವಾಗಿ ಬಿ.ಜೆ.ಪಿ. ವತಿಯಿಂದ ನೀವು ನಾಮಪತ್ರ ಮಾಡಿ ನೀವು ಅಲ್ಲಿಂದ ಗೆದ್ದು ಬನ್ನಿ. ನಿಮ್ಮ ಸವಾಲನ್ನು ನಾವು ಸ್ವೀಕಾರ ಮಾಡುತ್ತೇವೆ. ಇಲ್ಲದೇ ಹೋದರೆ ನೀವು ರಾಜಕೀಯದಿಂದ ನಿರ್ಗಮನವಾಗಲೇಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಇಷ್ಟನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮಗೆ ಮಾತೃ ಶಕ್ತಿಯ ಬಗ್ಗೆ ನಂಬಿಕೆ ಇದೆ. ನಾಳೆ ನಮ್ಮ ಸುಶೀಲಕ್ಕನವರು ನಾಮಿನೇಷನ್ ಫೈಲ್ ಮಾಡುತ್ತಿದ್ದಾರೆ.

ಶ್ರೀ ಎಂಸಿ.ನಾಣಯ್ಯ: ನಾವು ಶ್ರೀಮತಿ ಸುಶೀಲಕ್ಕನವರ ಬಗ್ಗೆ ಮಾತನಾಡಲಿಲ್ಲ. ಶ್ರೀ ಸುಶೀಲ ಶಿವಪ್ಪನವರು ನಮಗೆ ಗೊತ್ತಿದೆ. ನೀವು ಹಾಕಿರತಕ್ಕಂತಹ ಸವಾಲನ್ನು ನಾವು ಸ್ವೀಕಾರ ಮಾಡುತ್ತಿದ್ದೇವೆ. ನೀವು ಅವರನ್ನು ರಾಜಕೀಯದಿಂದ ಹೊರಗೆ ಕಳಿಸಬೇಕೆಂದು ತೀರ್ಮಾನ ಮಾಡಿದ್ದೀರಿ. ಒಂದು ಕಾಲದಲ್ಲಿ ಕೆಲವು ದಿವಸಗಳ ಹಿಂದೆ ತಾವು, ಮಾನ್ಯ ದೇವೇಗೌಡರು ಇಡೀ ಕರ್ನಾಟಕದ 28 ಜಿಲ್ಲೆಗಳಲ್ಲಿ ಎಲ್ಲಿ ಬೇಕಾದರೂ ನಿಲ್ಲಲಿ ಎಂದು ತಾವು ಹೇಳಿದಿರಿ. ಈಗ ತಾವು ಆ ಕೆಲಸ ಮಾಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಇದಕ್ಕೆ ಒಬ್ಬ ಮಹಿಳೆ ಸಾಕು. ಶ್ರೀಮತಿ ಸುಶೀಲಕ್ಕ ಅವರು ಒಬ್ಬರು ಸಾಕು. ನಮ್ಮ ನಾಯಕರು ಬೇಕಾಗಿಲ್ಲ. ನೀವೇನೂ ಹೆದರಿಕೆ ಪಡುವುದು ಬೇಕಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನನ್ನ ಚಿಂತನೆ ಬೇರೆ ಇದೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಬಿ.ಜೆ.ಪಿ.ಯಲ್ಲಿ ಒಬ್ಬರೇ ಮಹಿಳೆ ಸಾಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಯಾರೋ ಒಬ್ಬ ಹಳ್ಳಿಯ ರೈತನ ಮಗನಾಗಿ ಈ ರಾಜ್ಯದಲ್ಲಿ ಓಡಾಡುತ್ತಿದ್ದೇನೆ. ಈ 50 ವರ್ಷದ ಕರ್ಮ ಕಥೆಗೆ ಮಂಗಳ ಹಾಡಿ ಜನರ ವಿಶ್ವಾಸ ಗಳಿಸಿ ಸರಕಾರ ರಚನೆ ಮಾಡಿ ಈ ನಾಡಿನ ಜನರ ಕಣ್ಣೀರನ್ನು ಒರೆಸಬೇಕೆಂದು ನನ್ನ ಸಂಕಲ್ಪ ಇದೆ. ಆ ರೀತಿ ಸಂಕಲ್ಪ ತೊಟ್ಟಿರತಕ್ಕಂಥಹ ನಾನು ಒಂದು ಸವಾಲನ್ನು ಸ್ವೀಕರಿಸುತ್ತಿದ್ದೇನೆ. ಜನತಾ ದಳದವರು ಚುನಾವಣಾ ಪ್ರಚಾರ ಉದ್ಘಾಟನೆಯನ್ನು ಹೊಸಕೋಟೆಯಲ್ಲಿ ಮಾಡಿದಾಗ ಒಂದು ಮಾತು ಬಂತು. ಈ ದೇಶದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ದೇಶದಲ್ಲಿ ಪ್ರಧಾನಿಯಾದರೆ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ನಾನು ಆ ಚಾಲೆಂಜನ್ನು ಸ್ವೀಕಾರ ಮಾಡುತ್ತೇನೆ. ಆ ರೀತಿ ಸನ್ಯಾಸತ್ವ ಕೊಡಿಸುವುದಕ್ಕೆ ನಾಡಿನ ಜನರಲ್ಲಿ ವಿನಂತಿಸುತ್ತೇನೆ. ಆ ಕೆಲಸ ನಾನು ಮಾಡುತ್ತೇನೆ.

ಶ್ರೀ ಸಿ.ಬೈರೇಗೌಡ: ವಿಶ್ವಾಸ ಮತವನ್ನು ಯಾಚಿಸತಕ್ಕಂತಹ ಸಂದರ್ಭದಲ್ಲಿ ಅವರೇನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಚರ್ಚೆ ನಡೆಯಲಿ. ಅದನ್ನು ಬಿಟ್ಟು ಹೊಸಕೋಟೆ ಇನ್ನೊಂದು ಕಡೆ ಹೋಗುವುದು ಅವಶ್ಯಕತೆ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೇರವಾಗಿ ವಿಚಾರಕ್ಕೆ ಹೋಗೋಣ. ಇದು ನಾನು ಮಾಡಿದ್ದಲ್ಲ ಮಾನ್ಯ ದೇವೇಗೌಡರು ಮಾಡಿದಂತಹ ಚಾಲೆಂಜ್.

ಶ್ರೀ ಸಿ.ಬೈರೇಗೌಡ: ಇಲ್ಲಿ ಮಾನ್ಯ ಪಟೇಲರು ಏನು ಹೇಳಿದ್ದಾರೆ ಅದೊಂದಕ್ಕೂ ಅವರು ಉತ್ತರ ಕೊಡಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮ ನೋವು ಕಷ್ಟ ಏನು ಎಂದು ನಮಗೆ ಗೊತ್ತಾಗುತ್ತದೆ. 50 ವರ್ಷದ ಇತಿಹಾಸದಲ್ಲಿ ಮೊದಲ ಬಾರಿಗೆ ಅದರಲ್ಲೂ ಕನ್ನಡ ರಾಜ್ಯ ರಚನೆಯಾದ 41 ವರ್ಷದಲ್ಲಿ ಕೇಂದ್ರದಲ್ಲಿ ನಮ್ಮ ಕನ್ನಡಿಗರೊಬ್ಬರು ಪ್ರಧಾನಿಯಾಗಿದ್ದು ಅದೇ ರೀತಿ ಇಲ್ಲಿ ಅದೇ ಸರ್ಕಾರ ಇದ್ದು ಮಾನ್ಯ ಜೆ.ಹೆಚ್.ಪಟೇಲರು ಮಾನ್ಯ ಮುಖ್ಯಮಂತ್ರಿಗಳಾಗಿದ್ದುದು ಒಂದು ವಿಶೇಷ. ಇಂತಹ ಒಂದು ಸದವಕಾಶವನ್ನು ಉಪಯೋಗ ಮಾಡಿಕೊಂಡು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು, ಮಂತ್ರಿಗಳು ತಿಂಗಳಿಗೆ ಹತ್ತಾರು ಬಾರಿ ದೆಹಲಿಗೆ ಹೋಗಿ ಬಂದು ಯಾವ ಸಮಸ್ಯೆ ಬಗೆಹರಿಸಿದರು? ಕಾವೇರಿ ನದಿ ನೀರಿನ ವಿವಾದದ ಬಗ್ಗೆ ಕಣ್ಣೀರು ಹಾಕಿದಿರಿ. ಜಲಾನಯನ ಪ್ರದೇಶದ ಆ ಭಾಗದ ಜನತೆಗೆ ಎಂ.ಪಿ. ಆಗಿದ್ದಾಗ ದ್ರೋಹ ಮಾಡಿದಿರಿ. ಮುಖ್ಯಮಂತ್ರಿಗಳಾಗಿದ್ದಾಗ ನೀವು ಹೇಳಿದ್ದೇನು? ರಾಷ್ಟ್ರೀಯ ಜಲನೀತಿ

ಮಾರ್ಗಸೂಚಿಯೊಂದೇ ಇದಕ್ಕೆ ಪರಿಹಾರ ಎಂದು ಹೇಳಿದಿರಿ. ಕೊನೇಪಕ್ಷ ಆ ಕಾಲದಲ್ಲಿ ನರಸಿಂಹರಾಯರೇ ಸಂಬಂಧಪಟ್ಟ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದು ರಾಷ್ಟ್ರೀಯ ಜಲನೀತಿ ಮಾರ್ಗಸೂಚಿಯನ್ನು ಜಾರಿಗೆ ತರುವಂತಹ ಒಂದು ಹೆಜ್ಜೆಯನ್ನು ಮುಂದಿಟ್ಟಿದ್ದರು. ಕೇಂದ್ರದಲ್ಲಿ ನಮ್ಮ ರಾಜ್ಯದಿಂದ ಆಯ್ಕೆ ಆದಂತಹ ಸಚಿವರಿದ್ದರು. ಒಂದು ಬಾರಿ ಹೋಗಿ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್‌ನ್ನು ಫ್ರೇಮ್ ಮಾಡುವುದರ ಕಡೆಗೆ ಗಮನ ಹರಿಸುವಂತಹ ಪ್ರಯತ್ನವನ್ನು ನೀವು, ಪ್ರಧಾನಿಯವರು ಮಾಡಿದಿರೇನು? ಇಲ್ಲಿ ಹೋರಾಟವಾದಾಗ ಮೈಸೂರಿನಲ್ಲಿ ನಿಜಲಿಂಗಪ್ಪನವರ ಜೊತೆಯಲ್ಲಿ ಸಭೆ ಆಯಿತು. ರಾಷ್ಟ್ರೀಯ ಜಲನೀತಿ ಮಾರ್ಗಸೂಚಿ ಆಗಬೇಕು ಎಂದು ಹೋರಾಟ ಮಾಡಿದರು. ಆದರೆ ಅವರೇ ಪ್ರಧಾನಿಯಾಗಿದ್ದರೂ ಸಹ ಈ ಜ್ವಲಂತ ಸಮಸ್ಯೆಗೆ ಪರಿಹಾರ ಹುಡುಕಲಿಲ್ಲ. ಅದರ ಬದಲಿಗೆ ಬಚಾವತ್ ಆಯೋಗದ ತೀರ್ಮಾನದಂತೆ ಯಾವ ಆಲಮಟ್ಟಿ ಅಣೆಕಟ್ಟನ್ನು ನಾವಿಲ್ಲಿ ಬೊಬ್ಬೆ ಹೊಡೆದು, ಧರಣಿ ಮಾಡಿ, ಸತ್ಯಾಗ್ರಹ ಮಾಡಿ ಕಟ್ಟುತ್ತಿದ್ದೆವು ಅದಕ್ಕೆ ಕಾನೂನುಬಾಹಿರವಾದಂತಹ ತಜ್ಞರನ್ನು ಕರೆದುಕೊಂಡು ಬಂದು ಆ ಕೆಲಸ ಸ್ಥಗಿತವಾಗುವಂತೆ ಮಾಡಿ ದೇಶದ ಜನರ ಮುಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಪ್ರಯತ್ನವನ್ನು ನೀವು ಮಾಡಿದಿರಿ. ಆ ಸಮಯದಲ್ಲಿ ನಾನು ಬಿ.ಜೆ.ಪಿ. ಪಕ್ಷದಿಂದ ಸಾವಿರಾರು ಜನರೊಂದಿಗೆ ಧರಣಿ ಕುಳಿತು ಹೋರಾಟ ಮಾಡಿ ಅರೆಸ್ಟ್ ಆದೆವು. ಆಗ ಬಿಜಾಪುರದ ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ ಅವರೂ ಇದ್ದರು. ಆ ರೀತಿ ಅರೆಸ್ಟ್ ಆಗುವುದರ ಅಗತ್ಯ ಇತ್ತೆ? ಯಾವುದೋ ಒಂದು ರಾಜ್ಯದ ಮುಖ್ಯಮಂತ್ರಿಯನ್ನು ತೃಪ್ತಿಪಡಿಸುವುದಕ್ಕೋಸ್ಕರ, ನಿಮ್ಮ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈ ಸರ್ಕಾರ ಮತ್ತು ಕೇಂದ್ರ ಸರ್ಕಾರ ನಡೆದುಕೊಂಡ ರೀತಿ ಯಾವುದು? ಮಹಾಜನ್ ಆಯೋಗದ ವರದಿ ಜಾರಿಗೆ ತರಬೇಕೆಂಬುದು ಬಹಳ ವರ್ಷಗಳ ಬೇಡಿಕೆ. ಅದು ಜಾರಿಗೆ ಬಂತೇನು? ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಸ್ಥಾಪನೆಯಾಯಿತೇನು? ಹುಬ್ಬಳ್ಳಿಯಲ್ಲಿ ಪ್ರಾರಂಭವಾಗಬೇಕಾದ ನೈರುತ್ಯ ರೈಲ್ವೆ ವಲಯ ಆಯಿತೇನು? ಯಾವುದೂ ಆಗಲಿಲ್ಲ. ನೀವು ನಿಮ್ಮ ಕುರ್ಚಿಯ ಉಳಿವಿಗಾಗಿ ಇಂತಹ ಸದವಕಾಶ ನಿಮಗೆ ಸಿಕ್ಕಿದಾಗ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ದೆಹಲಿಗೆ ಹೋಗಿ ನಿಮ್ಮ ರಾಜಕಾರಣದ ತೀಟೆ ತೀರಿಸಿಕೊಂಡು ಬಂದರೇ ಹೊರತು ಈ ನಾಡಿನ ಜನರ ಹಿತವನ್ನು ಕಾಪಾಡುವಲ್ಲಿ ನೀವು ಸಂಪೂರ್ಣ ವಿಫಲರಾದಿರಿ. ಅದಕ್ಕಾಗಿ ನೀವು ಒಂದು ಕ್ಷಣ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನಿಮಗೆ ನೈತಿಕ ಹಕ್ಕಿಲ್ಲವೆಂದು ನಾನು ಹೇಳುತ್ತಿರುವುದು. ಜನ ತೀರ್ಪು ಕೊಡುವವರೆಗೂ ಏತಕ್ಕೆ ಕಾಯುತ್ತೀರಿ? ಮೂರು ತಿಂಗಳಲ್ಲಿ ರೆವಿನ್ಯೂ ಅಧಿಕಾರಿಗಳು, ಜಿಲ್ಲಾಧಿಕಾರಿಗಳನ್ನೆಲ್ಲಾ ಹಳ್ಳಿಹಳ್ಳಿಗೆ ಹಾಕಿದಿರಿ. ನೀವು ಮಾಡಿದ ಅಪರಾಧಕ್ಕೆ ಶಾಸಕರ ಮೂಲಕ ನಿವೇಶನರಹಿತ, ಮನೆರಹಿತ ಜನರಿಗೆ ಕಾನೂನಿನ ಪ್ರಕಾರ ಅರ್ಜಿಗಳನ್ನು ಕೊಡಿಸಿದಿರಿ. ಎಷ್ಟು ಜನರನ್ನು ಅದರಿಂದ ಗುರುತಿಸಿದಿರಿ, ಎಷ್ಟು ಜನರಿಗೆ ಮನೆ ಕಟ್ಟಿಸಿಕೊಟ್ಟಿದ್ದೀರಿ? ಎಷ್ಟು ಜನರಿಗೆ ಸೈಟ್

ಕೊಡಿಸಿದ್ದೀರಿ? ಮನೆ ಬಾಗಿಲಿಗೆ ಬಂದು ಸರ್ಕಾರದ ದೊಂಬರಾಟ ಮಾಡಿದಿರಿ. ಸಭೆ ಸಮಾರಂಭಗಳನ್ನು ಮಾಡಿದಿರಿ. ಅರ್ಜಿಗಳನ್ನು ತೆಗೆದುಕೊಂಡಿರಿ. ಅದು ಅಲ್ಲಿಗೆ ನಿಂತುಹೋಯಿತು. ಅರ್ಜಿಗಳಿಗೆ ಬೆಂಕಿ ಹಾಕಿ ಸುಟ್ಟಿರಿ. ಪರಿಹಾರ ಸಿಗಲಿಲ್ಲ. ಅಂತಹ ಸರ್ಕಾರ ಇವತ್ತು ಈ ರಾಜ್ಯದ ಆಡಳಿತ ನಡೆಸುತ್ತಿದೆ. ಬಡವರ ಬಗ್ಗೆ ಮಾತನಾಡುತ್ತೀರಿ. ನಿಮ್ಮ ಆಹಾರ ಸಚಿವರು ಇಲ್ಲಿ ಕುಳಿತಿದ್ದಾರೆ. ಅವರನ್ನೇ ಕೇಳಿ, ಕಳೆದ ಮೂರು ವರ್ಷದಿಂದ ಆರೂವರೆ ಲಕ್ಷ ಕುಟುಂಬಗಳ ಕಡುಬಡವರಿಗೆ ಹಸಿರುಕಾರ್ಡು ಸಿಗಲಿಲ್ಲ. ನಿಮಗೆ ಅವರ ಬಗ್ಗೆ ಕಳಕಳಿ ಇದೆಯೆ? ಆ ಕಡುಬಡವರು ಎರಡುಹೊತ್ತಿನ ಗಂಜಿಗೆ ಪರಿತಪಿಸುತ್ತಿರುವಂತಹ ಸಂದರ್ಭದಲ್ಲಿ ಆ ಕುಟುಂಬಗಳಿಗೆ ಹಸಿರು ಕಾರ್ಡು ಕೊಡಲು ನಿಮ್ಮ ಸರ್ಕಾರಕ್ಕೆ ಮೂರು ವರ್ಷ ಬೇಕೆ? ನೀವು ಜಾಗ ಖಾಲಿ ಮಾಡಿ ಹೋಗಿ, ನಾವು 24 ಗಂಟೆಯೊಳಗೆ ಆ ಕುಟುಂಬಗಳಿಗೆ ಹಸಿರುಕಾರ್ಡು ವಿತರಣೆ ಮಾಡುತ್ತೇವೆ. ನೀವು ಬಡವರ ಬಗ್ಗೆ ಅನುಕಂಪದ ಮಾತನಾಡುತ್ತೀರಿ. ಕಳೆದ 20 ವರ್ಷಗಳಲ್ಲಿ ಎರಡೂವರೆ ಮೂರು ಲಕ್ಷ ಕುಟುಂಬಗಳು ಅರಣ್ಯ ಇಲಾಖೆಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿವೆ. ದೊಡ್ಡ ದೊಡ್ಡವರು ಸೇರಿಕೊಂಡು ಅರಣ್ಯ ಲೂಟಿ ಮಾಡುತ್ತಿದ್ದಾರೆ. ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿದರು ಎಂದು ನಿಮ್ಮ ಪಕ್ಷದ ಅಧ್ಯಕ್ಷರ ಮೇಲೆ ಆರೋಪ ಇದೆ. ನಾನು ಆ ವಿವರಕ್ಕೆ ಹೋಗುವುದಿಲ್ಲ. ಆದರೆ ನಾನು ಇವತ್ತು ಕೇಳುತ್ತೇನೆ ನಿಮಗೆ ಓಟು ಕೊಟ್ಟು ಈ ಕುರ್ಚಿ ಕೊಟ್ಟಂತಹ ಬಡವರಿಗೆ ನೀವು ಸಹಾಯ ಮಾಡಿದಿರಾ? ಸಭೆ ಮಾಡಿದಿರಿ, ಒಂದು ಕಮಿಟಿ ಮಾಡಿದಿರಿ ಅಷ್ಟೆ. ಅವರಿಗೆ ಸಹಾಯ ಮಾಡುವುದಕ್ಕೆ ನಿಮಗೆ ಪುರುಸೊತ್ತು ಇದೆಯೆ? ಸಾಧನೆ ಬಗ್ಗೆ ಪಟ್ಟಿ ಓದುತ್ತೀರಿ. ಥರ್ಡ್ಸ್‌ನಲ್ಲಿ ಡೂಪ್ಲಿಕೇಟ್ ಟ್ಯಾಕ್ಸ್ ಲೇಬಲ್ ಹಾಕಿ ಎಕ್ಸೈಸ್ ಲಾಬಿ ಜೊತೆಗೆ ಸಂಧಾನ ಮಾಡಿಕೊಂಡಿರಿ. ನನ್ನ ಅಂದಾಜಿನ ಪ್ರಕಾರ ಸುಮಾರು 350,400 ಕೋಟಿ ರೂಪಾಯಿಯಷ್ಟು ಹಣವನ್ನು ಎಕ್ಸೈಸ್ ಇಲಾಖೆಯಿಂದ ನಮ್ಮ ಬೊಕ್ಕಸಕ್ಕೆ ತುಂಬಬಹುದು. ನಿಮ್ಮ ಕಣ್ಣ ಮುಂದೆಯೇ ಥರ್ಡ್ಸ್ ಅವ್ಯವಹಾರಕ್ಕೆ ಅವಕಾಶ ಮಾಡಿಕೊಟ್ಟಿರಿ. ಗ್ರಾನೈಟ್ಸ್ ಮಾಲೀಕರ ಜೊತೆ ಶಾಮೀಲಾಗಿ ಸರ್ಕಾರದ ಜಮೀನನ್ನು ಸುಪ್ರೀಂಕೋರ್ಟ್ ಇದು ನಮ್ಮದು ಎಂದು ಹೇಳಿದರೂ ಸಹ ಮತ್ತೆ ಕಲ್ಲು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟಿರಿ. ಅಂದರೆ ನಾವು ಇರುವುದು ಜನರ ಪ್ರತಿನಿಧಿಗಳಾಗಿಯೆ? ಈ ಲಾಬಿಗೆ ನೀವು ಮಣಿಯಲಿಲ್ಲ. ಜನಹಿತವನ್ನು ಬಲಿಕೊಟ್ಟಿರಿ. ಒಂದು ಸಾವಿರ ಕೋಟಿ ಯೂನಿಟ್ ವಿದ್ಯುತ್ ಕೊರತೆಯನ್ನು ಗ್ರಾಹಕರ ಮೈಮೇಲೆ ತಂದಿರಿ. ದಿನದಲ್ಲಿ ನಾಲ್ಕೈದು ಗಂಟೆಗಳ ಕಾಲ ವಿದ್ಯುತ್ ಇರುವುದಿಲ್ಲ. ಜಲಾಶಯಗಳು ತುಂಬಿದ್ದರೆ ಅದಕ್ಕೆ ಟ್ರಾನ್ಸ್‌ಮಿಷನ್ ಲೈನ್ ಇಲ್ಲ. ನೀವು ಮತ್ತು ಕಾಂಗ್ರೆಸ್‌ನವರು ಇಬ್ಬರೂ ಅಧಿಕಾರದಲ್ಲಿದ್ದಿರಿ. ನಾವಿದ್ದೇವೇನು? ಬಡ ರೈತರಿಗೆ ಉಚಿತವಾಗಿ ಕೊಡುತ್ತಿದ್ದ ವಿದ್ಯುತ್ತನ್ನು ಒಂದು ಹೆಚ್‌ಪಿಗೆ 300 ರೂಪಾಯಿ ಮಾಡಿದಿರಿ. ರೈತ 12 ಸಾವಿರ 15 ಸಾವಿರ ರೂಪಾಯಿ ಡೆಪಾಸಿಟ್ ಕಟ್ಟಬೇಕು. ನಾನು ನಿನ್ನೆ ದಿವಸ ನಮ್ಮ ಕ್ಷೇತ್ರಕ್ಕೆ ಹೋಗಿದ್ದಾಗ ಜನರು ಹೇಳುತ್ತಾರೆ. ಸ್ವಾಮಿ ಚುನಾವಣೆ ಬರುತ್ತದೆ,

ಹೋಗುತ್ತದೆ. ಆದರೆ ಈ ಸರ್ಕಾರ ಬದುಕಿದೆಯೇನು? ಕೆ.ಇ.ಬಿ. ಅಧಿಕಾರಿಗಳು ಅಲ್ಲಿ ಕುಳಿತುಕೊಂಡು ಕೆಪಾಸಿಟರ್ ಅಳವಡಿಸಲಿಲ್ಲ ಎಂದು ಹೇಳಿ ಮೂರು ಸಾವಿರ, ನಾಲ್ಕು ಸಾವಿರ ರೂಪಾಯಿ ವಸೂಲು ಮಾಡುವುದಕ್ಕೆ ನೋಟೀಸ್ ಕೊಡುತ್ತಿದ್ದಾರೆ. ಆ ಆದೇಶ ಹೊರಡಿಸಿದವರು ಯಾರು? ತಕ್ಷಣ ನೀವು ಹೋಗುತ್ತೀರೋ ಇಲ್ಲವೋ ನೀವು ಇದನ್ನು ಮಾಡಿ ಎಂದು ನಾನು ಹೇಳುವುದಿಲ್ಲ. ಆದರೆ ನೀವು ಈ ರಾಜ್ಯದಲ್ಲಿ ಏನು ನಡೆಸಿದ್ದೀರಿ? ಅಧಿಕಾರಿಗಳ ಮೇಲೆ ನಿಮಗೆ ಹತೋಟಿ ಇದೆಯೇ? ಬಡವರ ಸ್ಥಿತಿ ಏನಾಗುತ್ತಿದೆ ಎಂದು ನಿಮಗೆ ಗೊತ್ತಿದೆಯೇನು? ನಮ್ಮ ಸಿದ್ಧರಾಮಯ್ಯನವರಿಗೆ ಬೇಕು ಬೇಕಾದ ಎಲ್ಲಾ ಕಡೆ ಹಣ ಬಿಡುಗಡೆ ಆಯಿತು. ಆದರೆ ನಮ್ಮ ಶಿವಮೊಗ್ಗ ಜಿಲ್ಲೆಯ ಮೂರು ಕೋಟಿ ರೂಪಾಯಿ ಕಾಮಗಾರಿಯ ಹಣ 6 ತಿಂಗಳಾದರೂ ಬಿಡುಗಡೆ ಆಗಲಿಲ್ಲ. ಅದಕ್ಕಾಗಿ ಎರಡು ತಿಂಗಳಿನಿಂದ ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡುತ್ತಿದ್ದಾರೆ. ಇಷ್ಟಾದರೂ ಸರ್ಕಾರ ಬದುಕಿದೆಯೇನು? ತಾಲ್ಲೂಕು ಪಂಚಾಯತಿಗೆ ಸ್ಟ್ಯಾಂಪ್ ಡ್ಯೂಟಿಯಲ್ಲಿ ಒಂದು ಪಾಲು ಕೊಡಬೇಕಾಗಿತ್ತು. ಆ ಹಣ ರಿಲೀಸ್ ಮಾಡುತ್ತೇವೆ ಎಂದು ಹೇಳಿದಿರಿ. ಆದರೆ ನೀವು ಹಣ ಕೊಡುತ್ತಿಲ್ಲ. ಹೀಗಾದರೆ ಅಭಿವೃದ್ಧಿ ಆಗುತ್ತದೆಯೆ? ಹೆರಿಗೆ ಭತ್ಯೆಯನ್ನು ಕಳೆದ ಒಂದು ವರ್ಷದಿಂದ ಕೊಟ್ಟಿಲ್ಲ. ಅದಕ್ಕೆ ನೀವು ಕೇಂದ್ರ ಸರ್ಕಾರವನ್ನು ತೋರಿಸುತ್ತೀರಿ. ನೀವು ಬದುಕಿದ್ದೀರಾ? ಸ್ಪೆಶಲ್ ಕಂಪೋನೆಂಟ್ ಸ್ಕೀಂನಲ್ಲಿ ಬಂದಂತಹ ಹಣವನ್ನು ಖರ್ಚು ಮಾಡಲಿಲ್ಲ. ಎಸ್.ಸಿ./ಎಸ್.ಟಿ ಜನ ಇವತ್ತು ಸಾಯುತ್ತಿದ್ದಾರೆ. ಎ.ಪಿ.ಎಂ.ಸಿ. ಚುನಾವಣೆಯಾಗಿ ಸುಮಾರು ಎಂಟು, ಒಂಭತ್ತು, ತಿಂಗಳುಗಳಾಯಿತು. ಚುನಾಯಿತ ವ್ಯವಸ್ಥೆಯಲ್ಲಿ ನಿಮ್ಮ ಯಾರನ್ನೋ ಅಧ್ಯಕ್ಷನನ್ನಾಗಿ ಮಾಡುವುದಕ್ಕೋಸ್ಕರವಾಗಿ ಹಿಂಬಾಗಿಲಿನಿಂದ ನಾಮಿನೇಶನ್ ಮಾಡಬೇಕೆಂದು ಹೇಳಿ ಕೋರ್ಟಿನಲ್ಲಿ ಸಿಕ್ಕಿಸಿ ಆ ಸಂಸ್ಥೆ ಕೆಲಸ ಮಾಡದಂತೆ ಸಂದಿಗ್ಧದಲ್ಲಿ ತಂದಿಟ್ಟಿರುವಂತವರು ನೀವೇ ತಾನೆ? ಡಿಸ್ಟ್ರಿಕ್ಟ್ ಪ್ಲಾನಿಂಗ್ ಬೋರ್ಡ್ ಆಯಿತು. ಜನ ಪ್ರತಿನಿಧಿಗಳು ಚುನಾಯಿತರಾಗಿ ಆಯ್ಕೆಯಾಗಿದ್ದರು. ಅದಕ್ಕೆ ಅಧ್ಯಕ್ಷರನ್ನು ನೇಮಕ ಮಾಡಲಿಕ್ಕೆ ನಿಮಗೆ ಎಷ್ಟು ದಿವಸವಾದರೂ ಆಗಲಿಲ್ಲ. ನೀವು ಬದುಕಿದ್ದೀರಾ? ನಾನು ಈ ಸದನಕ್ಕೆ ಬಂದಾಗ ಎಲ್ಲರೂ ಕೂಗಿದರು. ಕೋರಮಂಗಲ ಕ್ರೀಡಾನಗರ ಯಾರ ಹಿತಕ್ಕೋಸ್ಕರ? ಹುಡ್ಕೋದಿಂದ ಸಾಲ ಮಾಡಿ ನೀವು 372 ಕೋಟಿ ರೂಪಾಯಿ ತಂದು ಕಟ್ಟಿದಿರೆಲ್ಲ, ಸರ್ಕಾರಿ ಅಧಿಕಾರಿಗಳಿಗೆ ಕ್ವಾರ್ಟರ್ಸ್ ಕಟ್ಟಿಸಿ ಕೊಡುವುದಕ್ಕೆ ಅದನ್ನು ಮಾಡಿದಿರಾ? ಬಡವರು ಮನೆ ಇಲ್ಲದೆ ಸಾಯುತ್ತಿದ್ದಾರೆ. ಸಾಲ ತೆಗೆದುಕೊಂಡು ಆ ಮನೆ ಕಟ್ಟುವುದರ ಬದಲಾಗಿ ಯಾವುದೋ ಒಳವ್ಯವಸ್ಥೆ ಮಾಡಿಕೊಂಡು ಖರ್ಚು ಮಾಡುತ್ತಿದ್ದೀರಿ ಎಂದು ವಿರೋಧ ಪಕ್ಷದ ನಾಯಕನಾಗಿದ್ದಾಗ ಕೂಗಿದೆ. ಆಗ ಅವರು ಯಡಿಯೂರಪ್ಪನವರೇ ಇದು ಇನ್ನೂ ಪ್ರಾರಂಭವೇ ಆಗಿಲ್ಲ ಎಂದು ಹೇಳಿದರು. ಇವೊತ್ತು 372 ಕೋಟಿ ರೂಪಾಯಿ ಏನಾಗಿದೆ? ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಿ ಕಟ್ಟುತ್ತಿದ್ದೀರಿ? ಅದು ಯಾರ ದುಡ್ಡು? ನಿಮ್ಮ ಹಿತ ಕಾಪಾಡುವವರು ದೇಶಕ್ಕೆ ಅನ್ನಕೊಡುವ ಅನ್ನದಾತ ರೈತ, ಕೃಷಿ ಕಾರ್ಮಿಕ ಮತ್ತು ಹರಿಜನ ಗಿರಿಜನ ಬಂಧುಗಳು. ಇಲ್ಲಿ ನೀವು ನಗರಗಳನ್ನು

ಕಟ್ಟಿಕೊಂಡು ಮಜ ಮಾಡುತ್ತೀರಿ.

ಅಧ್ಯಕ್ಷರು: ನೀವು ಮಾತನಾಡಲಾರಂಭಿಸಿ ಸರಿಯಾಗಿ 31 ನಿಮಿಷವಾಯಿತು. ಇನ್ನು 5 ನಿಮಿಷದಲ್ಲಿ ಮುಕ್ತಾಯ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇನ್ನು 5 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಇನ್ನೂ ವಿಷಯಕ್ಕೆ ಬಂದಿಲ್ಲ ಸ್ವಾಮಿ. ಏಕೆಂದರೆ ಇದು ಒಂದು ಒಳ್ಳೆಯ ಅವಕಾಶ. ಯಾವ ಸರ್ಕಾರ ಮೂರು ವರ್ಷ ನುಡಿದಂತೆ ನಡೆಯುತ್ತದೆ ಎಂದು ಹೇಳಿ, ಈಗ ಜನತೆಗೆ ವಂಚನೆ ಮಾಡಿ ಅಧಿಕಾರ ಬಿಟ್ಟು ತೊಲಗಿ ಹೋಗುವಂತಹ ಸಂದರ್ಭದಲ್ಲಿ ಅವರೇ ವಿಶ್ವಾಸಮತ ಗಳಿಸಿದಾಗ ಈ ರಾಜ್ಯದಲ್ಲಿ ಆಗಿರುವಂತಹ ಅನ್ಯಾಯ, ಅವ್ಯವಹಾರ ಜನತೆಗೆ ಮಾಡಿದ ದ್ರೋಹ ದಾಖಲೆಗೆ ಹೋಗಬೇಕಲ್ಲವೆ? ಅವಸರದಲ್ಲಿ ಈ ಸದನವನ್ನು ಮುಗಿಸುವಂತದ್ದಲ್ಲ. ಬೇಕಾದರೆ ನಾಳೆಗೂ ಮುಂದುವರೆಸೋಣ. ಚುನಾವಣೆಗಳಾಗುತ್ತವೆ; ಯಾರು ನಾಮಿನೇಷನ್ ಫೈಲ್ ಮಾಡುತ್ತಾರೆ ಅವರು ಹೋಗಲಿ, ಮಾಡಲಿ. ಕಳೆದ ಎರಡೂವರೆ ಮೂರು ತಿಂಗಳ ಹಿಂದೆ ಅಧಿವೇಶನವಾದ ಮೇಲೆ ಮತ್ತೆ ಅಧಿವೇಶನ ಕರೆಯಲಿಲ್ಲ. ಜನ ಸಾಯುತ್ತಿದ್ದಾರೆ. ಅಧಿವೇಶನ ಕರೆಯಿರಿ ಎಂದು ಬಡಿದುಕೊಂಡೆವು. ನೀವು ಕರೆಯಲಿಲ್ಲ. ಈಗ ನಿಮ್ಮ ಕುರ್ಚಿ ಉಳಿಸಿಕೊಳ್ಳುವ ಸಲುವಾಗಿ ಇವೊತ್ತು ಒಂದು ಅಧಿವೇಶನ ಕರೆದಿದ್ದಾರೆ. ಮುಖ್ಯಮಂತ್ರಿಗಳು ಏನು ಹೇಳಿದರು? ಹೊಸ ಕಾರ್ಯಕ್ರಮ ಗೋಷ್ಠಿ ಮಾಡುವುದಕ್ಕೆ ಬರುವುದಿಲ್ಲ, ಬೇಡ. ಆದರೆ ಮಾಡಿದ್ದೇನು ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳ ಬಗ್ಗೆ ನಾವು ಹೇಳಲಿಲ್ಲ. ನಿಮ್ಮ ಕೇಂದ್ರ ಸಚಿವರಾದ ಶ್ರಿ ಜಾಲಪ್ಪನವರು ಸಿ.ಬಿ.ಐ. ತನಿಖೆ ಆಗಬೇಕು ಎಂದು ಹೇಳಿದರು. ಆವತ್ತಿನ ಪ್ರಧಾನ ಮಂತ್ರಿಯಾಗಿದ್ದಂತಹ ಮಾಜಿ ಪ್ರಧಾನಿಯವರು ತನಿಖೆ ಆಗಬೇಕು ಎಂದು ಪತ್ರ ಬರೆದರು. ತನಿಖೆ ಆಗಬೇಕು ಎಂಬುದನ್ನು ಏತಕ್ಕೆ ಮುಚ್ಚಿಟ್ಟುಕೊಂಡಿರಿ? ಏತಕ್ಕ ತನಿಖೆ ಮಾಡಲಿಲ್ಲ?

ಶ್ರೀ ಜೆ.ಹೆಚ್.ಪಟೇಲ್: ತಾವು ಅನುಮತಿ ಕೊಟ್ಟರೆ, ''ಹುಚ್ಚ'' ಎಂಬ ಪದ ಬಳಸಬಹುದೋ, ಬಳಸಬಾರದೊ?

ಅಧ್ಯಕ್ಷರು: ಇದು ಅನ್ ಪಾರ್ಲಿಮೆಂಟರಿ ಅಲ್ಲ.

ಶ್ರೀ ಜೆ.ಹೆಚ್.ಪಟೇಲ್: ಒಬ್ಬರು ಮೇಷ್ಟ್ರು ಹುಡುಗರನ್ನೆಲ್ಲಾ ಕರೆದು ಬೆಂಗಳೂರಿನಿಂದ ಮೈಸೂರಿಗೆ 90 ಮೈಲಿ ದೂರ. ಬೆಲ್ಲ ಸಿಹಿ, ಹುಣಸೆಹಣ್ಣು ಹುಳಿಯಾಗಿರುತ್ತದೆಯಲ್ಲವೆ ಎಂದರಂತೆ. ಹುಡುಗರು ಹೌದು ಸಾರ್ ಎಂದರು. ಹಾಗಾದರೆ ನನ್ನ ವಯಸ್ಸೆಷ್ಟು ಎಂದು ಮೇಷ್ಟ್ರು ಕೇಳಿದರಂತೆ. ಬೆಂಗಳೂರಿನಿಂದ ಮೈಸೂರಿನ ದೂರಕ್ಕೂ, ಬೆಲ್ಲದ ಸಿಹಿಗೂ, ಹುಣಸೆಹಣ್ಣಿನ ಹುಳಿಗೂ, ಮೇಷ್ಟ್ರು

ವಯಸ್ಸಿಗೂ ಏನು ಸಂಬಂಧ ಎಂದು ಯೋಚಿಸಿದ ವಿದ್ಯಾರ್ಥಿಗಳು ನಮಗೆ ನಿಮ್ಮ ವಯಸ್ಸೆಷ್ಟು ಎಂದು ಗೊತ್ತಾಗಲಿಲ್ಲ ಸಾರ್ ಎಂದರಂತೆ. ಅವರಲ್ಲಿ ಒಬ್ಬ ವಿದ್ಯಾರ್ಥಿ ಎದ್ದು ನಿಂತು 'ನಿಮ್ಮ ವಯಸ್ಸು 44 ವರ್ಷಗಳು' ಎಂದನಂತೆ. ಮೇಷ್ಟ್ರು 'ಎಲಾ! ಸರಿಯಾಗಿ ಹೇಳದೆಯಲ್ಲಾ, ಹೇಗೆ ಹೇಳಿದೆ' ಎಂದರಂತೆ. ಆಗ ಆ ಹುಡುಗ 'ನಮ್ಮ ಮನೆಯಲ್ಲಿ ಒಬ್ಬ ಅರೆ ಹುಚ್ಚನಿದ್ದಾನೆ, ಅವನಿಗೆ 22 ವರ್ಷ. ಅದಕ್ಕೆ ನಿಮಗೆ 44 ವರ್ಷ' ಎಂದು ಹೇಳಿದನಂತೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮುಖ್ಯಮಂತ್ರಿಗಳ ಈ ರೀತಿಯ ಚಟಾಕಿಗೆ, ತಮಾಷೆಗಳಿಗೆ, ಇಂತಹ ವಿಷಯಕ್ಕೆ ನಾನು ತಪ್ಪು ತಿಳಿದುಕೊಳ್ಳುವುದಿಲ್ಲ. ಆದರೆ ನನಗೆ ಒಂದು ದುಃಖ, ನೋವು ಇದೆ. ಇವತ್ತು ಕೊನೆಯ ದಿವಸ ನಾನು ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರಿಗೆ ಕಿವಿಮಾತು ಹೇಳುತ್ತೇನೆ. ನಾನು ಈ ವಿಷಯಕ್ಕೆ ಹೇಳುತ್ತಿಲ್ಲ, ನೊಂದು ಹೇಳುತ್ತಿದ್ದೇನೆ. ನಿಮ್ಮ ನಾಲಿಗೆ ಮೇಲೆ ನಿಮಗೆ ಹತೋಟಿ ಇಲ್ಲ, ನಿಮ್ಮ ಮಂತ್ರಿಮಂಡಲದ ಮೇಲೆ ನಿಮಗೆ ಹತೋಟಿ ಇಲ್ಲ, ನಿಮ್ಮ ಆಡಳಿತದ ಮೇಲೆ ನಿಮಗೆ ಹತೋಟಿ ಇಲ್ಲ. ಅದಕ್ಕಾಗಿ ನೀವು ಸರ್ವನಾಶ ಆಗುತ್ತಿರುವುದು. ನೀವು ತಮಾಷೆ ಮಾಡಿದರೆ ನಾವು ಆನಂದಪಡುತ್ತೇವೆ. ಆದರೆ ಎಲ್ಲ ಸಮಯದಲ್ಲಿಯೂ ತಮಾಷೆ ಮಾಡುವುದಕ್ಕಾಗುವುದಿಲ್ಲ, ನೋವಾಗುತ್ತದೆ. ಕಳೆದ ಮೂರು ತಿಂಗಳಿನಿಂದ ಹಳ್ಳಿ ಹಳ್ಳಿಗೆ ಹೋಗಿದ್ದೇನೆ. ಅಲ್ಲಿನ ಜನತೆ ಏತಕ್ಕಾಗಿ ಈ ಲೋಕಸಭಾ ಚುನಾವಣೆ ಯಡಿಯೂರಪ್ಪನವರೇ? ಯಾರ ಉದ್ಧಾರಕ್ಕೋಸ್ಕರ ನೀವಿಬ್ಬರೂ ಬಡಿದಾಡಿಕೊಂಡು ಈ ಚುನಾವಣೆಗೆ ಬಂದಿದ್ದೀರಿ ಎಂದರು. ನಾನು ಹೇಳಿದೆ ''ಕಾಂಗ್ರೆಸ್ ಮತ್ತು ಜನತಾದಳದವರು ಬರುತ್ತಾರೆ, ಆಗ ಅವರನ್ನು ಬಡಿಗೆ ತೆಗೆದುಕೊಂಡು ಕೇಳಿ. ಬಿಜೆಪಿಯವರು ಸರ್ಕಾರ ಬೀಳಿಸುತ್ತಿಲ್ಲ'' ಎಂದು ಹೇಳಿದ್ದೇನೆ. ಅಲ್ಲಿಗೆ ಬಂದಾಗ ನಿಮಗದು ಗೊತ್ತಾಗುತ್ತದೆ. ನಾವು ಅದಕ್ಕೆ ಜವಾಬ್ದಾರರಲ್ಲ. ನಾನು ಆ ರೀತಿ ಹೇಳಿದ್ದರಲ್ಲಿ ತಪ್ಪೇನಿದೆ ಅಧ್ಯಕ್ಷರೆ? ಅದಕ್ಕೆ ಅವರು ಎದ್ದು ನಿಂತು ಆ ರೀತಿ ಹೇಳಿದ್ದೇಕೆ? ಅದು ದಾಖಲೆಯಲ್ಲಿಲ್ಲವೆ? ಇವರ ಕೇಂದ್ರ ಸಚಿವರಾದ ಜಾಲಪ್ಪನವರು ಕೃಷ್ಣಾ ಮೇಲ್ದಂಡೆ ಕಾಮಗಾರಿ ಬಗ್ಗೆ ಸಿ.ಬಿ.ಐ. ತನಿಖೆ ಆಗಬೇಕೆಂದು ಹೇಳಲಿಲ್ಲವೆ? ನಾನು ಹೇಳುವುದು ಬೇಡ, ಕೇಂದ್ರದಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವ ಒಬ್ಬ ಸಚಿವ, ಸಚಿವ ಸಂಪುಟದಲ್ಲಿದ್ದಾಗ ಹೇಳಿದರೆ ಅದನ್ನು ಮಾಡಬೇಕಲ್ಲವೆ? ಏತಕ್ಕೆ ಇದನ್ನು ಗೌಪ್ಯವಾಗಿಟ್ಟುಕೊಂಡಿದ್ದೀರಿ? ಅದರ ಒಳ ವ್ಯವಹಾರಗಳೇನು? ಜನ ನೋಡಬೇಕು ಎಂದು ಹೇಳುತ್ತಾರೆ. ನಾವು ದಾಖಲೆಗಳನ್ನು ನೋಡಿ ಅದನ್ನು ಬಹಿರಂಗ ಮಾಡುವಂತಹ ಕಾಲ ಇನ್ನೂ ಎರಡು ಮೂರು ತಿಂಗಳುಗಳಿರಬಹುದು; ಅಷ್ಟೆ. ದಾಖಲೆಗಳನ್ನು ಮುಚ್ಚಿಟ್ಟುಕೊಳ್ಳುತ್ತೀರೇನು? ಏನು ನಡೆಯುತ್ತಿದೆ ಎಂಬುದು ನಮಗೆ ಗೊತ್ತಿದೆ. ಆದರೂ ನಾವು ಬಾಯಿ ಮುಚ್ಚಿಕೊಂಡಿದ್ದೆವು.

2.50 ಪಿ.ಎಂ

ಸ್ವಾಮಿ, ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ವರದಿಗಾರ್ತಿಗೆ ನಾನು ಲಂಚ ಕೊಡುವುದಕ್ಕೆ ಯತ್ನಿಸಲಿಲ್ಲ, ಸೂಟ್‌ಕೇಸ್‌ನಿಂದ ಹಣ ತೆಗೆಯುತ್ತಿದ್ದೆ ಎಂದು ಯಾರು ಹೇಳಿದರು? ಅಲ್ಲಿ ಏನು ನಡೆದಿದೆ? ಈಗ ಮೊನ್ನೆ ಮೊನ್ನೆ ನಿಮ್ಮ ಬೃಹತ್ ಕೈಗಾರಿಕಾ ಮಂತ್ರಿಯಾಗಿದ್ದ ದೇಶಪಾಂಡೆಯವರು ದಿನಾಂಕ: 24- 1- 1998ರಂದು ಪತ್ರಿಕಾ ಗೋಷ್ಠಿ ಕರೆದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಮಾಜಿ ಪ್ರಧಾನಿ ನಾಗರೀಕ ವಿಮಾನ ಯಾನ ಕೇಂದ್ರ ಸಚಿವರು ಟಾಟಾ ಕಂಪನಿಯವರು ಕಮೀಷನ್ ಕೊಡಲಿಲ್ಲ ಎಂದು ಹೇಳಿ ಆ ಯೋಜನೆಗೆ ತಡೆಯಾಯಿತು ಎಂದು ದಾಖಲೆಗಳನ್ನು ಇಡಿ, ತೋರಿಸುತ್ತೇನೆ, ಯಾವ ರೀತಿ ವ್ಯವಹಾರಗಳು ನಡೆದಿವೆ ಎಂದು ಹೇಳಿದರು. You please come out. ನೀವು ಏನು ನಡೆಸಿದ್ದೀರಿ? ಜನರ ಹಿತ ಕಾಪಾಡುತ್ತಿದ್ದೀರಾ? ಜನರನ್ನು ಸಂಪೂರ್ಣ ಮರೆತು ಮನಬಂದಂತೆ ಅಧಿಕಾರವನ್ನು ನಡೆಸುತ್ತಿದ್ದೀರಾ?

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಈಗಲೂ ಅವರಿಗೆ ನಮ್ಮ ಸರ್ಕಾರದ ಮೇಲೆ ಸಿಟ್ಟಿಲ್ಲ. ಇನ್ನು ಎರಡು ವರ್ಷ ನಮ್ಮನ್ನೇನು ಅಲುಗಾಡಿಸುವುದಕ್ಕಾಗುವುದಿಲ್ಲ ಎನ್ನುವುದೂ ಗೊತ್ತಿದೆ. ಆದರೂ ಒಂದು ತರಹ ಸಿಟ್ಟಿನಿಂದ ಮಾತನಾಡುವುದು ನೋಡಿದರೆ ಏನು ಭಯಂಕರ ಸಿಟ್ಟಿನಿಂದ ಮಾತನಾಡಿಬಿಟ್ಟರು ಯಡಿಯೂರಪ್ಪನವರು ಎಂದು ಪಾಪ ಹಿಂದೆ ಟೇಬಲ್ ಕುಟ್ಟುತ್ತಾರೆ. ಅವರಿಗೋಸ್ಕರ ಆ ರೀತಿ ಮಾತನಾಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನನಗೆ ನಿಮ್ಮನ್ನು ನೋಡಿದರೆ ಆಯ್ಯೋ ಪಾಪ ಎನಿಸುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ವ್ಯವಹಾರ ನೋಡಿದರೆ ನನಗೆ ಏನು ಅನಿಸುತ್ತಿದೆ ಎಂದರೆ ಬಹಳಷ್ಟು ಜನ ಆ ಕಡೆಯಿಂದ ಈ ಕಡೆಗೆ ಬರುವ ಹಾಗೆ ಕಾಣಲಾರದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಸೂರ್ಯ, ಚಂದ್ರರು ಎಷ್ಟು ಸತ್ಯವೋ ಅಷ್ಟು ಇನ್ನ ಕೆಲವೇ ದಿವಸಗಳಲ್ಲಿ ನೀವು ಅಧಿಕಾರವನ್ನು ಕಳೆದುಕೊಂಡು ನಾವು ಅಲ್ಲಿ ಅಧಿಕಾರಕ್ಕೆ ಬರುವುದು ಸತ್ಯ. ಅದರಿಂದ ಪ್ರಶ್ನೆ ಏನು ಇದೆ? ಇದರ ಬಗ್ಗೆ ಏಕೆ ಚಿಂತನೆ ಮಾಡುತ್ತೀರಿ? ಸ್ವಾಮಿ, ಹರಿಜನ ಗಿರಿಜನರ ಉದ್ಧಾರದ ಬಗ್ಗೆ ಮಾತನಾಡಿದಿರಿ. ಇಲ್ಲಿ ಸಂಬಂಧಪಟ್ಟ ಸಚಿವರು ಇದ್ದಾರೆ, 1996-97ನೇ ಸಾಲಿನಲ್ಲಿ ಈ ಪರಿಶಿಷ್ಟ ವರ್ಗಗಳಿಗೆ ಬಂದಂಥ 118 ಕೋಟಿ 68 ಲಕ್ಷ ರೂಪಾಯಿಗಳನ್ನು 35 ಅಭಿವೃದ್ಧಿ ಇಲಾಖೆಗಳಲ್ಲಿ ವಾಪಸ್ ಪಡೆದು ಬೇರೆ ಬೇರೆ ಕಡೆ ಖರ್ಚು ಮಾಡಿದಿರಿ. ನೀವು ಹೇಳಿದರಲ್ಲ, ಅಭಿವೃದ್ಧಿ ಬಗ್ಗೆ ನೀವೇನು ಸಾಧನೆ ಮಾಡಿದ್ದೀರಿ ಎಂದು ಹೇಳಿ. ಆಶ್ರಯ ಯೋಜನೆಯಲ್ಲಿ ಕಳೆದ ಎರಡು ವರ್ಷಗಳಿಂದ ಮನೆ ಕಟ್ಟುವುದಕ್ಕೆ ದುಡ್ಡು ಕೊಡಲಿಲ್ಲ. ಈ ವರ್ಷ ಒಂದು ಮನೆ ಕೂಡ ಕಟ್ಟುವುದಕ್ಕೆ ಪ್ರಾರಂಭ ಮಾಡಲಿಲ್ಲ. ಎಂಥ ಸ್ಥಿತಿ? ಈ ರಾಜ್ಯ ಸರ್ಕಾರದ

ಅಧೀನದಲ್ಲಿರುವ ಪ್ರವಾಸಿ ಮಂದಿರದಿಂದಲೇ ಕಾಡುಗಳ್ಳ ವೀರಪ್ಪನ್ ನಾಗರೀಕರನ್ನು ಅಧಿಕಾರಿಗಳನ್ನು ಹಗಲೇ ಅಪಹರಿಸಿಕೊಂಡು ಹೋದ. ಒಬ್ಬ ನರಹಂತಕನಿಗೆ ಇಡೀ ರಾಜ್ಯಸರ್ಕಾರವೇ ತಲೆಬಾಗಿದೆ. ನೀವು ತಲೆ ಬಾಗಿದಿರಿ. ವೀರಪ್ಪನ್ ಶರಣಾದ ಶರಣಾದ ಎಂದು ಬೊಬ್ಬೆ ಹೊಡೆದು ನೀವೇ ವೀರಪ್ಪನ್‌ಗೆ ಶರಣಾದಿರಿ. ಇದು ನಿಮಗೆ ಶೋಭೆ ತರುತ್ತದೆಯೇ? ಪತ್ರಕರ್ತರು ಬೇಕೆಂದಾಗ ಕಾಡಿಗೆ ಹೋಗುತ್ತಾರೆ, ನರಹಂತಕನನ್ನು ಕಾಣುತ್ತಾರೆ. ನಿಮ್ಮ ಸರ್ಕಾರದ ಯೋಗ್ಯತೆಗೆ ಅವನನ್ನು ಹಿಡಿಯುವ ಪ್ರಯತ್ನವಾಗಲಿಲ್ಲ. ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿದೆವು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಬಹಳ ಹೊತ್ತು ಮಾತನಾಡುವಂಥ ಅಗತ್ಯವಿಲ್ಲ. ಕೊನೆಯಲ್ಲಿ ಒಂದು ತೊಟ್ಟು ನೀರು ಬಿಡುವ ಕಾಲದಲ್ಲಿ ನಾನೇಕೆ ನಿಮ್ಮ ಬಗ್ಗೆ ಚರ್ಚೆ ಮಾಡಲಿ? ನಾವು ಚರ್ಚೆ ಮಾಡುವಂಥದ್ದು ಅಗತ್ಯವಿಲ್ಲ. ಆದರೆ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ನಿಮ್ಮ ಕರ್ಮಕಾಂಡ, ಕಥೆ ಏನು ಇದೆ, ಅದರ ವಿವರವನ್ನು ಕೊಡುವುದಕ್ಕೆ ಹೋದರೆ ಮೂರು ದಿವಸ ಬೇಕು ಸಾರ್. ಅಷ್ಟು ಇದೆ, ಇವರ ಕರ್ಮಕಾಂಡ. ಆದರೆ ಕೆಲವು ಸ್ಯಾಂಪಲ್ ಹೇಳಿದ್ದೇನೆ, ಒಂದೇ ಒಂದು ದಯಮಾಡಿ ನಾಳೆ ಚುನಾವಣೆಗೆ ಹೋಗುವ ಸಂದರ್ಭದಲ್ಲಿ ಪ್ರಚಾರಕ್ಕೆ ಹೋಗುವ ಸಂದರ್ಭದಲ್ಲಿ ನೀವು ಒಪ್ಪುವುದಾದರೆ ಒಂದು ಛಾಲೆಂಜನ್ನು ನಾನು ಕೊಡುತ್ತೇನೆ. ನಾವು ನೀವು, ಮೂರು ಪಕ್ಷದವರೂ ಒಟ್ಟಿಗೆ ಹೋಗೋಣ. ಒಂದೇ ಪ್ಲಾಟ್ ಫಾರಂಗೆ ಏಕೆ ದುಡ್ಡು ಖರ್ಚು ಮಾಡುತ್ತೀರಾ? ಒಂದೇ ಪ್ಲಾಟ್‌ಫಾರಂನಲ್ಲಿ ಇರೋಣ ಮೂರು ಜನ. ಮೂರು ವರ್ಷ ನೀವು ಕಡಿದದ್ದೇನು? ರಾಜ್ಯದ ಜನರಿಗೆ ಭರವಸೆ ಕೊಟ್ಟಿದ್ದೇನು? ಹೇಳಿ ನೀವು. ನೀವು ಅವರು ಹೊಂದಿಕೊಂಡು ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗುವುದನ್ನು ತಪ್ಪಿಸಿ ಅದೇನೋ ಯು.ಎಫ್. ಸರ್ಕಾರವನ್ನು ಮಾಡಿದರಲ್ಲ; ಯು.ಎಫ್.ಸರ್ಕಾರ ಮಾಡಿಕೊಂಡು ಮತ್ತೆ ಕಚ್ಚಾಡಿಕೊಂಡು ಪಾಪ ದೇವೇಗೌಡರನ್ನು ಉಪಯೋಗ ಮಾಡಿಕೊಂಡು ಇದ್ದದ್ದನ್ನೆಲ್ಲಾ ಸರಿಪಡಿಸಿಕೊಂಡು ಅವರನ್ನು ಕೈಬಿಟ್ಟು ಈ ರೀತಿ ಮಾಡಿದಿರಿ. ಏತಕ್ಕಾಗಿ ಚುನಾವಣೆ ಬಂದಿದೆ, ಎಂದು ಕಾಂಗ್ರೆಸ್‌ನವರು ನೀವು ಉತ್ತರವನ್ನು ಕೊಡಿ. ಜನರು ಉತ್ತರ ಕೊಡುತ್ತಾರೆ. ಇಷ್ಟೇ ಮಾತು ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ, ಇಂಥ ದುಸ್ಥಿತಿ ಜೆ.ಹೆಚ್.ಪಟೇಲರಿಗೆ ಬರಬಾರದಾಗಿತ್ತು. ತನ್ನ ಕೊಲಿಗ್ಸ್, ತನ್ನ ಕ್ಯಾಬಿನೆಟ್‌ನಿಂದ ತನ್ನ ಸಚಿವರಿಂದ, ತಮ್ಮ ಸದಸ್ಯರಿಂದ ವಿಶ್ವಾಸ ಕಳೆದುಹೋಗುತ್ತಿದೆ, ಹೇಗಾದರೂ ಮಾಡಿ ಈ ಚುನಾವಣೆ ಮುಗಿಯುವವರೆಗೆ ನನ್ನ ಕುರ್ಚಿಯನ್ನು ಉಳಿಸಿಕೊಳ್ಳೋಣ ಎಂದು ಹೇಳುವ ಪರಿಸ್ಥಿತಿ ಉಂಟಾಗಿದೆ. ಆದರೆ ಇಷ್ಟು ತಿಳಿದುಕೊಳ್ಳಿ, ಇವತ್ತು ನಿಮ್ಮ ಪರವಾಗಿ ಕೈ ಎತ್ತಬಹುದು. ನಾಳೆ ನಡೆಯುವುದರ ವಿರುದ್ಧ ಕೈ ಎತ್ತಿ ಚುನಾವಣೆಗೆ ಮುಂಚೆಯೇ ಜನತಾದಳ ಸರ್ಕಾರ ನೆಗೆದುಬಿದ್ದುಹೋಗುತ್ತದೆ. ನಾವು ಜನರ ಮುಂದೆ ಹೋಗುತ್ತೇವೆ, ಜನತಾ ನ್ಯಾಯಾಲಯದ ಮುಂದೆ ಹೋಗುತ್ತೇವೆ, ಈ ತಪ್ಪನ್ನು ಮತ್ತೆ ಮಾಡಬೇಡಿ, ಭಾರತೀಯ ಜನತಾ ಪಾರ್ಟಿಗೆ ಒಂದು ಅವಕಾಶ ಮಾಡಿಕೊಡಿ ಎಂದು ಕೇಳುತ್ತೇವೆ. ಜನರು ನಮಗೆ

ಆ ರೀತಿ ಅವಕಾಶ ಮಾಡಿಕೊಡುತ್ತಾರೆ ಎನ್ನುವ ವಿಶ್ವಾಸ ಇದೆ. 50 ವರ್ಷದ ಈ ಕರ್ಮಕಥೆಗೆ ಮಂಗಳ ಹಾಡಿ ಹೊಸ ದಿಕ್ಕಿನಲ್ಲಿ ಕನ್ನಡ ನಾಡನ್ನು ನಾವು ಕಟ್ಟುತ್ತೇವೆ. ಈ ನಾಡಿನಲ್ಲಿ ಏನೂ ಕೊರತೆ ಇಲ್ಲ. ಸಂಪನ್ಮೂಲಕ್ಕೆ ಕೊರತೆ ಇಲ್ಲ. ಅದೆಲ್ಲವನ್ನೂ ದುರುಪಯೋಗ ಮಾಡಿಕೊಂಡು ಸರ್ಕಾರದ ಖಜಾನೆಗೆ ಬರುವುದನ್ನು ಲೂಟಿ ಮಾಡಿಕೊಂಡು ಕುಳಿತಿದ್ದೀರಿ. ಹಣಕಾಸಿನ ಪರಿಸ್ಥಿತಿ ಹದಗೆಟ್ಟು ಹೋಗಿದೆ. ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆ. ನೀವು ಬದುಕಿದ್ದೀರಿ. ಜನರು ಸಾಯುವ ಸ್ಥಿತಿಗೆ ಬಂದಿದ್ದಾರೆ. ದಯಮಾಡಿ ಈಗಲಾದರೂ ಎಚ್ಚರ ವಹಿಸಿ ತಮಗೆ ಮನವರಿಕೆಯಾಗಿದ್ದರೆ, ನಾಳೆ ರಾಜ್ಯಪಾಲರ ಹತ್ತಿರ ಹೋಗಿ ರಾಜೀನಾಮೆಯನ್ನು ಕೊಟ್ಟು ಉಸ್ತುವಾರಿ ಸರ್ಕಾರವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದರ ಬದಲು ಇಲ್ಲೇ ರಾಜೀನಾಮೆಯನ್ನು ಕೊಟ್ಟು ವಿಧಾನಸಭೆ ವಿಸರ್ಜನೆ ಮಾಡಿ ಜನತಾ ನ್ಯಾಯಾಲಯಕ್ಕೆ ಹೋಗೋಣ. ನಾನು ಹೇಳಿದ್ದೆ ಅಧ್ಯಕ್ಷರೆ, ಏಕೆ ಇವತ್ತು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಲೋಕಸಭಾ ಚುನಾವಣೆ ಬರುತ್ತಾ ಇದೆ. ಒಟ್ಟಿಗೆ ಚುನಾವಣೆ ಮಾಡೋಣ ಎಂದು ಹೇಳಿದ್ದೆ. ಆದರೆ ಕೇಳಲಿಲ್ಲ. ಈಗ ಅವರಿಗೆ ಅನಿಸುತ್ತಾ ಇದೆ, ಯಡಿಯೂರಪ್ಪನವರು ಹೇಳಿದ ಮಾತು ಕೇಳಬೇಕಾಗಿತ್ತು ಎಂದು. ಆದ್ದರಿಂದ ನಿಮ್ಮ ಸರ್ಕಾರ ಒಂದು ಕ್ಷಣ ಅಧಿಕಾರದಲ್ಲಿ ಮುಂದುವರಿಯುವಂಥ ನೈತಿಕ ಹಕ್ಕಿಲ್ಲ, ಇದನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಯಡಿಯೂರಪ್ಪನವರು, ಒಂದೇ ವೇದಿಕೆ ಮೇಲೆ ಮೂರು ಜನರೂ ಒಟ್ಟಿಗೆ ಸೇರೋಣ ಎಂದು ಹೇಳಿದ್ದಾರೆ. ಆದರೆ ಪಟೇಲರನ್ನು ಕರೆಯಬೇಡಿ, ಅವರು ಸೋಲಿಸಿಬಿಡುತ್ತಾರೆ, ಸ್ವಲ್ಪ ಕಷ್ಟ. ಪಾರ್ಟಿ ಗೀರ್ಟಿ ಪ್ರಶ್ನೆ ಅಲ್ಲ. ಪಟೇಲರನ್ನು ಕರೆಯುವುದಕ್ಕೆ ಹೋಗಬೇಡಿ. ಅವರನ್ನು ವೇದಿಕೆಗೆ ಕರೆದರೆ ಎಲ್ಲರೂ ಸೋಲಬೇಕಾಗುತ್ತದೆ. ವಸ್ತುಸ್ಥಿತಿಯನ್ನು ಹೇಳಿ ವಸ್ತುಸ್ಥಿತಿಯನ್ನು ಒಪ್ಪಿಕೊಂಡುಬಿಡೋಣ ನಾವು. ವಾದದಲ್ಲಿ ಮೊದಲನೇ ಸ್ಥಾನ ಅವರಿಗೆ. ಅದನ್ನು ಯಾರೂ ತಳ್ಳಿಹಾಕುವ ಪ್ರಶ್ನೆಯಿಲ್ಲ. ಆದರೆ ಈ ಮೂರು ಜನರನ್ನೂ ಸಭೆಗೆ ನೀವು ಕರೆಯುತ್ತಿದ್ದೀರಿ ಬನ್ನಿ ಎಂದು. ಆದರೆ ಅವರನ್ನು ಬಿಟ್ಟು ಬೇರೆ ಯಾರನ್ನಾದರೂ ಕರೆಯಿರಿ ಎಂದು ಹೇಳುತ್ತೇನೆ. ಸಾರ್ವಜನಿಕ ಸಭೆಯಲ್ಲೂ ಅವರ ಮಾತಿನಲ್ಲಿ ಚಾಣಾಕ್ಷತನ...

ಶ್ರೀ ಬಿ.ಎಸ್.ಯಡಿಯೂರಪ್ಪ: ದುಡ್ಡು ಏಕೆ ಖರ್ಚು ಮಾಡುತ್ತೀರಿ? ಒಂದೇ ಕಾರಿನಲ್ಲಿ ಎಲ್ಲಾ ಕಡೆ ಪ್ರಚಾರಕ್ಕೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್: ಒಂದೇ ಕಾರ್‌ನಲ್ಲಿ ಹೋದರೆ ಅವರಿಗೆ ನಂಬರ್ ಸಿಕ್ಕಿ ಬಿಡುತ್ತದೆ ಎಂದು ನಾನು ಹೇಳಿದ್ದು. ಅವರನ್ನು ಕರೆಯಬೇಡಿ, ಕರೆಯುವುದಕ್ಕೆ ಹೋಗಬೇಡಿ ಎಂದು ನಾನು ಹೇಳಿದ್ದು.

ಶ್ರೀ ಎಂ.ಪಿ.ಪ್ರಕಾಶ್: ಮೂರನ್ನೂ ಬಿಟ್ಟು ಕರೆಯಿರಿ ಎಂತಲೇ? ತಾವು ಮೂವರನ್ನೂ ಕರೆಯಿರಿ ಎನ್ನಲಿಲ್ಲ. ತಾವು ಮೂರನ್ನು ಬಿಟ್ಟು ಕರೆಯಿರಿ ಎಂದಿರಲ್ಲ.

ಅಧ್ಯಕ್ಷರು: ಇಲ್ಲಿ ಬಹುತೇಕ ಇಲ್ಲೆಲ್ಲಾ ಅವರೇ ಇದ್ದಾರೆ ಬಿಡಿ.

ಶ್ರೀ ವಾಟಾಳ್ ನಾಗರಾಜ್: ಆ ರೀತಿ ಸದನದಲ್ಲಿ ನಾವು ಗೌಪ್ಯವಾಗಿ ಮಾತನಾಡಿಕೊಳ್ಳೋಣ. ಈ ಸದನದಲ್ಲಿ ಅದನ್ನು ಹೇಳುವುದು ಬೇಡ. ಒಂದು, ಮೂಲಭೂತವಾಗಿ ನಾವು ಸರ್ಕಾರದ ಮೇಲೆ ಭ್ರಷ್ಟಾಚಾರದ ಆರೋಪಣೆ ಮಾಡುವುದಕ್ಕೆ ಬೇಕಾದಷ್ಟು ಇದೆ. ಮಾತನಾಡುವ ವಿಚಾರಗಳು ಅನೇಕ ಇವೆ. ಈ ಸಂದರ್ಭದಲ್ಲಿ ಸರ್ಕಾರ ಈ ಸಭೆಯನ್ನು ಏಕೆ ಇವತ್ತು ಕರೆದಿದ್ದಾರೆ? ಶಾಸನ ಸಭೆಯನ್ನು ಕರೆದಿರುವ ಉದ್ದೇಶವೇನು? ಈ ಸರ್ಕಾರಕ್ಕೆ ಸ್ಥಿರತೆ ಇದೆಯೇ ಇಲ್ಲವೇ ಎನ್ನುವುದು? ಏಕೆ ಕರೆಯಬೇಕಾಗಿತ್ತು ಇವರು? ಸರ್ಕಾರದಲ್ಲಿದ್ದಂಥ ಮೂರು ಜನ ಮಂತ್ರಿಗಳು, ಇಬ್ಬರು, ಮೂವರು ಶಾಸಕರು ರಾಜೀನಾಮೆಯನ್ನು ನೀಡಿ ನವನಿರ್ಮಾಣ ವೇದಿಕೆಗೆ ಸೇರಿ ನಾವು ಪಟೇಲರ ವಿರುದ್ಧ ಮತ ಹಾಕುತ್ತೇವೆ, ಆದರೆ, ಬಿಜೆಪಿ ಪರಪ್ರಚಾರ ಮಾಡುತ್ತೇವೆ ಎಂದು ಹೇಳಿ ಹೊರಗಡೆ ಹೋದ ನಂತರ ನಾಳೆ ನಾವು ಇಲ್ಲಿ ಕುಳಿತು ಪ್ರಾಮಾಣಿಕವಾಗಿ ಇಲ್ಲಿನ ವಸ್ತು ಸ್ಥಿತಿ ಬಗ್ಗೆ ಮಾತನಾಡೋಣ. ಚುನಾವಣೆ ಭಾಷಣ ಆಮೇಲೆ ಮಾಡೋಣ. ನಾಳೆ ಈ ರೀತಿ ಪ್ರಶ್ನೆ ಬಂದಾಗ ಸಭೆ ಕರೆಯದಿದ್ದರೆ ನಾವು ಏನು ಹೇಳುತ್ತಿದ್ದೆವು? ನಿಮ್ಮ ಸರ್ಕಾರಕ್ಕೆ ನಿಮಗೆ ನಂಬಿಕೆ ಇಲ್ಲ. ಈ ಸರ್ಕಾರ ಅಸ್ಥಿರವಾಗಿದೆ. ಆದ್ದರಿಂದ, ಸ್ಥಿರವಾದ ಸರ್ಕಾರವನ್ನು ನೀವು ತೋರಬೇಕು ಎನ್ನುವುದಾದರೆ ಕೂಡಲೇ ನೀವು ಶಾಸನಸಭೆಯನ್ನು ಕರೆಯಿರಿ, ಇಲ್ಲಾ ರಾಜೀನಾಮೆ ಕೊಡಿ ಎಂದು ಹೇಳತಕ್ಕಂಥದ್ದು ನಮ್ಮ ವಾದ; ಮತ್ತು ವಸ್ತುಸ್ಥಿತಿ. ಇದರ ಬಗ್ಗೆ ಪ್ರಾಮಾಣಿಕವಾಗಿ ಮಾತನಾಡೋಣ. ಈ ಸದನವನ್ನು ಕರೆದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸದನವನ್ನು ಕರೆದು ನನ್ನ ನಾಯಕತ್ವದ ಮೇಲೆ ಸದನಕ್ಕೆ ನಂಬಿಕೆ ಇದೆಯೇ ಇಲ್ಲವೇ ಎನ್ನುವುದನ್ನು ತೀರ್ಮಾನ ಮಾಡತಕ್ಕಂಥದ್ದು ಸದನದ ನಾಯಕರಿಗೆ ಬಿಟ್ಟಂಥ ಒಂದು ತೀರ್ಪು. ಆ ತೀರ್ಪಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೊದಲನೆಯವರಾಗಿದ್ದಾರೆ. ಅದರ ಬಗ್ಗೆ ನಾವು ಸ್ವಾಗತ ಮಾಡಲೇಬೇಕು. ಅದು ಹಿಂದೆ ಮುಂದೆ ಹೇಳುವ ಮಾತೇನಲ್ಲ. ಒಟ್ಟಿನಲ್ಲಿ ಸರ್ಕಾರವನ್ನು ಅಸ್ಥಿರಗೊಳಿಸಬಾರದು. ನಾವೇನು ಹೇಳುತ್ತಿದ್ದೇವೆ, ಎಂದರೆ ಕೇಂದ್ರದಲ್ಲಿ ಸ್ಥಿರ ಸರ್ಕಾರ ಬರಬೇಕು. ಆದರೆ ಕರ್ನಾಟಕದಲ್ಲಿ ಸರ್ಕಾರ ಅಸ್ಥಿರವಾಗಬೇಕೆ? ಕರ್ನಾಟಕದಲ್ಲಿ ಸ್ಥಿರ ಸರ್ಕಾರ ಆಗಬೇಕು. ಎಲ್ಲಾ ಬಿಟ್ಟು ಬನ್ನಿ ಎಲ್ಲಾ ಬಿಟ್ಟು ಬನ್ನಿ ನಾಳೆ ಬೆಳಿಗ್ಗೆ ಬನ್ನಿ ಎಂದು ಕಿವಿಯಲ್ಲಿ ಮಾತನಾಡಿದ್ದಾರೆ, ನಾಳೆ ಬೆಳಿಗ್ಗೆ ತೆರೆಯಲ್ಲಿ ಮಾತನಾಡುತ್ತಾರೆ. ನಾವೆಲ್ಲ ಸೇರಿ ಒಟ್ಟು ಒಂದು ಸ್ಥಿರ ಸರ್ಕಾರ ಮಾಡೋಣವೆಂದು ಹೋಗುತ್ತಿದ್ದೇವೆ. ಯಾರಿಗಾದರೂ ಸಹ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ಸ್ಥಿರವಾದ ಸರ್ಕಾರವನ್ನು ಬಿಟ್ಟು ಬನ್ನಿ ಎಂದು ಪಕ್ಷಾಂತರಕ್ಕೆ ಬಹಿರಂಗವಾಗಿ ಆಹ್ವಾನ ನೀಡತಕ್ಕದ್ದು

ಈ ದೇಶದಲ್ಲಿ, ಅದೂ ಇವತ್ತು ಐವತ್ತನೇ ಸ್ವಾತಂತ್ರ್ಯ ವರ್ಷದ ಸಂದರ್ಭದಲ್ಲಿ ಒಬ್ಬ ಮೇಧಾವಿ ಮುಖಂಡರು ಕರೆ ಕೊಡುವುದು. ಭಾರಿ ಭಾರಿ ರಾಷ್ಟ್ರೀಯ ಪಕ್ಷಗಳು ಇಲ್ಲಿ ಕುಳಿತು ಪಕ್ಷವನ್ನು ಬಿಟ್ಟು ಹೊರಗಡೆ ಬನ್ನಿ ಎಂದು ಹೇಳುವಂತಹ ಆಹ್ವಾನ ಏನು ಇದೆ ಇದು ಒಳ್ಳೆಯ ಸೂಚನೆ ಅಲ್ಲ. ಇದು ದೇಶದ ಅತ್ಯಂತ ಅಪಾಯಕಾರಿ ಬೆಳವಣಿಗೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದನ್ನು ಯಾರೂ ಮಾಡಬಾರದು. ಮೂರೂವರೆ ವರ್ಷಗಳ ಕಾಲ ಲೋಕಸಭೆ ಇತ್ತು ಇದು ಕಡಿಮೆ ಏನಲ್ಲ. ಈ ಮೂರೂವರೆ ವರ್ಷಗಳ ಕಾಲದಲ್ಲಿ ನಾವು ನಮ್ಮ ಸ್ವಪ್ರತಿಷ್ಠೆಯಿಂದ, ಅನೇಕ ವಿಚಾರಗಳಿಂದ ಹೊಂದಾಣಿಕೆ ಆಗದೇ ದೇಶದಲ್ಲಿ ನಗೆ ಪಾಟಲಾಗಿ ವಿದೇಶಗಳಲ್ಲಿ ಈ ದೇಶದ ಹಣೆಬರಹ ಐವತ್ತು ವರ್ಷವಾದಮೇಲೆ ಈ ರೀತಿ ಆಯಿತಲ್ಲ ಎಂದು ತೆಗಳತಕ್ಕ ಪರಿಸ್ಥಿತಿ ನಿರ್ಮಾಣ ಆಯಿತು. ಇನ್ನೂ ಮೂರೂವರೆ ವರ್ಷಗಳ ಕಾಲ ಜನ ಅಧಿಕಾರವನ್ನು ಕೊಟ್ಟಿದ್ದರು. ಐದು ವರ್ಷದಲ್ಲಿ ಒಂದೂವರೆ ವರ್ಷ ಮಾತ್ರ ಅಧಿಕಾರ ನಡೆಸಿದರು. ಇನ್ನೂ ಮೂರೂವರೆ ವರ್ಷ ಇರುವಾಗಲೆ ಲೋಕಸಭೆ ವಿಸರ್ಜನೆ ಆಗಿ ರಸ್ತೆಗೆ ಬಂದಿದ್ದೇವೆ. ಮತದಾರರಿಗೆ ನಾವೇನು ಹೇಳಬೇಕು? ಮತದಾರರ ಮುಂದೆ ಪ್ರಾಮಾಣಿಕವಾಗಿ ನಾವೆಲ್ಲ ರಾಜಕೀಯ ಪಕ್ಷದವರು ಹೃದಯ ಬಿಚ್ಚಿ ಮಾತನಾಡುವುದಾದರೆ ಏನು ಹೇಳಬೇಕು ಹೇಳಿ? ಸುಳ್ಳು ಹೇಳುತ್ತಿದ್ದೇವೆ, ಮೋಸ ಮಾಡುತ್ತಿದ್ದೇವೆ. ಕಪಟ ನಾಟಕ ಆಡುತ್ತಿದ್ದೇವೆ. ಈ ರೀತಿ ಜನರ ಮುಂದೆ ಹೋಗತಕ್ಕದ್ದು ಅಲ್ಲ. ಇವತ್ತು ಆ ಪರಿಸ್ಥಿತಿ ನಿರ್ಮಾಣ ಆಗಿದೆ. ಮತ್ತೆ ತಿರುಗಿ ಪಾರ್ಲಿಮೆಂಟಿಗೆ ಸುಭದ್ರ ಸರ್ಕಾರ ಬರುತ್ತದೆ ಎಂದು ಯಾರಿಗೆ ನಂಬಿಕೆ ಇರುತ್ತದೆ? ಮತ್ತೆ ಇನ್ನು ಒಂದೂವರೆ ವರ್ಷಕ್ಕೆ ಚುನಾವಣೆ ಆದರೆ ನನಗೆ ಅನಿಸುತ್ತದೆ, ಈ ದೇಶದಲ್ಲಿ ಚುನಾವಣೆಯ ಪದ್ಧತಿಯ ಬಗ್ಗೆ ಜನರಿಗೆ ಅಪನಂಬಿಕೆ ಬರುತ್ತದೆ. ಮತದಾನದ ಬಗ್ಗೆ ಅಪನಂಬಿಕೆ ಬರುತ್ತದೆ. ಚುನಾವಣಾ ಪದ್ಧತಿಯ ಬಗ್ಗೆ ಜನರಿಗೆ ಇರತಕ್ಕ ನಂಬಿಕೆ ಹೋಗುತ್ತದೆ. ಈ ವ್ಯವಸ್ಥೆ ಬದಲಾವಣೆ ಆಗತಕ್ಕ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ದೇಶದ ಚುನಾವಣಾ ಪದ್ಧತಿ ಅತ್ಯಂತ ಆದರ್ಶವಾದದ್ದು. ಈ ಚುನಾವಣಾ ಪದ್ಧತಿಗೆ ಅಪಾಯ ಒದಗಿದರೆ ನನಗೆ ಅನಿಸುತ್ತದೆ, ನಾವ್ಯಾರೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಶಾಸನ ಸಭೆ ಆಗಲಿ, ಲೋಕಸಭೆ ಆಗಲಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಒಳ್ಳೆಯ ಸೂಚನೆ ಅಲ್ಲವೆಂದು ನನಗೆ ಅನಿಸುತ್ತದೆ, ಕರ್ನಾಟಕ ಸರ್ಕಾರಕ್ಕೆ ಜನ ಅಧಿಕಾರವನ್ನು ಕೊಟ್ಟಿರತಕ್ಕದ್ದು ಐದು ವರ್ಷಗಳ ಕಾಲ. ಮೂರು ವರ್ಷಕ್ಕೆ ಅಲ್ಲ. ನಾನು ಮತ್ತೊಂದು ಮಾತು ಮುಂದೆ ಹೋಗಿ ಹೇಳುತ್ತೇನೆ. ಲೋಕಸಭೆಯ ಚುನಾವಣಾ ತೀರ್ಪು ಈ ಸರ್ಕಾರದ ಅಳಿವು ಉಳಿವಿಗೆ ಅಲ್ಲ ಎಂಬುದನ್ನೂ ನಾನು ಹೇಳುತ್ತೇನೆ. ಲೋಕಸಭೆಯ ತೀರ್ಪೇ ಬೇರೆ. ಇನ್ನು ಎರಡು ವರ್ಷಗಳ ಕಾಲ ಈ ಸದನ ಇರಲೇಬೇಕು. ಯಾವ ಕಾರಣಕ್ಕೂ ಈ ಸದನ ವಿಸರ್ಜನೆ ಆಗಬಾರದು. ಯಾವ ಕಾರಣಕ್ಕೂ ಈ ಸದನದ ವಿಸರ್ಜನೆಯನ್ನು ನಾವಂತೂ ಒಪ್ಪುವುದಿಲ್ಲ, ಎನ್ನತಕ್ಕ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದ್ದರಿಂದ, ಒಂದು

ಮಾತನ್ನು ಹೇಳುತ್ತಿದ್ದೇನೆ, ಸ್ಥಿರ ಸರ್ಕಾರ, ಅಸ್ಥಿರ ಸರ್ಕಾರ ಅಂದರೆ ನನ್ನ ಮತ ಸ್ಥಿರ ಸರ್ಕಾರದ ಪರವಾಗಿ. ಅಸ್ಥಿರ ಸರ್ಕಾರಕ್ಕೆ ಅಲ್ಲ. ಸ್ಥಿರ ಸರ್ಕಾರಕ್ಕೇ ಮತ ಕೊಡತಕ್ಕದ್ದು. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ನಾವು ಇಲ್ಲಿ ಬಂದು ಯಾರ ಪರ ಮಾತನಾಡುತ್ತೇವೆ, ವಿರುದ್ಧ ಮಾತನಾಡುತ್ತೇವೆ ಎನ್ನತಕ್ಕ ಪ್ರಶ್ನೆ ಅಲ್ಲ. ಇದು ಸ್ಪಷ್ಟವಾದ ಅಭಿಪ್ರಾಯ. ನಮ್ಮ ರಾಜ್ಯದ ಜನತೆ ಬಯಸತಕ್ಕದ್ದು ಸ್ಥಿರ ಸರ್ಕಾರವನ್ನೇ ಹೊರತು ಅಸ್ಥಿರ ಸರ್ಕಾರವನ್ನು ಅಲ್ಲ. ಆದ್ದರಿಂದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರ್ಕಾರವನ್ನು ಅಸ್ಥಿರತೆಗೊಳಿಸತಕ್ಕದ್ದು ಏನಿದೆ ಇದು ಅಪಾಯಕಾರಿ ಬೆಳವಣಿಗೆ. ನನಗೆ ಮಾನ್ಯ ಜೆ.ಹೆಚ್.ಪಟೇಲ್‌ರವರ ಬಗ್ಗೆ ವೈಯಕ್ತಿಕವಾಗಿ ಗೌರವ ಇದೆ. ಅವರು ಬಹಳ ಮೇಧಾವಿ, ಮತ್ತು ಬುದ್ಧಿವಂತರು. ಅದರ ಬಗ್ಗೆ ಎರಡನೇ ಅಭಿಪ್ರಾಯವೇ ಇಲ್ಲ. ಮತ್ತು ಕರ್ನಾಟಕಕ್ಕೆ ಬಂದಿರತಕ್ಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಂತ್ರಿಮಂಡಲದ ಸದಸ್ಯರಿಗೆ ಕಂಠಪೂರ್ತಿ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರತಕ್ಕಂಥ ಒಬ್ಬರೇ ಮುಖ್ಯಮಂತ್ರಿ ಅಂದರೆ ಶ್ರೀಮಾನ್ ಜೆ.ಹೆಚ್.ಪಟೇಲರು.

(ಸದನದಲ್ಲಿ ನಗು)

ಶ್ರೀಮತಿ ಪ್ರಮೀಳಾ ನೇಸರ್ಗಿ: ಕಂಠಪೂರ್ತಿ ಎಂದರೆ ಏನು?

ಶ್ರೀ ಯು.ಆರ್.ಸಭಾಪತಿ: ಕಂಠಪೂರ್ತಿ ಎಂದರೆ ಏನು ಎಂದು ಅರ್ಥ ಆಗಲಿಲ್ಲ.

ಅಧ್ಯಕ್ಷರು: ಮಾನ್ಯ ವಾಟಾಳ್ ಅವರೆ, ನಾನು ನಮ್ಮ ಕಾರ್ಯದರ್ಶಿಗಳ ಹತ್ತಿರ ಮಾತನಾಡುತ್ತಿದ್ದೆ. ತಾವು ಹೇಳಿದ್ದು ಕೇಳಿಸಿಕೊಳ್ಳಲಿಲ್ಲ. ಅದೇನೋ ನಗುವಿನಲ್ಲಿ ನಿಂತು ಹೋಯಿತು.

ಶ್ರೀ ವಾಟಾಳ್ ನಾಗರಾಜ್: ತಾವು ಕೇಳಿಸಿಕೊಳ್ಳಲಿಲ್ಲವೇನು? ನಿಮ್ಮದೇ ಈ ತರಹ ಪರಿಸ್ಥಿತಿ ಆದರೆ ನಮ್ಮ ಪರಿಸ್ಥಿತಿ ಏನು? ಮಾನ್ಯ ಜೆ.ಹೆಚ್.ಪಟೇಲರವರ ಬಗ್ಗೆ ನನಗೆ ಅಪಾರವಾದಂತಹ ಗೌರವ ಇದೆ. ಅವರು ಒಳ್ಳೆಯ ಮೇಧಾವಿ ಮತ್ತು ಒಳ್ಳೆಯ ಬುದ್ಧಿವಂತಿಕೆ ಇರತಕ್ಕವರು. ಅವರ ಬುದ್ಧಿವಂತಿಕೆ, ಒಳ್ಳೆಯತನವೇ ಅವರನ್ನು ಮುಂದುವರಿಸಿರತಕ್ಕದ್ದು - ಈ ಒಂದು ಸಿಡಿಲು ಗುಡುಗಿನ ಪರಿಸ್ಥಿತಿಯಲ್ಲಿ. ಆದರೆ ಒಂದು ಮಾತು, ಈ ದೇಶದಲ್ಲಿ ಯಾವುದೇ ಸರ್ಕಾರದ ಮುಖ್ಯಮಂತ್ರಿಗಳು, ಮಂತ್ರಿಗಳಿಗೆ ಕೊಡದೇ ಇರತಕ್ಕಂಥ ಸ್ವಾತಂತ್ರ್ಯವನ್ನು, ಕಂಠಪೂರ್ತಿ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಹೌದು ತಾನೇ? ಒಳಗೆ ಒಂದು, ಹೊರಗೆ ಒಂದು ಎಂತಲಾದರೂ ತಿಳಿದುಕೊಳ್ಳಬಹುದು; ಏನಾದರೂ ತಿಳಿದುಕೊಳ್ಳಬಹುದು, ಅದರ ಬಗ್ಗೆ ನನ್ನ ವಾದ ಇಲ್ಲ. ಅದು ಅವರವರಿಗೆ ಸೇರಿದ್ದು. ಆಮೇಲೆ ಒಂದು ವಿಚಾರ. ಯಾವದೇ ಮಂತ್ರಿಗಳು ಸರ್ಕಾರವನ್ನು ಬಿಟ್ಟು ರಾಜೀನಾಮೆ ಕೊಟ್ಟು ಅಥವಾ ವಿರೋಧ ಮಾಡಿ ಹೊರಗಡೆ ಹೋಗುವುದಕ್ಕೆ ಅಧಿಕಾರ ಇದೆ. ಅದರಲ್ಲಿ ಏನೂ ಯಾರೂ ತಡೆಯುವುದಕ್ಕೆ

ಆಗುವುದಿಲ್ಲ. ಯಾರೇ ಮಂತ್ರಿಗಳು ಆಗಿರಬಹುದು. ನಿಮ್ಮ ಮಂತ್ರಿಮಂಡಲದ ಬಗ್ಗೆ ನಮಗೆ ವಿಶ್ವಾಸ ಇಲ್ಲ, ನಾವು ಬೇರೆ ಕಡೆ ಹೋಗಬೇಕಾಗಿದೆ, ಅಂದರೆ ಹೊರಗಡೆ ಹೋಗತಕ್ಕ ಅಧಿಕಾರ ಪ್ರಾಮಾಣಿಕವಾಗಿ ಅವರಿಗೆ ಇದೆ. ನಾವು ಅದನ್ನು ತಡೆಯುವುದಕ್ಕೆ ಆಗುವುದಿಲ್ಲ. ಆದರೆ ಒಂದ ಮಾತು ನಾನು ಹೇಳುತ್ತೇನೆ. ನಾನು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಂತ್ರಿಗಿರಿಗೆ ರಾಜೀನಾಮೆ ಕೊಟ್ಟು ಇನ್ನೊಂದು ಸಂಸ್ಥೆಗೆ ಸೇರಿ ನಾವೆಲ್ಲಾ ಮತ್ತೆ ನಿಮಗೆ ಮತ ಹಾಕುತ್ತೇವೆಂದು ಹೇಳಿ ಇನ್ನೊಂದು ಕಡೆ ಮತ ಕೊಡಿ ಎಂದು ಹೇಳುವುದು, ಇದೊಂದು ತರಹ ದೊಂಬರಾಟ. ಯಾವ ಕಡೆ? ನಾವು ಈ ಕಡೆ ಸೇರುತ್ತೇವೆ ಎಂದು ಹೇಳುವುದು, ಈ ಕಡೆ ಮತ ಕೊಡುತ್ತೇವೆ ಎಂದು ಹೇಳುವುದು, ಇನ್ನೊಂದು ಕಡೆ ಮತ ಯಾಚನೆ ಮಾಡುತ್ತೇವೆ ಎಂದು ಹೇಳುವುದು ಇದೊಂದು ರೀತಿ ಒಂದಕ್ಕೊಂದು ಕೊಂಡಿ ಇಲ್ಲ, ಸಂಬಂಧ ಇಲ್ಲ. ಇದು ಒಳ್ಳೆಯದಲ್ಲ. ನಾನೇನು ಹೇಳುತ್ತೇನೆ, ಈ ಸದನದಲ್ಲಿ ಮಾನ್ಯ ಜೀವರಾಜ್ ಆಳ್ವರವರಿಗೆ ನಾನೊಂದು ಶಹಭಾಸ್‌ಗಿರಿ ಕೊಡುತ್ತೇನೆ. ಇವತ್ತು ಅವರು ಇಲ್ಲಿಲ್ಲ. ಮಾನ್ಯ ಆಳ್ವ ಅವರು ಬಿಜೆಪಿಯಲ್ಲಿದ್ದು ಹೊರಗಡೆ ಬರಬೇಕಾದರೆ ಈ ಸದನದಲ್ಲಿ ಮಾತನಾಡುವಾಗ ನಾನು ಸದಸ್ಯನಾಗಿದ್ದೂ, ಸದಸ್ಯತ್ವವನ್ನು ಉಳಿಸಿಕೊಂಡು ಹೊರಗೆ ಹೋಗುವುದಿಲ್ಲ. ನಿಮ್ಮ ಪಕ್ಷದ ಬಗ್ಗೆ ನನಗೆ ಅಪಾರವಾದ ಅಪನಂಬಿಕೆ ಇದೆ ಎಂದು ಹೇಳಿ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಂತಹ ನಿದರ್ಶನ ಇವತ್ತು ಇದೆ. ನಾನು ನಮ್ಮ ಸ್ನೇಹಿತರಿಗೆ ಹೇಳುತ್ತೇನೆ. ಪ್ರಾಮಾಣಿಕವಾಗಿ ಅವರು ಹೊರಗಡೆ ಹೋಗುವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಹುಡುಗಾಟಿಕೆ ಆಗಬಾರದು. ಇದು ಹುಡುಗಾಟಿಕೆ. ಸಣ್ಣ ಮಕ್ಕಳು ಗೋಲಿ ಆಟ ಆಡುವ ಮಕ್ಕಳೂ ಆಡಬಾರದು, ಆ ತರಹ ಆಗಬಾರದು. ಹೋಗುವುದು ಇದ್ದರೆ ಧೈರ್ಯವಾಗಿ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದೇನೆ, ಬೇರೆ ಪಕ್ಷ ಸೇರಿದ್ದೇನೆಂದು ಹೇಳಿದರೆ ಅದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದ ಒಳ್ಳೆಯ ನಿದರ್ಶನ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಕಿವಿ ಮಾತಾಗಿ ಹೇಳುತ್ತೇನೆ. ಅವರೆಲ್ಲಾ ನನ್ನ ಸ್ನೇಹಿತರು. ನಾನು ಯಾರ ಬಗ್ಗೆಯೂ ಮಾತನಾಡತಕ್ಕದ್ದು ಅಲ್ಲ. ಯಾರೇ ಇರಬಹುದು, ಪಕ್ಷ ಬಿಟ್ಟಿರತಕ್ಕ ಸ್ನೇಹಿತರ ಬಗ್ಗೆ ಹೇಳುತ್ತಿದ್ದೇನೆ. ಇವತ್ತು ಜನ ನೋಡಿ ನಗುತ್ತಿದ್ದಾರೆ. ಈಗ ಪ್ರಜಾವಾಣಿ, ಕನ್ನಡಪ್ರಭ ಹಾಗೂ ಎಲ್ಲ ಪತ್ರಿಕೆಯ ಸಂಪಾದಕೀಯವನ್ನು ತಾವು ಓದಬೇಕು. ಆ ಸಂಪಾದಕೀಯದಲ್ಲಿ ಮುಖಕ್ಕೆ ಮಂಗಳಾರತಿ ಹಾಕಿದ್ದಾರೆ. ಏನು ಇವರು ಸಣ್ಣ ಮಕ್ಕಳ ರೀತಿಯಲ್ಲಿ ಹೊರಗಡೆ ಹೋಗುತ್ತಿದ್ದಾರೆ. ಇದೇನಾದರೂ ಪ್ರಜಾ ತಂತ್ರದ ವ್ಯವಸ್ಥೆಯೇ? ಮೂರು ಬಾರಿ ಮಂತ್ರಿಗಳಾಗಿ, ಶಾಸಕರಾಗಿ ಇದ್ದವರು ಈ ರೀತಿ ಮಾಡತಕ್ಕದ್ದು ಸರಿಯಲ್ಲ ಎನ್ನತಕ್ಕ ಮಾತನ್ನು ನೇರವಾಗಿ ಅವರು ಬರೆದಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದನ್ನು ತಾವೂ ನೋಡಿರಬಹುದು. ಇನ್ನು ಈ ಚುನಾವಣೆಯ ಕಾಯಿದೆ ಬಗ್ಗೆ ತಿಳಿಸಿ ನಾನು ಕೊನೆಯ ವಿಷಯಕ್ಕೆ ಹೋಗುತ್ತಿದ್ದೇನೆ. ಚುನಾವಣೆಯ ಕಾಯಿದೆ ಸಮಗ್ರವಾಗಿ ಬದಲಾವಣೆ ಆಗದೇ ಇದ್ದರೆ ಕಷ್ಟ. ಈಗ ಎರಡು ಮೂರು ವಿಚಾರ.

ಒಬ್ಬ ಸದಸ್ಯನೇ ಹೊರಗೆ ಹೋಗಲಿ, ಗುಂಪೇ ಹೊರಗೆ ಹೋಗಲಿ, ಸದಸ್ಯತ್ವ ಸಂಪೂರ್ಣವಾಗಿ ರದ್ದಾಗಲೇಬೇಕು. ಒಬ್ಬರೇ ಹೋಗಲಿ, ಮೂವತ್ತು ಜನ ಹೋಗಲಿ, ಐದು ಜನ ಹೋಗಲಿ, ಸದಸ್ಯತ್ವ ರದ್ದಾಗಲೇಬೇಕು ಮತ್ತು ಈ ಚುನಾವಣೆಯ ವ್ಯವಸ್ಥೆ, ಏನು ಇದೆ, ಮದ್ಯ ಮತ್ತು ಹಣದ ಪ್ರಭಾವವಿಲ್ಲದಿರತಕ್ಕ ಒಂದು ಬದಲಾವಣೆ ಆಗಲಿಲ್ಲ ಎಂದರೆ ಯಾವುದೇ ಚುನಾವಣೆಯನ್ನು ನಾವು ನಡೆಸಿದರೂ ಅದು ಪ್ರಾಮಾಣಿಕವಾದಂತಹ ಚುನಾವಣೆ ಆಗುವುದಿಲ್ಲ. ಇವತ್ತು ನಾವು ಒಂದೊಂದು ಸಭೆಗೆ ಒಂದು ಕೋಟಿ ಎರಡು ಕೋಟಿ ರೂಪಾಯಿ ಖರ್ಚು ಮಾಡಿ ಸಾರ್ವಜನಿಕ ಸಭೆಯನ್ನು ಮಾಡುತ್ತೇವೆ. ಇದು ಚುನಾವಣೆಯ ಲೆಕ್ಕಕ್ಕೆ ಬರುವುದಿಲ್ಲ. ಚುನಾವಣೆಯ ಅಭ್ಯರ್ಥಿ ಖರ್ಚು ಮಾಡತಕ್ಕ ಲೆಕ್ಕ, ಅವನ ಪರವಾಗಿ ಖರ್ಚು ಮಾಡತಕ್ಕದ್ದು ಕೋಟ್ಯಾಂತರ ರೂಪಾಯಿ ಲೆಕ್ಕ ಇಲ್ಲ ಎಂದರೆ ನಾಚಿಕೆಗೇಡು ಈ ದೇಶದಲ್ಲಿ. ಅಂತಹ ಚುನಾವಣಾ ಪದ್ಧತಿಯಿಂದ, ಪ್ರಾಮಾಣಿಕವಾದಂತಹ ಚುನಾವಣೆಯು ನಡೆಯುವುದಿಲ್ಲ. ಮೂರನೆಯದಾಗಿ ಒಂದು ಸ್ಹಾರಿ ಐದು ವರ್ಷ ಚುನಾಯಿತ ಪ್ರತಿನಿಧಿ ಆಯ್ಕೆ ಆದನಂತರ ಯಾವ ಕಾರಣಕ್ಕೂ, ಶಾಸನ ಸಭೆ ಆಗಲಿ ಅಥವಾ ಲೋಕಸಭೆಯೇ ಆಗಲಿ ವಿಸರ್ಜನೆ ಆಗಬಾರದು. ಅದಕ್ಕೆ ಯಾವ ರೀತಿ ತಿದ್ದುಪಡಿ ತರಬೇಕು ಎಂದು ಯೋಚಿಸಿ ತಾವು ಪ್ರಾಮಾಣಿಕವಾಗಿ ತಿದ್ದುಪಡಿ ತರಬೇಕು. ಪಾರ್ಲಿಮೆಂಟೂ ಅಷ್ಟೇ ಅಸೆಂಬ್ಲಿಯೂ ಅಷ್ಟೇ. ಮಾನ್ಯ ಶೇಷನ್‌ರವರಿಗೆ ನಾನು ಇವತ್ತು ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ. ಅವರು ಇದ್ದಾಗ ಸ್ವಲ್ಪ ಭಯ ಭೀತಿ ಇತ್ತು. ಚುನಾವಣೆಯ ವ್ಯವಸ್ಥೆ ಮತ್ತು ಚುನಾವಣೆಯ ಪ್ರಕ್ರಿಯೆ ಆರಂಭಕ್ಕೆ ಮುನ್ನ ಶೇಷನ್ ಎಂದರೆ ಏನು ಎಂಬ ಭಯ ಇತ್ತು. ಇವತ್ತು ಆ ಭಯ ಭೀತಿ ಹೊರಟು ಹೋಗಿದೆ. ಒಂದು ರೀತಿ ದಿಕ್ಕು ತಪ್ಪಿ ಯಾವುದೋ ಒಂದು ಹಂತಕ್ಕೆ ಹೋಗುತ್ತಿದ್ದೇವೆ. ಕೊನೆಯದಾಗಿ ಹೇಳುತ್ತೇನೆ, ಪ್ರಳಯ ಎಂದರೇನು? ಮಾರ್ಚ್ ತಿಂಗಳಲ್ಲಿ ಪ್ರಳಯ ಆಗುತ್ತದೆಂದು ನಾನು ಕೇಳಿದ್ದೆ, ಆದರೆ ಈಗಲೇ ಪ್ರಳಯವಾಗಿದೆ. ಅಂದರೆ, ಡಿಸೆಂಬರ್‌ನಲ್ಲಿ ಲೋಕಸಭೆ ವಿಸರ್ಜನೆಯಾಯಿತು, ಇದು ಒಂದು ರೀತಿಯ ಪ್ರಳಯವೇ. ಪ್ರಳಯ ಎಂದರೆ ಭೂಮಿ ಸೀಳಬೇಕಾಗಿಲ್ಲ, ಆಕಾಶ ಕೆಳಗೆ ಬೀಳಬೇಕಾಗಿಲ್ಲ, ಇದೂ ಸಹ ಒಂದ ರೀತಿಯ ಪ್ರಳಯವೆ, ಅದರಲ್ಲಿ ಏನೂ ಅನುಮಾನವಿಲ್ಲ. ಮೂರೂವರೆ ವರ್ಷಗಳ ಕಾಲ ಇದ್ದಂತಹ ಲೋಕಸಭೆ ವಿಸರ್ಜನೆ ಆಗಬೇಕಾದರೆ ಅದು ಒಂದು ರೀತಿಯ ಪ್ರಳಯವೆ. ಮಾನ್ಯ ಮಾಜಿ ಪ್ರಧಾನಮಂತ್ರಿಯವರು ಎಂದೂ ದೇವರನ್ನು ಬಿಟ್ಟು, ಗಳಿಗೆ, ಗುಳಿಗೆಯನ್ನು ಬಿಟ್ಟು ಅವರು ನಾಮಪತ್ರವನ್ನು ಹಾಕಿದವರಲ್ಲ. ಆದರೆ ಅವರು ರಾಹು ಕಾಲದಲ್ಲಿ ತಮ್ಮ ನಾಮಪತ್ರವನ್ನು ಹಾಕಿದರು. ಇದು ಒಂದು ರೀತಿಯ ಪ್ರಳಯ ಅಲ್ಲವೆ? ಮತ್ತು ದೇವರ ಪ್ರಾರ್ಥನೆಯನ್ನೇ ಮಾಡದೆ ಇರತಕ್ಕಂತಹ ಶ್ರೀಮಾನ್ ಜೆ.ಹೆಚ್.ಪಟೇಲರ ಮನೆಯಲ್ಲಿ ಪೂಜೆ; ಇದು ಪ್ರಳಯವಲ್ಲವೆ? ಶ್ರೀಮಾನ್ ಎ.ಕೆ.ಸುಬ್ಬಯ್ಯನವರು ಹಗಲೂ-ರಾತ್ರಿ ಶ್ರೀ ಸಿ.ಎಂ.ಇಬ್ರಾಹಿಂ ಅವರನ್ನು ಹಿಂದೆ ಮುಂದೆ ಜಾಡಿಸಿ ಅವರಿಂದ ರಾಜೀನಾಮೆಯನ್ನು ಕೊಡಿಸಿ, ಅವರೇ ಜನತಾ ದಳಕ್ಕೆ

ಸೇರಿದ್ದು, ಇದು ಒಂದು ರೀತಿಯ ಪ್ರಳಯವಲ್ಲವೆ? ಶ್ರೀಮಾನ್ ಜೆ.ಹೆಚ್.ಪಟೇಲರು ಎಂದೂ ಅವರ ಹಣೆಗೆ ಕುಂಕುಮ ಇಟ್ಟುಕೊಂಡಿರಲಿಲ್ಲ, ಅಂತಹದರಲ್ಲಿ ಯಾರೋ ಕೆಲವರು ಅವರ ಸುತ್ತಾ-ಮುತ್ತಾ ಸೇರಿಕೊಂಡು ''ಸ್ವಾಮಿ, ನೀವು ದೇವಸ್ಥಾನಕ್ಕೆ ಹೋಗಿ, ಹಣೆಗೆ ದೇವರ ಕುಂಕುಮ ಇಟ್ಟುಕೊಳ್ಳಿ, ಪೂಜೆ ಮಾಡಿಸಿ, ಮಂಗಳಾರತಿ ಮಾಡಿಸಿ, ಅಕ್ಷತೆ ಹಾಕಿಸಿಕೊಳ್ಳಿ, ಶಬರಿ ಮಲೆಗೆ ಹೋಗಿ'' ಎಂದು ಹೇಳಿದರು, ಆದರೆ ಇದೆಲ್ಲಾ ಅವರಿಗೆ ಹಿಡಿಸುವುದಿಲ್ಲ; ಏಕೆಂದರೆ ಅವರ ವ್ಯವಸ್ಥೆಯೇ ಬೇರೆ, ಇದಕ್ಕೂ ಅದಕ್ಕೂ ಸಂಬಂಧವೇ ಇಲ್ಲ. ಆದರೂ ಅವರಿವರ ಒತ್ತಾಯಕ್ಕೆ ಹೋಗುತ್ತಾರೆಯೇ ಹೊರತು, ತಾವಾಗೇ ಹೋಗುವುದಿಲ್ಲ. ಅವರ ವ್ಯವಸ್ಥೆ ಬಗ್ಗೆ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ, ಅದನ್ನು ಬಹಿರಂಗ ಮಾಡುವುದು ಬೇಕಾಗಿಲ್ಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಸದನದಲ್ಲಿ ಇಷ್ಟು ವ್ಯವಸ್ಥಿತವಾಗಿ ಮಾತನಾಡುತ್ತಿರುವುದು, ಇದು ಒಂದು ರೀತಿಯ ಪ್ರಳಯವಲ್ಲವೇ ಸ್ವಾಮಿ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಹಿರಿಯ ಮುಖಂಡರಾದಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಭಾರತೀಯ ಜನತಾ ಪಕ್ಷ ಸರಿ ಇಲ್ಲ, ಅದು ಜಾತಿ ವಾದಿ, ಈ ಪಕ್ಷ ಬರಬಾರದು ಎಂದು ಹಗಲು-ರಾತ್ರಿ ನಿರಂತರವಾಗಿ ಮಾತನಾಡಿದಂತವರು ಇವತ್ತು ಬಿ.ಜೆ.ಪಿ. ಜೊತೆ ಸೇರಿಕೊಂಡಿರುವುದನ್ನು ನೋಡಿದರೆ, ಇದು ಒಂದು ರೀತಿಯ ಪ್ರಳಯ, ಶ್ರೀ ಬಿ.ಎಸ್.ಯಡಿಯೂರಪ್ಪನವರು, ಮತ್ತು ಡಾ॥ ಜೀವರಾಜ ಆಳ್ವರವರು ಹೇಗಿದ್ದರು ಅಂದರೆ, ಒಬ್ಬರಿಗೊಬ್ಬರು ಕೈ ಮುರಿದುಕೊಳ್ಳುವ ಹಾಗೆ ಇದ್ದರು. ಆದರೆ ಇವತ್ತಿನ ದಿವಸ ಇವರಿಬ್ಬರ ಆಲಿಂಗನ, ಇದು ಒಂದು ರೀತಿಯ ಪ್ರಳಯ.

ಒಬ್ಬ ಸದಸ್ಯರು: ಎಲ್ಲರೂ ಪ್ರಳಯ ಆದಮೇಲೆ ನೀವು ಒಬ್ಬರೇ ಇದ್ದು ಏನು ಮಾಡುತ್ತೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ: ಶ್ರೀ ವಾಟಾಳ್ ನಾಗರಾಜ್ ಅವರು ಒಬ್ಬರೇ ಆಗಿ ಅವರ ಜೊತೆ ಯಾರೂ ಹೋಗದೆ ಇರುವುದು ಪ್ರಳಯ.

ಶ್ರೀ ವಾಟಾಳ್ ನಾಗರಾಜ್: ನೀವು ನೋಡಿ, ನಾನು ಯಾವತ್ತಾದರೂ ಮುಖ್ಯ ಮಂತ್ರಿ ಆಗೇ ಆಗುತ್ತೇನೆ.

(ನಗು)

ನೀವು ಎಷ್ಟೇ ನಗಬಹುದು, ನಾನು ಒಂದಲ್ಲ, ಒಂದು ದಿವಸ ಈ ಸದನದಲ್ಲಿ ಮುಖ್ಯ ಮಂತ್ರಿಯಾಗಿ ಬಂದೇ ಬರುತ್ತೇನೆ. ಇದರ ಬಗ್ಗೆ ನನಗೆ ಛಲ ಇದ್ದೇ ಇದೆ. ಅದರ ಬಗ್ಗೆ

ನೀವು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗಬೇಡಿ.

ಒಬ್ಬ ಸದ್ಯಸರು: ಆಗ ನಿಜವಾಗಲೂ ಪ್ರಳಯ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಕಾಂಗ್ರೆಸ್ ಪಕ್ಷದ ಪ್ರಚಾರಕ್ಕಾಗಿ ಶ್ರೀಮತಿ ಸೋನಿಯಾ ಗಾಂಧಿಯವರು ಬಂದಿದ್ದು ಒಂದು ರೀತಿಯ ಪ್ರಳಯ. ಇದರಲ್ಲಿ ಅನುಮಾನವೇ ಇಲ್ಲ. ಪ್ರಳಯ ಎಂದರೆ ಭೂಮಿ ಸೀಳಬೇಕಾಗಿಲ್ಲ, ಇವೆಲ್ಲವೂ ಪ್ರಳಯಕ್ಕೆ ಕಾರಣಗಳು. ಕುಮಾರಿ ಜಯಲಲಿತ ಅವರು ಬೆಳೆದು ಬಂದ ಹಿನ್ನಲೆ ಬೇರೆ ರೀತಿಯದು, ಆದರೆ ಅವರು ಬಿ.ಜೆ.ಪಿ.ಜೊತೆ ಸೇರಿರುವುದು, ಅದೂ ಒಂದು ರೀತಿಯ ಮಹಾ ಪ್ರಳಯವೆ, ಅದರಲ್ಲಿ ಬೇರೆ ಮಾತೇ ಇಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ಇವತ್ತಿನ ದಿವಸ ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಇಂಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸುವುದರಲ್ಲಿ ನಾವು ಅಪಾಯಕ್ಕೆ ಸಿಲುಕಿದ್ದೇವೆ. ಕೊನೆಯದಾಗಿ, ಮಾನ್ಯ ಜೆ.ಹೆಚ್.ಪಟೇಲರ ಸರ್ಕಾರದ ತೀವ್ರತೆ ಹೇಳದಿದ್ದರೂ ಒಂದು ಜಾಹಿರಾತನ್ನು ತಮ್ಮ ಮುಂದೆ ಓದುತ್ತೇನೆ. ತಾವು ದಯವಿಟ್ಟು ಅವಕಾಶ ಕೊಡಬೇಕು.

''ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ''- ಈ ಜಾಹಿರಾತಿನಲ್ಲಿ ಮಹಾತ್ಮ ಗಾಂಧಿ ಅವರ ಚಿತ್ರ, ಮಧ್ಯದಲ್ಲಿ ಶ್ರೀ ಜೆ.ಹೆಚ್.ಪಟೇಲರ ಚಿತ್ರ, ಕೊನೆಯಲ್ಲಿ ಮಂಡಳಿ ಅಧ್ಯಕ್ಷರ ಚಿತ್ರ. ಏನು ಹೇಳುತ್ತೀರಾ ತಾವು? ಕರ್ನಾಟಕದ ಮಹಾ ಜನತೆಗೆ ಗಣರಾಜ್ಯೋತ್ಸವದ ಶುಭಾಶಯಗಳು. ಒಂದು ದೇಶದ, ಒಂದು ರಾಜ್ಯದ ಅಭಿವೃದ್ಧಿ, ಸದೃಢವಾದ, ಮತ್ತು ಕಾರ್ಯಶೀಲವಾದ ಜನಾಂಗದ ಮೇಲೆ ಅವಲಂಬಿತವಾಗಿರುತ್ತದೆ. ಜೀವನದಲ್ಲಿ ಶಿಸ್ತು, ಸಂಯಮ, ಕರ್ತವ್ಯ ಪ್ರಜ್ಞೆ, ಸದಾಚಾರಗಳು ಮಾನವನ ಏಳಿಗೆಗೆ ಹಾಗೂ ತನ್ಮೂಲಕ ದೇಶದ ಏಳಿಗೆಗೆ ಸಹಕಾರಿಯಾಗಿರುತ್ತದೆ. ದುರಭ್ಯಾಸಗಳು, ಮಾನವನ ಅಧೋಗತಿಗೆ ಕಾರಣ. ಅದರಲ್ಲೂ ಮದ್ಯಪಾನ ಮತ್ತು ಮಾದಕ ವಸ್ತುಗಳು ಇನ್ನೂ ಅಪಾಯಕಾರಿ. ಶ್ರೀ ಜೆ.ಹೆಚ್.ಪಟೇಲರ ಫೋಟೋ ಇದರಲ್ಲಿ ಇದೆ. ಇವು ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ತುಂಬಾ ಅಪಾಯಕಾರಿ.

ಶ್ರೀ ಜೆ.ಹೆಚ್.ಪಟೇಲ್: ಶ್ರೀ ವಾಟಾಳ್‌ರವರೆ, ಮದ್ಯಪಾನದ ಬಗ್ಗೆಯೇ ಒಂದು ದಿವಸ ಸದನದಲ್ಲಿ ಚರ್ಚೆ ಮಾಡಿದ್ದೆವು. ಆಗಲೂ ಸಹ ನಾನು ಹೇಳಿದ್ದು, ಮದ್ಯಪಾನದ ಪೂರ್ಣ ನಿಷೇಧ ಜಗತ್ತಿನಲ್ಲಿ ಎಲ್ಲೂ ಸಾಧ್ಯವಾಗಿಲ್ಲ. ಆದರೆ ಸಂಯಮದಿಂದ ಮಾತ್ರ ಸಾಧ್ಯ. ಇವತ್ತು ಯುರೋಪಿಗೆ, ಅಮೇರಿಕಾಗೆ ಹೋಗಿ ಬಂದಿರತಕ್ಕಂತವರು ತಾವಾಗೇ ತಮ್ಮ ಕುಡಿತವನ್ನು ಕಡಿಮೆ ಮಾಡಿದ್ದಾರೆ, ತಾವಾಗೇ ತಮ್ಮನ್ನು ನಿಯಂತ್ರಿಸಿಕೊಳ್ಳುತ್ತಿದ್ದಾರೆ. ಆ ರೀತಿ ನಿಯಂತ್ರಿಸಿಕೊಳ್ಳಬೇಕು ಎನ್ನುವುದು ಕುಡಿದವರಿಗೆ ಮಾತ್ರ ಗೊತ್ತು ನಿಮ್ಮಂತವರಿಗೆ ಏನು ಗೊತ್ತು?

ಶ್ರೀ ವಾಟಾಳ್ ನಾಗರಾಜ್: ಸನ್ಮಾನ್ಯ ಅಧ್ಯಕ್ಷರೆ, ನಾನು ಕುಡಿಯದೆ ಇದ್ದರೂ,

ಕುಡಿಯುತಕ್ಕಂತಹ ಶ್ರೀ ಪಟೇಲರು, ಶ್ರೀ ನಂಜೇಗೌಡರ ಪಕ್ಕ ಕುಳಿತು, ಕುಳಿತು ಅಭ್ಯಾಸವಾಗಿದೆ ಸ್ವಾಮಿ. ಅದು ಹೊಸದಾಗಿ ಅಭ್ಯಾಸ ಆಗಬೇಕಾಗಿಲ್ಲ, ನಿರಂತರವಾಗಿ ಅಭ್ಯಾಸವಾಗಿದೆ. ಇದು ತಮಗೂ ಗೊತ್ತಲ್ಲ ಸ್ವಾಮಿ, ತಾವೂ ಕುಳಿತಿದ್ದೀರಿ. ಇದರಲ್ಲಿ ಮುಚ್ಚುಮೊರೆ ಏನೂ ಇಲ್ಲ.

(ನಗು)

ಅಧ್ಯಕ್ಷರು: ಶ್ರೀ ವಾಟಾಳ್ ಅವರೇ, ನನ್ನನ್ನು ನಿಮ್ಮ ಲಿಸ್ಟ್‌ಗೆ ಹಾಕಿದ್ದೀರಾ, ಇಲ್ಲ, ಅವರಿಬ್ಬರ ಲಿಸ್ಟ್‌ಗೆ ಹಾಕಿದ್ದೀರಾ?

ಶ್ರೀ ವಾಟಾಳ್ ನಾಗರಾಜ್: ಸಂಯಮ ಎಂದು ಹೇಳಿದ್ದರೆ, ನಾನು ಒಪ್ಪುತ್ತಿದ್ದೆ. ಅದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮದ್ಯಪಾನ ಮತ್ತು ಮಾದಕ ವಸ್ತುಗಳು ಹೆಚ್ಚು ಅಪಾಯಕಾರಿ. ಜನರ ಜೀವನದಲ್ಲಿ ಶಾಂತಿ, ನೆಮ್ಮದಿ ಇಲ್ಲದಂತೆ ಮಾಡಿ ಸದಾ ನರಕದಲ್ಲಿ, ಸಂಕಷ್ಟದಲ್ಲಿ ಬಿದ್ದು ಹೊರಳಾಡುವಂತೆ ಮಾಡುತ್ತದೆ. ಈ ಮಾತನ್ನು ತಾವು ಜಾಹಿರಾತಿನಲ್ಲಿ ಕೊಟ್ಟಿದ್ದೀರಿ.

ಶ್ರೀ ಜೆ.ಹೆಚ್.ಪಟೇಲ್: ಕಮಿಟಿ ಹೆಸರು ಏನು?

ಶ್ರೀ ವಾಟಾಳ್ ನಾಗರಾಜ್: ಕಮಿಟಿ ಹೆಸರು, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಎಂದು. ಅಂದರೆ ಸಂಯಮವಾಗಿ ಕುಡಿಯಿರಿ ಎಂದು, ಮತ್ತು ಸ್ವಲ್ಪ ಸ್ವಲ್ಪ ಕುಡಿಯಿರಿ ಎಂದು. ಪತ್ರಿಕಾ ಪ್ರಚಾರದ ಬಗ್ಗೆ ನಮ್ಮ ಪತ್ರಿಕಾ ಸ್ನೇಹಿತರಿಗೆಲ್ಲ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಏನೆಂದರೆ, ಕೆಲವರಿಗೆ ಮುಖಪುಟ, ಕೆಲವರಿಗೆ ಸುದ್ದಿ-ಇದನ್ನು ತಾವು ಮೀಸಲಾಗಿ ಇಟ್ಟಿದ್ದೀರಲ್ಲ, ಆದಕಾರಣ ನಮ್ಮನ್ನು ಸ್ವಲ್ಪ ತಾವು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಮನವಿ ಮಾಡುತ್ತೇನೆ. ಏಕೆಂದರೆ, ಮೊನ್ನೆ ದಿವಸ ಏಟ್ರಿಯ ಹೋಟೆಲ್‌ನಲ್ಲಿ ಮೂರು ಜನ ಮಂತ್ರಿಗಳು, ನಾಲ್ಕು ಜನ ಶಾಸಕರು ಹೊರಗೆ ಬರುತ್ತಾರೆ, ಸರ್ಕಾರ ಬಿದ್ದೇ ಹೋಗುತ್ತದೆ ಎನ್ನುವ ರೀತಿ ನಾನು ಕೇಳಿದೆ. ನಮ್ಮ ರಾಜ್ಯದ ಜನ ಹೇಗಿದ್ದರು ಎಂದರೆ,ಇನ್ನೇನು ಸರ್ಕಾರ ಬಿದ್ದು ಹೋಯಿತು ಎಂದು ತಿಳಿದುಕೊಂಡಿದ್ದರು. ತಮಗೆ ಕೈ ಮುಗಿದು ಕೇಳುತ್ತೇನೆ, ಅವರಿಗೆ 100ಕ್ಕೆ 50 ಭಾಗ ಕೊಟ್ಟರೆ ನಮಗೆ ಶೇಕಡ 2 ಭಾಗವಾದರೂ ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ, ಇದು ಕೆಲವರ ಸ್ವತ್ತು ಆಗುವುದು ಬೇಡ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ವ್ಯವಸ್ಥೆಯನ್ನು ಸಹ ತಾವು ನೋಡಿಕೊಳ್ಳಬೇಕೆಂದು ಹೇಳಿ, ''ಸ್ಥಿರ ಸರ್ಕಾರ ಎನ್ನುವ ಬಗ್ಗೆ'' ನನ್ನ ಸ್ಪಷ್ಟ ಅಭಿಪ್ರಾಯ ಏನೆಂದರೆ, ಸ್ಥಿರ ಸರ್ಕಾರಕ್ಕೆ ನನ್ನದು ಸಂಪೂರ್ಣ ಬೆಂಬಲ ಇದೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಸರ್ಕಾರದ ವಿಸರ್ಜನೆಗೆ ನಾವು ಎಂದೂ ಬಿಡುವುದಿಲ್ಲ. ಸರ್ಕಾರ ವಿಸರ್ಜನೆ ಮಾಡುವುದಕ್ಕೆ ಹೋದರೆ ರಾಜ್ಯಾದ್ಯಂತ ಜನರು ನಿಮ್ಮ ವಿರುದ್ಧ ತಿರುಗಿ ಬೀಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಸೆಂಬ್ಲಿ ವಿಸರ್ಜನೆಗೋ, ಸರ್ಕಾರದ ವಿಸರ್ಜನೆಗೋ?

ಶ್ರೀ ವಾಟಾಲ್ ನಾಗರಾಜ್: ಶಾಸನ ಸಭೆ ವಿಸರ್ಜನೆಗೆ. ಇದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ ಎಂದು ಹೇಳುವ ಮಾತನ್ನು ಸ್ಪಷ್ಟವಾಗಿ ಹೇಳಿ ನನ್ನ ಸಂಪೂರ್ಣ ಬೆಂಬಲವನ್ನು ನಾನು ಈ ನಿರ್ಣಯಕ್ಕೆ ಕೊಡುತ್ತಿದ್ದೇನೆ.

3.20 ಪಿ.ಎಂ

\+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಇಂದು ಮಾನ್ಯ ಮುಖ್ಯಮಂತ್ರಿಗಳು ತಂದಿರುವ ವಿಶ್ವಾಸ ನಿರ್ಣಯದ ಮೇಲೆ ಮಾತನಾಡುವುದು ಇವತ್ತು ಬಹಳ ಪ್ರಮುಖವಾದ ವಿಷಯ. ಸರ್ಕಾರದ ಅಳಿವು ಉಳಿವಿನ ಪ್ರಶ್ನೆ ಎಂಬುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದಂತಹ ಶಕ್ತಿಗಳು ಯಾವುವು ಎಂದು ಗುರುತಿಸಬೇಕಾಗುತ್ತದೆ. ಯಾವ ಶಕ್ತಿಗಳ ವಿರುದ್ಧ 1994ರ ಡಿಸೆಂಬರ್ ಚುನಾವಣೆಯಲ್ಲಿ ಜನತಾದಳ ಗೆದ್ದುಬಂದಿತ್ತೋ ಆ ಶಕ್ತಿಗಳು ಈ ಸರ್ಕಾರವನ್ನು 5 ವರ್ಷ ಕಾಲ ಆಳಲಿಕ್ಕೆ ಬಿಡಬೇಕಾದದ್ದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧಪಕ್ಷಗಳಿಗಿರುವ ಕನಿಷ್ಟ ಜವಾಬ್ದಾರಿ. ಸರ್ಕಾರ ಹೋಗಬೇಕು ಅನ್ನುವುದಾದರೆ, ಅದು ರಾಜ್ಯದ ಜನತೆಯ ಅಭೀಪ್ಸೆಯ ಕಾರಣದಿಂದಲೇ ಹೊರತು ಯಾರೋ ಕೆಲವರ ವೈಯಕ್ತಿಕ ಆಸೆ ಆಕಾಂಕ್ಷೆ ಪಿತೂರಿಯಿಂದ ಹೋಗುವಂತಹ ಅವಶ್ಯಕತೆ ಇರುವುದಿಲ್ಲ; ಅದಿರಬಾರದು. ಇವತ್ತು ಆಗುತ್ತಿರುವ ಚರ್ಚೆ ನನ್ನ ಪ್ರಕಾರ ಬಹುಶಃ ಸರ್ಕಾರದ ನಿರ್ಣಯದ ಮೇಲೆ. ಆ ನಿರ್ಣಯ ಏನಿದೆ ಅಂದರೆ ನಮ್ಮ ಸರ್ಕಾರಕ್ಕೆ ಸದನದಲ್ಲಿ ಬೆಂಬಲ ಇದೆಯೇ ಇಲ್ಲವೇ ಎಂಬುದು ಮತ್ತು ಸ್ಥಿರ ಸರ್ಕಾರ ಕೊಡಲು ತಮಗೆ ಸಾಧ್ಯತೆ ಇದೆಯೇ ಇಲ್ಲವೇ ಎಂದು ಪ್ರಸ್ತುತಪಡಿಸುವುದು. ಬೇರೆ ಯಾವ ಚರ್ಚೆ ಆಗಬೇಕಾದ ಅವಶ್ಯಕತೆ ಇಲ್ಲ. ಈ ಸರ್ಕಾರದ ಸಾಧನೆ, ಲೋಪದೋಷಗಳೇನಿವೆ ಅವನ್ನು ಚರ್ಚಿಸುವ ಸಂದರ್ಭ ಇದು ಆಗಿಲ್ಲ. ಆದ್ದರಿಂದ ರಾಜಕೀಯ ಪಕ್ಷಗಳಲ್ಲಿ ನಾನು ವಿನಂತಿಸಿಕೊಳ್ಳುವುದು ಇಷ್ಟೆ: ಈಗಾಗಲೇ ದೇಶದಲ್ಲಿ ಪಕ್ಷಗಳ ಬಗ್ಗೆ ರಾಜಕಾರಣಿಗಳ ಬಗ್ಗೆ ಸಾಮಾನ್ಯ ಜನರ ಬಗ್ಗೆ ಜಿಗುಪ್ಸೆ ಉಂಟಾಗಿದೆ. ಅದಕ್ಕೆ ಇಂಬು ಮಾಡಿಕೊಡುವುದು ಪ್ರಜಾತಂತ್ರ ಮತ್ತು ದೇಶದ ದೃಷ್ಟಿಯಿಂದ ಯಾರಿಗೂ ಒಳ್ಳೆಯದಲ್ಲ. ಏಕೆಂದರೆ, ಯಾವ ದೇಶದ ರಾಜಕಾರಣ ಅಧೋಗತಿಗಿಳಿದಿದೆಯೋ ಆ ದೇಶವೂ ಆ ಅವಸ್ಥೆಗೆ ಇಳಿಯಬೇಕಾಗುತ್ತದೆಂಬುದನ್ನು ನಾವು ತಿಳಿಯಬೇಕು. ನಾವಾಗಿ ನಾವೇ ರಾಜಕಾರಣವನ್ನು ಅಧೋಗತಿಗಿಳಿಸಿದರೆ ಪರಿಸ್ಥಿತಿ ಏನಾಗುತ್ತದೆ ಎಂಬುದಕ್ಕೆ ಹಲವಾರು ಉದಾಹರಣೆಗಳು ಈ ದೇಶದಲ್ಲಿ ಇವೆ. ಹಾಗಾಗಿ ನಾವ್ಯಾರೂ, ಸಾಮಾನ್ಯ ಜನರು ರಾಜಕಾರಣದ ಬಗ್ಗೆ ಅವಹೇಳನ ಮಾಡುವ ರೀತಿಯಲ್ಲಿ ನಡೆದುಕೊಳ್ಳಬಾರದು ಎಂದು ಎಲ್ಲ ಪಕ್ಷಗಳ ಸದಸ್ಯರಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಇನ್ನು ಸ್ಥಿರ ಸರ್ಕಾರದ ಪ್ರಶ್ನೆ.

1975ರಿಂದ ನಮ್ಮ ದೇಶದಲ್ಲಿ ಸ್ಥಿರಸರ್ಕಾರಗಳನ್ನು ನಾವು ನೋಡಿದರೆ 1971ರಲ್ಲಿ ಅತಿಹೆಚ್ಚಿನ ಬಹುಮತ ಗಳಿಸಿದ ಪಕ್ಷ 1975ರಲ್ಲಿ ತುರ್ತುಪರಿಸ್ಥಿತಿಯನ್ನು ದೇಶದ ಮೇಲೆ ಹೇರಿತು; ಅದರರ್ಥ ಅದಕ್ಕೆ ಏಕೆ ಸ್ಥಿರಸರ್ಕಾರ ಕೊಡಲು ಆಗಲಿಲ್ಲ? ಅದೇರೀತಿ 1992ರ ಹಿಂದೆ, ಮುಂದೆ ದೇಶದಲ್ಲಿ ನಡೆದ ಕೋಮುಗಲಭೆಗಳನ್ನು ತಡೆಯಲು ಸಾಧ್ಯವಾಗಲೇ ಇಲ್ಲ, ಆಗಿನ ಸ್ಥಿರ ಸರ್ಕಾರಕ್ಕೆ ಎಲ್ಲ ಸಮಸ್ಯೆಗಳನ್ನೂ ಪರಿಹರಿಸುವ ಶಕ್ತಿ ಇದ್ದಿದ್ದರೆ ಆ ಗಲಭೆಗಳನ್ನು ತಡೆಯಲು ಏಕೆ ಆಗಲಿಲ್ಲ? ಹಾಗಾಗಿ ನಮ್ಮ ದೇಶದ ಇತಿಹಾಸದಲ್ಲಿ ಸ್ಥಿರ ಸರ್ಕಾರವೊಂದು ಜನರ ಪರವಾಗಿ ಆಡಳಿತ ನಡೆಸಿದ್ದಿಲ್ಲ. ಅದೇರೀತಿ 1980ರಿಂದ ದೇಶದಲ್ಲಿ ಉದ್ಭವವಾದ ವಿಚ್ಛಿದ್ರಕಾರಿ ಶಕ್ತಿ ಪ್ರತ್ಯೇಕತಾವಾದಿ ಶಕ್ತಿಗಳನ್ನು ತಡೆಯಲಿಕ್ಕೆ 1980ರಲ್ಲಿ ಬಂದ ಸ್ಥಿರ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಅದರ ಬದಲು ಅಂತಹ ಶಕ್ತಿಗಳಿಗೆ ಪ್ರೋತ್ಸಾಹ ಸಿಕ್ಕಿದೆ ಅನ್ನುವುದನ್ನು ನಾವು ಮರೆಯಬಾರದು. ನಾನು ಯಾರನ್ನೂ ಉದ್ದೇಶಿಸಿ ಮಾತನಾಡುತ್ತಿಲ್ಲ, ಯಾವ ರಾಜಕೀಯ ಪಕ್ಷಗಳು ಕೋಮುವಾದಿ ಪ್ರತ್ಯೇಕತಾವಾದಿ ಶಕ್ತಿಗಳನ್ನು ಬೆಳೆಸಿದವೋ ಅವೇ ಇಂದು ಹೇಳುತ್ತಿವೆ ಈ ದೇಶದಲ್ಲಿ ನಾವು ಮಾತ್ರ ಸುಭದ್ರ ಸರ್ಕಾರ ಕೊಡಲು ಸಾಧ್ಯತೆ ಇದೆ, ದಕ್ಷ ಸರ್ಕಾರ ಕೊಡಲು ಸಾಧ್ಯತೆ ಇದೆ ಎಂದು. ನಾವು ಸ್ಪಷ್ಟವಾಗಿ ತಿಳಿಯಬೇಕಾಗಿದೆ; ಸುಭದ್ರ ಸರ್ಕಾರ ಅಂದರೆ ಐದುವರ್ಷ ಅಲ್ಲಿ ಗಟ್ಟಿಯಾಗಿ ಕುಳಿತುಕೊಳ್ಳುವಂತಹ ಸರ್ಕಾರವಲ್ಲ, ಜನತೆಯ ಸಮಸ್ಯೆಗಳನ್ನು ಪರಿಹರಿಸುವಂತಹ, ದೇಶದಲ್ಲಿ ಯಾವುದೇ ಸಮಸ್ಯೆ ಉದ್ಭವವಾಗದಂತೆ ನೋಡಿಕೊಳ್ಳುವ ಸರ್ಕಾರವೊಂದೇ ನಿಜವಾಗಿಯೂ ಸ್ಥಿರ ಸರ್ಕಾರ. ಸಂಯುಕ್ತರಂಗ 18 ತಿಂಗಳ ಕಾಲ ಸರ್ಕಾರ ನಡೆಸಿದೆ. ಆದರೆ ದೇಶದಲ್ಲಿ ಅಸ್ತಿರತೆ ಉಂಟುಮಾಡುವಂತಹ ಕೋಮುಭಾವನೆ ಬೆಳೆಸುವಂತಹ ಯಾವುದೇ ಘಟನೆಯೂ 18 ತಿಂಗಳಲ್ಲಿ ನಡೆಯಲಿಲ್ಲ. ಲೋಕಸಭಾ ಚುನಾವಣೆಯ ಈ ಸಂದರ್ಭದಲ್ಲಿ ಕರೆದಿರುವ ಈ ವಿಶ್ವಾಸ ನಿರ್ಣಯದ ಸಭೆ ಏನಿದೆ, ಇದು ಲೋಕಸಭೆ ಚುನಾವಣೆಗೂ ರಾಜ್ಯ ಸರ್ಕಾರದ ಸಾಧನೆಗೂ ಯಾವ ಸಂಬಂಧ ಬರುವುದಿಲ್ಲ. ನಾನು ಜನತಾದಳದ ಮುಖಂಡರಲ್ಲಿ ಹೇಳುತ್ತಿದ್ದೇನೆ, ನಮ್ಮ ಸಾಧನೆಗಳನ್ನು ನಾವು ಚುನಾವಣೆಯಲ್ಲಿ ಹೇಳುತ್ತೇವೆ. ಸುಮ್ಮನೆ ಮತ ಕೊಡಿ ಎಂದು ಕೇಳುವುದು ಸರಿಯಲ್ಲ. ಲೋಕಸಭಾ ಚುನಾವಣೆ ಇಡೀ ದೇಶಕ್ಕೆ ಸಂಬಂಧಿಸಿದ್ದು ಜೆ.ಹೆಚ್.ಪಟೇಲರ ಸರ್ಕಾರದ ಸಾಧನೆಗಳ ಮೇಲಲ್ಲ ಈ ಚುನಾವಣೆ ನಡೆಯುತ್ತಿರುವುದು. ಈ ದೇಶದ ಜನರ ಭವಿಷ್ಯದ ದೃಷ್ಟಿಯಿಂದ ಚುನಾವಣೆ ನಡೆಯುತ್ತಿದೆ. ಆದ್ದರಿಂದ ಸರ್ಕಾರದ ಸಾಧನೆಗಳಿಗೂ ಚುನಾವಣೆಗೂ ಈ ಸರ್ಕಾರಕ್ಕೂ ಯಾವ ಸಂಬಂಧವನ್ನೂ ಕಲ್ಪಿಸಬಾರದು. ನಾನು ಪತ್ರಿಕೆ ಓದಿದೆ, ಇವತ್ತು ವಿಶ್ವಾಸ ಮತ ಮಂಡಿಸಬೇಕಾದ ಪರಿಸ್ಥಿತಿ ಏಕೆ ಬಂದಿದೆ ಅಂದರೆ, ಮೂವರು ಮಂತ್ರಿಗಳು ನಾಲ್ವರು ಶಾಸಕರು ರಾಜೀನಾಮೆ ಕೊಟ್ಟಾಗ ನಮ್ಮ ಸ್ನೇಹಿತರು ಹೇಳಿದರು: It is a question of loyalty to the Leader. ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ; ನಮ್ಮೆಲ್ಲರ ನಿಷ್ಠೆ ಇರಬೇಕಾದದ್ದು ದೇಶಕ್ಕೆ, ದೇಶದ ಜನತೆಗೆ. ನಮ್ಮೆಲ್ಲರ ನಿಷ್ಠೆ ಇರಬೇಕಾದುದು ತತ್ವಕ್ಕೆ, ವ್ಯಕ್ತಿಗಲ್ಲ. ನಮ್ಮ ದೇಶದ ಪರಿಸ್ಥಿತಿ

ಇವತ್ತೇನಾಗಿದೆ? ಇದಕ್ಕೆ ಕಾರಣರಾರು? ಯಾವ ಶಕ್ತಿಗಳು ಇಲ್ಲಿ ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳನ್ನು ಬೆಳೆಸಿದ್ದಾರೋ ಅವರೇ ಜೆ.ಹೆಚ್.ಪಟೇಲರ ಸರ್ಕಾರದ ವಿರುದ್ಧ ಪಿತೂರಿ ಮಾಡುತ್ತಿರುವುದು. ಪಟೇಲರ ಸರ್ಕಾರದ ಅಳಿವು ಉಳಿವಿನ ಪ್ರಶ್ನೆಯನ್ನಲ್ಲ ನಾವು ಆಲೋಚಿಸಬೇಕಾಗಿರುವುದು, ಈ ದೇಶದ ಜನರ ಪ್ರಶ್ನೆ ಬಗ್ಗೆ ನಾವು ಆಲೋಚಿಸಬೇಕಾಗಿದೆ. ಸ್ವಾತಂತ್ರ್ಯದ 50 ವರ್ಷದ ನಂತರ ಭಾರತ ಯಾವ ದಿಕ್ಕಿಗೆ ಹೋಗಬೇಕು ಎಂಬುದು ಬಹಳ ಪ್ರಮುಖವಾದ ಪ್ರಶ್ನೆ. ಅಪವಾದ ಮಾಡುವುದರಲ್ಲಿ, ನಮ್ಮ ಮೇಲೆ ನಾವೇ ಕೆಸರನ್ನು ಎರಚಿಕೊಳ್ಳುವುದರಲ್ಲಿ ನಾವು ಭಾರೀ ನಿಸ್ಸೀಮರು. ನಮ್ಮ ಮೇಲೆ ನಾವೇ ಕೆಸರೆರಚಿಕೊಂಡರೆ ಈ ದೇಶವನ್ನು ಅಮೆರಿಕಾದವರು ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ, ಇಂಗ್ಲೆಂಡಿನವರು ರಕ್ಷಿಸಲಾಗುವುದಿಲ್ಲ. ನಮ್ಮ ನಿಮ್ಮ ಎಲ್ಲರ ಜವಾಬ್ದಾರಿ ಈ ದೇಶದ ಘನತೆಯನ್ನು ಎತ್ತಿಹಿಡಿಯಬೇಕಾದದ್ದು. ಆ ಪ್ರಶ್ನೆ ಇವತ್ತು ದೇಶದ ಜನತೆಯ ಮುಂದೆ ಸವಾಲಾಗಿ ನಿಂತಿದೆ. ಐದು ಸಾವಿರ ವರ್ಷಗಳ ಇತಿಹಾಸವಿರುವ ದೇಶ, ಧರ್ಮಗಳ ಆಧಾರದ ಮೇಲೆ ಒಡೆಯಬೇಕೋ, ಜಾತಿಗಳ ಆಧಾರದ ಮೇಲೆ ಒಡೆಯಬೇಕೋ...? ಇಷ್ಟು ಸಾವಿರ ವರ್ಷಗಳಿಂದ ಈ ದೇಶದ ಸಮಗ್ರತೆ, ಐಕ್ಯತೆಯನ್ನು ಕಟ್ಟಿ ಬೆಳೆಸಿಕೊಂಡು ಬಂದಂಥ ನಾವುಗಳು ಇಂದು ಪ್ರತ್ಯೇಕತಾವಾದಿ ಶಕ್ತಿಗಳ ಕೈಗೆ ಕೊಡಬೇಕೇ? ಇದು ಇಂದು ನಮ್ಮ ದೇಶದ ಜನರ ಮುಂದಿರುವ ಪ್ರಶ್ನೆ. ಆದರೆ, ಇವೊತ್ತು ಯಾರು ಧರ್ಮಗಳ, ಜಾತಿಗಳ ಆಧಾರದ ಮೇಲೆ ಮತ್ತು ವಿದೇಶಿ ಸಂಚಿನಿಂದ ಈ ದೇಶವನ್ನು ಒಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೋ ಅವರು ಎಂದೆಂದಿಗೂ ಈ ದೇಶದಲ್ಲಿ ಸುಭದ್ರ ಸರ್ಕಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂಬುದು ಈ ದೇಶದ ಇತಿಹಾಸ ನಮಗೆ ತೋರಿಸಿಕೊಟ್ಟಿದೆ. ಯಾರು ಈ ದೇಶವನ್ನು ಅಸ್ಥಿರಗೊಳಿಸಿದವರು? 1972ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂದಂಥ ಸರ್ಕಾರವನ್ನು ಅಭದ್ರಗೊಳಿಸಿದ್ದು ಯಾರು? 1980ರಲ್ಲಿ ಅತ್ಯಧಿಕ ಬಹುಮತ ಪಡೆದು ಅಧಿಕಾರಕ್ಕೆ ಬಂದಂಥ ಸರ್ಕಾರವನ್ನು ಅಭದ್ರಗೊಳಿಸಿದವರು ಯಾರು? ಈ ಬಗ್ಗೆ ನಾವು ಎಚ್ಚರಿಕೆಯಿಂದ ಇಲ್ಲದೆ ಹೋದರೆ ನಮ್ಮ ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಗಂಭೀರ ಸವಾಲೊಡ್ಡಿರುವ ಕೋಮುವಾದಿ ಶಕ್ತಿಗಳು, ವಿಚ್ಛಿದ್ರಕಾರಿ ಶಕ್ತಿಗಳು ಜಾತೀಯ ಶಕ್ತಿಗಳು ಈ ದೇಶವನ್ನು ನುಂಗಿ ಕುಡಿಯುತ್ತವೆ. ಆಗ ನಾವು-ನೀವು ಯಾರೂ ಕೂಡ ಉಳಿಯುವುದು ಸಾಧ್ಯವಿಲ್ಲವೆಂಬುದನ್ನು ಯಾರೂ ಮರೆಯಬಾರದು. ಸನ್ಮಾನ್ಯ ಅಧ್ಯಕ್ಷರೆ, ದೇಶದ ಸ್ಥಿರತೆ, ಐಕ್ಯತೆ ನಿಂತಿರುವುದು ವಿಭಿನ್ನ ಸಂಸ್ಕೃತಿಗಳು, ನಾಗರಿಕತೆ, ಭಾಷೆಗಳು, ಸಂಪ್ರದಾಯಗಳನ್ನು ಹೊಂದಿರತಕ್ಕಂಥ ಈ ದೇಶ ಯಾವ ನಾಗರೀಕತೆ, ಯಾವ ವಿಭಿನ್ನ ಸಂಪ್ರದಾಯಗಳನ್ನು ಹೊಂದಿದೆಯೋ ಅದರ ಮೇಲೆ ಏಕಮೇವ ಚಕ್ರಾಧಿಪತ್ಯ ನಡೆಸಲು ಯಾರಿಂದಲೂ ಸಾಧ್ಯವಿಲ್ಲ. ಆ ರೀತಿ ಏಕಮೇವ ಚಕ್ರಾಧಿಪತ್ಯ ನಡೆಸಲು ಹೊರಟರೆ ಈ ದೇಶವನ್ನು ಆಳಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ, ಇಲ್ಲಿರುವ ವಿಭಿನ್ನ ಸಂಸ್ಕೃತಿಗಳನ್ನು ಗೌರವಿಸಬೇಕು, ವಿಭಿನ್ನ ನಾಗರಿಕತೆಗಳನ್ನು ಗೌರವಿಸಬೇಕು, ಅದೇ ರೀತಿ ವಿಭಿನ್ನ ರೀತಿ ಪ್ರಾಂತೀಯ

ಸಮಸ್ಯೆಗಳಿದ್ದು ಅವುಗಳನ್ನು ಗುರ್ತಿಸಬೇಕು. ಆದರೆ, ಇದ್ಯಾವುದನ್ನೂ ಗುರ್ತಿಸದೆ ಏಕಮೇವ ಚಕ್ರಾದಿಪತ್ಯ ನಡೆಸುತ್ತೇವೆಂದು ಹೊರಟಂಥ ಎಲ್ಲಾ ಶಕ್ತಿಗಳು ಕಳೆದ 42 ವರ್ಷಗಳಲ್ಲಿ ಯಾವ ರೀತಿ ಈ ದೇಶದಲ್ಲಿ ಏಕತೆ ತಂದಿದ್ದಾರೆಂಬುದರ ಬಗ್ಗೆ ಇವೊತ್ತು ನಮ್ಮ ಮುಂದೆ ಪರೀಕ್ಷೆಗೊಡ್ಡಿದ್ದಾರೆ. ಆದುದರಿಂದ, ನಾನು ಜನತಾ ದಳದ ಮುಖಂಡರಿಗೆ ವಿನಂತಿಸಿಕೊಳ್ಳುವುದಿಷ್ಟೆ; ಇವೊತ್ತು ನಿಮ್ಮ ವೈಯಕ್ತಿಕ ಪ್ರತಿಷ್ಠೆಯ ಪ್ರಶ್ನೆಯಲ್ಲ, ವ್ಯಕ್ತಿ ನಿಷ್ಠೆಯಲ್ಲ. ಇದರ ಬದಲು ನಮ್ಮ ನಿಮ್ಮ ಎಲ್ಲರ ನಿಷ್ಠೆ ಈ ದೇಶ ಮತ್ತು ಈ ದೇಶದ ಜನತೆಗಿರಬೇಕಾದುದು ಮುಖ್ಯ. ನಿಮಗೆ ಪ್ರಾಮಾಣಿಕವಾದ ಕಳಕಳಿ ಇದ್ದರೆ ನಿಮ್ಮ ಸ್ಥಾನಗಳನ್ನು ರಕ್ಷಿಸಿಕೊಳ್ಳುವುದಕ್ಕೋಸ್ಕರವಲ್ಲ ಈ ರಾಜಕಾರಣವನ್ನು ಮಾಡಬೇಕಾಗಿರುವುದು. ನಾವು ನಿಜವಾಗಿಯೂ ರಾಜಕಾರಣ ಮಾಡುವುದಾದರೆ ಈ ದೇಶ ಮತ್ತು ದೇಶದ ಜನರ ಹಿತದೃಷ್ಟಿಯಿಂದ ರಾಜಕಾರಣ ಮಾಡಬೇಕು. ಮಾನ್ಯ ಹಿರಿಯ ಸದಸ್ಯರಾದ ಶ್ರೀ ವಾಟಳ್ ನಾಗರಾಜ್‌ರವರು ಮಾತನಾಡುತ್ತಾ ಪ್ರಳಯಗಳ ಬಗ್ಗೆ ಬಹಳ ಒಳ್ಳೆಯ ರೀತಿಯಲ್ಲಿ ಹೇಳಿದರು. ನಾನು ಅದನ್ನು ಪುನರಾವರ್ತಿಸುವುದಕ್ಕೆ ಹೋಗುವುದಿಲ್ಲ. ಒಂದು ಪ್ರಶ್ನೆಯೇನೆಂದರೆ, ತತ್ವನಿಷ್ಠೆ ಇಲ್ಲದಿರುವ ಜನ ಯಾವುದೇ ರಾಜಕೀಯ ಪಕ್ಷಗಳಿಗೆ ಹೋದರೂ ಅವರಿಂದ ಆ ಪಕ್ಷಕ್ಕೆ ಅಪಾಯವೇ ಹೊರತು ಯಾವುದೇ ರೀತಿಯಲ್ಲಿ ಅವರಿಂದ ಪ್ರಯೋಜನವಾಗುವುದಿಲ್ಲ. ತತ್ವನಿಷ್ಠೆ ಇಲ್ಲದಿರುವವರು ಎಂತಹ ಸಂದರ್ಭದಲ್ಲೂ ಅಧಿಕಾರಕ್ಕೆ ಬಂದರೂ ಈ ದೇಶಕ್ಕೆ ಒಳ್ಳೆಯದಾಗಲು ಸಾಧ್ಯವಿಲ್ಲ. ಇದು ನಮ್ಮ ದೇಶದ ರಾಜಕಾರಣದಲ್ಲಿ ಬೆಳೆದು ಬಂದಿರತಕ್ಕಂಥ ಅರ್ಬುದ ರೋಗವಾಗಿದೆ. ಮುಖ್ಯವಾಗಿ ತತ್ವನಿಷ್ಠೆ ಇಲ್ಲ, ಬರೀ ಅಧಿಕಾರ ವ್ಯಾಮೋಹ, ಕುರ್ಚಿಯ ವ್ಯಾಮೋಹ. ಎಲ್ಲಿ ಹೋದರೆ ಯಾರ ಜೊತೆಯಲ್ಲಿ ಹೋದರೆ ಅಧಿಕಾರ ಸಿಗುತ್ತದೆ ಯಾವ ಪಕ್ಷಕ್ಕೆ ಹೋದರೆ ಅಧಿಕಾರ ಸಿಗುತ್ತದೆಂಬ ಲೆಕ್ಕಾಚಾರವೇ ಇಂದಿನ ಭಾರತ ದೇಶದ ರಾಜಕಾರಣದಲ್ಲಿರುವುದು. ಈ ಅರ್ಬುದ ರೋಗವೇ ಇವೊತ್ತು ಈ ದೇಶವನ್ನು ಕಿತ್ತು ತಿನ್ನುತ್ತಿದೆ. ನಮ್ಮ ದೇಶದ ಜನತೆಯು ಅದರಲ್ಲೂ ಮುಖ್ಯವಾಗಿ ಈ ದೇಶದ ಸಾಮಾನ್ಯ ಜನರ ಬಗ್ಗೆಯಾದರೂ ನಿಷ್ಠೆ ಇರಬೇಕು. ಆ ಸಾಮಾನ್ಯ ಜನರಿನ್ನೂ ಭ್ರಷ್ಟರಾಗಿಲ್ಲ. ಈ ದೇಶದ ಜನರು ಭ್ರಷ್ಟರಾಗಿದ್ದರೆ ನಾವ್ಯಾರೂ ಕೂಡ ಉಳಿಯುವುದಕ್ಕೆ ಸಾಧ್ಯವಿರುತ್ತಿರಲಿಲ್ಲ, ಈ ದೇಶವೂ ಉಳಿಯುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ಈ ದೇಶದ ರಾಜಕಾರಣದಲ್ಲಿ ಸಾಮಾನ್ಯ ಜನರ ಪ್ರಾಮಾಣಿಕತೆಯನ್ನು ನಾವು ಇವೊತ್ತು ಪ್ರತಿಬಿಂಬಿಸಬೇಕಾಗಿದೆ. ಅವರಲ್ಲಿರುವ ತತ್ವನಿಷ್ಠೆಯನ್ನು ಪ್ರತಿನಿಧಿಸಬೇಕಾಗಿದೆ. ಸಾಮಾನ್ಯ ಮನುಷ್ಯನೊಬ್ಬನಿಗೆ ಈ ದೇಶದಲ್ಲಿ ಜಾತಿಯ ಗಲಭೆಗಳು ಬೇಕಾಗಿಲ್ಲ, ಕೋಮು ಗಲಭೆಗಳು ಬೇಕಾಗಿಲ್ಲ, ಪ್ರತ್ಯೇಕ ಚಳವಳಿಗಳು ಬೇಕಾಗಿಲ್ಲ. ಇವೆಲ್ಲವನ್ನೂ ಹುಟ್ಟು ಹಾಕಿರುವ ಸ್ವಾರ್ಥ ರಾಜಕಾರಣ ಈ ದೇಶದಲ್ಲಿದೆ. ಈ ಸ್ವಾರ್ಥ ರಾಜಕಾರಣದ ವಿರುದ್ಧ ನಾವು ಐಕ್ಯಮತ್ಯದಿಂದ ಹೋರಾಟ ನಡೆಸದೇ ಇದ್ದರೆ ಈ ದೇಶ ಸಂಪೂರ್ಣವಾಗಿ ನಾಶವಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ; ಇವೊತ್ತಿನ ಪರಿಸ್ಥಿತಿಯಲ್ಲಿ ಪಟೇಲರ ಸರ್ಕಾರವಾಗಬಹುದು ಅಥವಾ

ಅವರ ಜಾಗದಲ್ಲಿ ಯಾರದೇ ಸರ್ಕಾರವಿದ್ದರೂ ಅದನ್ನು ಅಸ್ಥಿರಗೊಳಿಸುವುದೆಂದರೆ ನಾವು ನಮ್ಮ ದೇಶದ ಜನತೆಗೆ, ದೇಶಕ್ಕೆ ಅಪ್ರಾಮಾಣಿಕರಾಗಿದ್ದೇವೆಂಬುದೇ ನನ್ನ ಸ್ಪಷ್ಟ ಅಭಿಪ್ರಾಯ. ಆದುದರಿಂದ, ಇವೊತ್ತಿನ ಪರಿಸ್ಥಿತಿಯಲ್ಲಿ ಈ ಸರ್ಕಾರ ಇರಬೇಕೆಂದು ಹೇಳುತ್ತಾ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಬಹಳ ಗಂಭೀರವಾದ ದಿನವೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮೆಲ್ಲರ ಆತ್ಮ ವಿಶ್ಲೇಷಣೆ ಮಾಡಿಕೊಳ್ಳುವುದರ ಮೂಲಕ ಇನ್ನು ಮುಂದಾದರೂ ಸರಿಯಾಗಿ ಕೆಲಸ ಮಾಡಬೇಕೆನ್ನುವ ಚಿಂತನೆಗೆ ಈ ಒಂದು ವೇದಿಕೆ ಇದ್ದಂತಾಯಿತು. ವಿಶ್ವಾಸ ಮತ ಕೇಳುವುದರ ಮೂಲಕ ಜನತಾದಳದ ಸರ್ಕಾರ ಆಂತರಿಕ ಪ್ರಜಾಪ್ರಭುತ್ವದಲ್ಲಿ ಅನಾನುಕೂಲವಾದ ಮೇಲೆ ಅದನ್ನು ಬೇರೆ ಬೇರೆ ಪಕ್ಷಗಳು ಪಟೇಲರ ಸರ್ಕಾರ ಅಸ್ಥಿರತೆಯಿಂದಿದೆಯೆಂದು ಹೇಳಿದಾಗ ನಾವು ಬಹುಮತದ ಮೇಲೆ ನಾವು ಸ್ಥಿರತೆಯಿಂದಿರುತ್ತೇವೆಂದು ಹೇಳುವುದು ಸರಿಯಲ್ಲ. ಬಹುಮತದ ವಿಚಾರದ ಆಧಾರದ ಮೇಲೆ ಅದು ಸ್ಥಿರ ಸರ್ಕಾರವಲ್ಲ, ಕಾರ್ಯಕ್ರಮ ವಿಚಾರದ ಆಧಾರದ ಮೇಲೆ ಮತದಾರರಿಗೆ ಅದು ಸ್ಥಿರ ಸರ್ಕಾರವಾಗಬೇಕು. ಕೇವಲ ಐದು ವರ್ಷಗಳ ಕಾಲದವರೆಗೆ ಆಡಳಿತ ನಡೆಸಲು ಪ್ರಜಾಪ್ರಭುತ್ವದಲ್ಲಿ ಮತ ನೀಡಿದ್ದಾರೆ, ನಾವು ಐದು ವರ್ಷಗಳ ಕಾಲ ಏನೇ ಆಡಳಿತ ನಡೆಸಿದರೂ ಮತದಾರರು ನಮ್ಮನ್ನು ಏನೂ ಮಾಡುವುದಕ್ಕಾಗುವುದಿಲ್ಲವೆಂದರೆ ಮತದಾರನಿಗೆ ಆತನ ಹಕ್ಕು ಇದ್ದಿದ್ದರೆ ನಾವ್ಯಾರೂ ಇವೊತ್ತು ಇಲ್ಲಿ ಭಾಷಣ ಮಾಡುವಂತಿರಲಿಲ್ಲ. ಪ್ರಜಾಪ್ರಭುತ್ವದಲ್ಲಿ ಯಾವ ಕಾರ್ಯಕ್ರಮದ ಮೇಲೆ ಮತ ಕೇಳಿದ್ದೀರಿ. ಆ ಕಾರ್ಯಕ್ರಮ ಅನುಷ್ಠಾನವಾಗಲಿಲ್ಲವೆಂದರೆ ಆ ವರ್ಷದ ಸರ್ಕಾರವನ್ನು ವಾಪಸ್ಸು ಕರೆಸಿಕೊಳ್ಳುವ ಶಕ್ತಿ ಅವರಿಗಿದ್ದಿದ್ದರೆ ನಾವು ಯಾರೂ ಭಾಷಣ ಮಾಡುವಂತಿರಲಿಲ್ಲ, ಬಳಿಕ ಯಾವುದೇ ಪಕ್ಷಾಂತರವೆಂತಲೂ ಇರುತ್ತಿರಲಿಲ್ಲ. ಆದರೆ, ಇವೊತ್ತು ಆ ರೀತಿ ಇಲ್ಲದಿರುವುದರಿಂದ ನಾವು ಇಲ್ಲಿ ಭಾಷಣ ಮಾಡುತ್ತಿದ್ದೇವೆ. ಜನತಾ ದಳ ಸರ್ಕಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ನಾವು ವಿದ್ಯುಚ್ಛಕ್ತಿ ಕೊಟ್ಟಿದ್ದೇವೆ, ಕುಡಿಯಲು ನೀರು ಕೊಡುತ್ತಿದ್ದೇವೆ, ರಸ್ತೆ ನಿರ್ಮಾಣ ಮಾಡುತ್ತಿದ್ದೇವೆ, ಸಾರಿಗೆ ಸಂಸ್ಥೆ ಮೂಲಕ ಬಸ್ಸುಗಳನ್ನು ಒದಗಿಸಿಕೊಡುತ್ತಿದ್ದೇವೆಂದು ಹೇಳಿದರು. ಇವೆಲ್ಲವೂ ಕಂಟಿನ್ಯೂಯಸ್ ಪ್ರೋಸೆಸ್, ಮಾಮೂಲಿ ಕಾರ್ಯಕ್ರಮಗಳು. ವಿಶೇಷ ಬದಲಾವಣೆಯಾಗಿರುವ ಕಾರ್ಯಕ್ರಮಗಳೇನಾದರೂ ಇದ್ದರೆ ಚರ್ಚಿಸಬೇಕು, ಅಂತಹ ವಿಷಯಗಳಿದ್ದರೆ ಹೇಳಬೇಕು. ಮಹತ್ತರವಾದ ಬದಲಾವಣೆ ಮಾಡುವಂತಾದ್ದಕ್ಕೆ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಅಧಿಕಾರ ಕೊಟ್ಟರೆ ಆ ಅಧಿಕಾರದ ಮೂಲಕ ಇಡೀ ಕರ್ನಾಟಕದ ಸಮಗ್ರ ಜನರ ಚಿಂತನೆ ಮಾಡತಕ್ಕಂಥ ವಿಚಾರದಲ್ಲಿ ಮಹತ್ತರವಾದ, ಹೊಸ ಬದಲಾವಣೆ ಮಾಡಿದಾಗ ಮಾತ್ರ ನೀವು ಹೇಳತಕ್ಕಂಥ ಹಕ್ಕು ಇರುತ್ತದೆ. ಅದು ಬಿಟ್ಟು ನಾನು ವಿದ್ಯುಚ್ಛಕ್ತಿ ಕೊಟ್ಟೆ ಎಂದರೆ ವಿಚಾರ ಅದಲ್ಲ. ತಾವು ಮಹತ್ತರವಾದ

ಬದಲಾವಣೆ ಏನೇನು ಮಾಡಿದಿರಿ? ಮುಂದಾದರೂ ಮಾಡಬೇಕು, ಸರ್ಕಾರ ಸ್ಥಿರವಾಗಿ ಉಳಿದುಕೊಂಡ ನಂತರ ಕಾರ್ಯಕ್ರಮವನ್ನು ಸ್ಥಿರವಾಗಿ ಮಾಡಬೇಕು. ಕೇವಲ ಬಹುಮತದ ಮೇಲೆ ಸರ್ಕಾರದಲ್ಲಿದ್ದೇವೆಂದರೆ ಮತ್ತು ಐದು ವರ್ಷದಲ್ಲಿ ಏನು ಮಾಡಿಕೊಡಬಹುದೆಂದರೆ ಭ್ರಷ್ಟಾಚಾರದಲ್ಲಿ ಏನೇ ಬದಲಾವಣೆ ಮಾಡಿದ್ದೀರಿ? ನಾವು ಇದನ್ನು ಆತ್ಮಪೂರ್ವಕವಾಗಿ ಚಿಂತಿಸಬೇಕು, ರಾಜ್ಯದಲ್ಲಿ ಏನೂ ಬದಲಾವಣೆಯಾಗಿಲ್ಲ, ಭ್ರಷ್ಟಾಚಾರ ಒಂದು ವರ್ಷದಿಂದ ಇನ್ನೊಂದು ವರ್ಷಕ್ಕೆ ಜಾಸ್ತಿಯಾಗುತ್ತಿದೆ. ಅದನ್ನು ನಿಯಂತ್ರಣ ಮಾಡದಿದ್ದರೆ ಯಾವುದೇ ಕಾರ್ಯಕ್ರಮ ಅನುಷ್ಠಾನವಾಗಲು ಸಾಧ್ಯವಿಲ್ಲ. ಕೃಷಿ ಕಾರ್ಮಿಕರು ಸುಮಾರು ಒಂದು ಕೋಟಿ ಸಂಖ್ಯೆಯಷ್ಟಿದ್ದಾರೆಂದು ಹೇಳಿದಿರಿ. ಅವರುಗಳ ಬಗ್ಗೆ ಯಾವುದೇ ಚಿಂತನೆಯಾಗಿಲ್ಲ, ಈ ದಿಸೆಯಲ್ಲಿ ಹೊಸ ಚಿಂತನೆ ನಡೆಯಬೇಕು. ರೈತರ ಜೀವನ ಕ್ರಮವನ್ನು ಹಸನುಗೊಳಿಸುವ ಹಾಗೂ ಬೆಳೆ ಬಗ್ಗೆ ಕಾರ್ಯಕ್ರಮದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಎಲ್ಲಾ ಸರ್ಕಾರಗಳು ನಮ್ಮ ಪಕ್ಷಗಳು ಚೆನ್ನಾಗಿವೆಯೆಂದು ಹೇಳಿಕೊಳ್ಳುತ್ತವೆ. ಉದಾಹರಣೆಗೆ ಹೇಳುವುದಾದರೆ, ಮಧ್ಯ ಪ್ರದೇಶದಲ್ಲಿ ಬೆಳೆ ನಷ್ಟವಾದಾಗ ಆ ಕುರಿತು ವಿಚಾರ ಮಾಡಲು ರೈತರುಗಳು ಸರ್ಕಾರದ ಬಳಿ ಹೋದಂಥ ಸಂದರ್ಭದಲ್ಲಿ ಅವರುಗಳ ಮೇಲೆ ಗೋಲಿಬಾರ್ ನಡೆಸಿದಾಗ ಸುಮಾರು ಇಪ್ಪತ್ತು ಜನರು ಸತ್ತರು, ಅಲ್ಲಿರುವುದು ಕಾಂಗ್ರೆಸ್ ಸರ್ಕಾರ. ಉತ್ತರ ಪ್ರದೇಶದಲ್ಲಿ ಕಬ್ಬು ಬೆಳೆ ವಿಚಾರದಲ್ಲಿ ರೈತರಿಗೆ ನ್ಯಾಯವಾದ ಹಣ ಕೊಡುವ ವಿಚಾರವಾಗಿ ಭಾರತೀಯ ಕಿಸಾನ್ ಯೂನಿಯನ್‌ನ ಅಧ್ಯಕ್ಷರು ಸರ್ಕಾರದ ಬಳಿ ಚರ್ಚಿಸಲು ಹೋದಾಗ ಅವರನ್ನು ಡಿಸೆಂಬರ್ 25ರಂದು ಬಂಧಿಸಿ ಚುನಾವಣೆ ನಡೆಯುವವರೆಗೂ ಅವರನ್ನು ಹೊರಗೆ ಬಿಡುವುದಿಲ್ಲವೆನ್ನುತ್ತಿದೆ ಅಲ್ಲಿನ ಬಿ.ಜೆ.ಪಿ. ಸರ್ಕಾರ. ಅದೇ ರೀತಿ ಹತ್ತಿ ಬೆಳೆಗೆ ತಗಲುವ ರೋಗವನ್ನು ತಡೆಗಟ್ಟಲು ಆಂಧ್ರಪ್ರದೇಶದ ರೈತರುಗಳು ವಿದೇಶಿ ಕಂಪನಿಯ ಔಷಧಿಗಳನ್ನು ಹತ್ತಿ ಬೆಳೆಗೆ ಸಿಂಪಡಿಸುವುದರ ಮೂಲಕ ಹತ್ತಿ ಬೆಳೆ ಸಂಪೂರ್ಣ ನಾಶವಾಗಿ ಇದರ ಮೇಲೆಯೇ ಅವಲಂಬಿಸಿದ್ದ ಲಕ್ಷಾಂತರ ರೈತರುಗಳು ದಿಕ್ಕು ತೋಚದೆ ಕಂಗಾಲಾಗಿದ್ದಾರೆ, 52ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಇವರಲ್ಲಿ ಕೆಲವರು ಬದುಕುಳಿದಿದ್ದು ಸಾವು ನೋವುಗಳ ಮಧ್ಯೆ ಹೋರಾಡುತ್ತಿದ್ದಾರೆ. ಅಲ್ಲಿರುವುದು ಚಂದ್ರಬಾಬು ನಾಯ್ಡುರವರ ತೆಲುಗು ದೇಶಂ ಸರ್ಕಾರ. ಕರ್ನಾಟಕದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಭತ್ತ ಬೆಳೆಯುವ 53 ಸಾವಿರ ಹೆಕ್ಟೇರ್ ಪ್ರದೇಶ, ಬಳ್ಳಾರಿಯಲ್ಲಿ ಏಳು ಸಾವಿರ ಎಕರೆಗಳಷ್ಟು ಪ್ರದೇಶ ಇದೆ. ಅದೇ ರೀತಿ ಇನ್ನುಳಿದ ಐದು ಜಿಲ್ಲೆಗಳಲ್ಲಿ ಬೆಳೆದಂಥ ಭತ್ತದ ಫಸಲಿನಲ್ಲಿ ಸುಮಾರು ಶೇಕಡಾ 50 ರಿಂದ 60ರಷ್ಟು ಭಾಗ ನಷ್ಟವಾಗಿದೆ. ಇದರ ಬಗ್ಗೆ ಚಿಂತನೆ ಮಾಡದಿರುವ ಜನತಾದಳ ಸರ್ಕಾರ ನೀವೇನು ಬದಲಾವಣೆ ಮಾಡಿದ್ದೀರಿ? ಬರೀ ಈರುಳ್ಳಿಬೆಳೆ ಬಗ್ಗೆ ಕನಿಷ್ಠ ಬೆಲೆಯನ್ನು ನಿಗದಿಪಡಿಸಿ ರೈತರುಗಳಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಇವೊತ್ತು ಈರುಳ್ಳಿ ಬೆಲೆ ಕೆ.ಜಿ.ಗೆ. 40 ರೂಪಾಯಿಗಳಾಗಿದೆ. ಹೀಗಾಗಿ, ಇವತ್ತು ಒಗ್ಗರಣೆಗೆ ಈರುಳ್ಳಿ ಹಾಕುವುದನ್ನೇ ಹೆಂಗಸರು ಬಿಟ್ಟುಬಿಟ್ಟಿದ್ದಾರೆ.

ಸಮುದಾಯ ಶ್ರಮದ ಮೂಲಕ ದೇಶವನ್ನು ಉಳಿಸಿಕೊಂಡಿರತಕ್ಕವರ ಬಗ್ಗೆ ಯಾವುದೇ ಸರ್ಕಾರ ಚಿಂತನೆ ಮಾಡದಿದ್ದರೆ ಅಂತಹ ಸರ್ಕಾರ ಅರ್ಧಗಂಟೆ ಸಹ ಉಳಿಯುವುದಿಲ್ಲ. ನಾವು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಇಲ್ಲದೇ ಹೋದರೆ ಸುಮ್ಮನೆ ನಾವು ವಿದ್ಯುಚ್ಛಕ್ತಿ ಕೊಡುತ್ತೇವೆ, ನೀರು ಕೊಡುತ್ತೇವೆ, ಗ್ರಾಮೀಣ ಅಭಿವೃದ್ಧಿ ಮಾಡುತ್ತೇವೆ, ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ ಎಂದು ಹೇಳುವುದರಲ್ಲಿ ಯಾವುದೇ ಅರ್ಥ ಇಲ್ಲ. ನೀವು ಏನು ವಿಕೇಂದ್ರೀಕರಣ ಮಾಡಿದ್ದೀರಿ ಎಂದರೆ ಅಧಿಕಾರ ವಿಕೇಂದ್ರೀಕರಣ ಎಂದು ಹೇಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದ ಜನರು ಮತ್ತು ಮಹಿಳೆಯರಿಗೆ ಮೀಸಲಾತಿ ಕೊಟ್ಟು ಅವರನ್ನು ಗಣೇಶ ಕೂರಿಸಿದ ಹಾಗೆ ಕೂರಿಸಿದ್ದೀರಿ. ಆರ್ಥಿಕ ವಿಕೇಂದ್ರೀಕರಣ ಆಗಬೇಕು, ಪೂರ್ಣ ಪಂಚಾಯಿತಿ ಸ್ವಾಯತ್ತ ಸಂಸ್ಥೆ ಆಗಬೇಕು, ಪೂರ್ಣ ಅಧಿಕಾರ ಪಂಚಾಯಿತಿಗೆ ಇರಬೇಕು, ಪೂರ್ಣ ಹಳ್ಳಿಯ ಅಭಿವೃದ್ಧಿ ಆಗಬೇಕು. ಅದು ನಿಜವಾದ ಅಧಿಕಾರ ವಿಕೇಂದ್ರಿಕರಣದ ಕಲ್ಪನೆ. ಬರೀ ಅಧಿಕಾರ ವಿಕೇಂದ್ರಿಕರಣದಿಂದ ಬಹಳ ಮಹತ್ತರವಾದ ಬದಲಾವಣೆ ಏನೂ ಆಗುವುದಿಲ್ಲ. ಈಗಲೂ ತಮಗೆ ಕಾಲಾವಕಾಶ ಇದೆ. ಬದಲಾವಣೆ ಮಾಡಿಕೊಂಡರೆ ಒಳ್ಳೆಯದು. ಎಲ್ಲಾ ಪಕ್ಷಗಳವರೂ ಓಟು ಕೇಳಲಿಕ್ಕೆ ರಸ್ತೆಗೆ ಹೋಗುತ್ತೇವೆ. ಆಗ ಏನು ಸ್ವಾಗತ ಸಿಗುತ್ತದೆ? ಆದರೆ ಒಂದೂ ಜವಾಬ್ದಾರಿ ಇಲ್ಲ ಈ ಸರ್ಕಾರಕ್ಕೆ, ಸುಮ್ಮನೆ ಬಹುಮತದ ಮೇಲೆ ನಾವು ಐದು ವರ್ಷ ಉಳಿಯುತ್ತೇವೆ ನಮ್ಮನ್ನು ಯಾರು ಏನೂ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ಸರಿಯಲ್ಲ. ಕಾರ್ಯಕ್ರಮದ ಮೇಲೆ ಉಳಿಯತಕ್ಕ ಸರ್ಕಾರ ಅದು ನಿಜವಾದ ಸ್ಥಿರ ಸರ್ಕಾರ. ಇಲ್ಲದೇ ಹೋದರೆ ಮತದಾರರು ಒಬ್ಬರು ಮೇಲುಕೋಟೆಗೆ ಹೋಗುತ್ತೇನೆ ಅಂದರೆ ಮತ್ತೊಬ್ಬರು ಹೊಸಕೋಟೆಗೆ ಹೋಗುತ್ತೇನೆ ಎಂದರೆ ಎಲ್ಲಾ ಮತದಾರರು ಮೇಲುಕೋಟೆ, ನಂಜನಗೂಡು ಅಥವಾ ತಿರುಪತಿಗೆ ಹೋಗಬೇಕಾಗುತ್ತದೆ. ಆದುದರಿಂದ ಭಾಷಣದ ಮೂಲಕ ಬದಲಾವಣೆ ಮಾಡಲಿಕ್ಕೆ ಸಾಧ್ಯ ಇಲ್ಲಎಂದು ನಾನು ಇವತ್ತು ಮತದಾರರ ಪರವಾಗಿ ಹೇಳುತ್ತಿದ್ದೇನೆ. ನ್ಯಾಯವಾಗಿ ಏನು ಆಗಿದೆ ಎಂದರೆ ಇವತ್ತು ಮತದಾರರೇ ಕೋಮೂ ಸ್ಟೇಜ್‌ನಲ್ಲಿ ಇದ್ದಾರೆ. ಈ ಹಾವಾಡಿಗರು ಮಾಡುತ್ತಾರಲ್ಲಾ ಹಾಗೆ, ಎರಡು ಕಪ್ಪು ಇಟ್ಟುಬಿಟ್ಟು, ಇಲ್ಲೊಂದು ಕಪ್ಪು, ಅಲ್ಲೊಂದು ಕಪ್ಪು. ಒಬ್ಬನ ಕಣ್ಣು ಕಟ್ಟಿ, ಬಾ ಇಲ್ಲಿ, ಬಂದೆ ಇವನ್ಯಾರು? ರಾಮಣ್ಣ, ಅವರ್‍ಯಾರು? ನಂಜೇಗೌಡರು, ಇವರ್‍ಯಾರು? ಯಡಿಯೂರಪ್ಪ ಎಂದು ಹೇಳುವ ಹಾಗೆ ಐದು ವರ್ಷಕ್ಕೊಮ್ಮೆ ಬಾ ಇಲ್ಲಿ, ಬಂದೆ, ಡಬ್ಬ ಎಲ್ಲಿ, ಏನು ಓಟು ಹಾಕು, ತಿರುಗ ಹೋಗಿ ಮಲಗಿಕೋ ಎನ್ನುವ ಹಾಗೆ ಕೋಮಾ ಸ್ಟೇಜ್‌ನಲ್ಲಿ ನಾವು ಮತದಾರರನ್ನು ಇಟ್ಟಿದ್ದೇವೆ. ಐದು ವರ್ಷಕ್ಕೊಮ್ಮೆ ಡಬ್ಬಕ್ಕೆ ಓಟು ಹಾಕಿಸುವುದು ಪುನಃ ಡಬ್ಬ ಒಳಗಡೆ ಇರಿಸುವುದು. ಇದರಿಂದಾಗಿ ಎಲ್ಲಾ ರಾಜಕೀಯ ಪಕ್ಷಗಳನ್ನು ಎಲ್ಲಾ ರಾಜಕಾರಣಿಗಳನ್ನು ಮತದಾರರು ಯಾವ ಯಾವ ಬೈಗುಳಗಳಿಂದ ಬಯ್ಯುತ್ತಿದ್ದಾರೆಂದು ಹೇಳಲಿಕ್ಕೆ ಅಸಾಧ್ಯ. ಇಷ್ಟು ಕೆಳಮಟ್ಟದಲ್ಲಿ ಜನರು ಚಿಂತನೆ ಮಾಡುತ್ತಿದ್ದಾರೆ. ನೀವು ಏನು ಮಾಡುವುದು ಬೇಡ, ಕನಿಷ್ಟ ಐದು ವರ್ಷಕ್ಕೊಮ್ಮೆ ಊರಿಗೆ ಬನ್ನಿ ಎಂದು ಹೇಳಲು ತೀರ್ಮಾನಿಸಿದ್ದಾರೆ.

ಆದುದರಿಂದ ನಾವು ಅತ್ಯಂತ ಜವಾಬ್ದಾರಿಯುತವಾಗಿ ಚಿಂತನೆ ಮಾಡಬೇಕಾಗುತ್ತದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಆರ್ಟಿಕಲ್ ಕೇಳಲು ಹೋದಾಗ ಅಲ್ಲಿ, ತರಕಾರಿ ಬೆಳೆಯುವ ರೈತರಿಗೆ ಬೆಳಿಗ್ಗೆ ಪೇಮೆಂಟ್ ಮಾಡುತ್ತಿದ್ದರು. ನಾನು ಹೇಳುತ್ತಿದ್ದೇನೆ, ನಾವು ರಾಜಕಾರಣದಲ್ಲಿ ಇದೇ ಚಿಂತನೆ ಮಾಡುತ್ತಾ ಹೋದರೆ, ಏನು ಕಾರ್ಯಾಂಗ ಇದೆ ಅದಕ್ಕೆ ಹಾಲು ಅನ್ನ ಊಟ ಮಾಡಿದ ಹಾಗೆ, ಕೆಲವರಿಗಂತೂ ಹೇಳುವವರು ಕೇಳುವವರು ಇಲ್ಲದ ಹಾಗೆ ಆಗಿದೆ. ಆದುದರಿಂದ, ಬಹಳ ಜವಾಬ್ದಾರಿಯುತವಾಗಿ ಚಿಂತನೆ ಮಾಡಬೇಕು. ಇಲ್ಲದೆ ಹೋದರೆ, ವಿಶ್ವಾಸ ಮತ ತೆಗೆದುಕೊಂಡು ನೀವು ಉಳಿದುಕೊಳ್ಳುವುದು, ಇನ್ನು ಐದು ವರ್ಷದ ನಂತರ ಇನ್ಯಾರೋ ಬರುವುದು ಇದು ಸರಿಯಲ್ಲ. ಇದರಲ್ಲಿ ಬದಲಾವಣೆ ಆಗಬೇಕು. ಆದುದರಿಂದ ತಾವು ಅತ್ಯಂತ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆಂದು ನಾನು ಮತದಾರರ ಪರವಾಗಿ ಹೇಳುತ್ತಿದ್ದೇನೆ. ನನ್ನ ಒಂದು ಓಟಿನ ಮೂಲಕ ಸರ್ಕಾರ ಉಳಿದುಕೊಳ್ಳುವುದಾದರೆ ಮತದಾರರ ಪರವಾಗಿ ನಾನು ಹೇಳುತ್ತಿದ್ದೇನೆ, ಮತದಾರರಿಗೆ ಚುನಾವಣೆ ಬೇಕಾಗಿಲ್ಲ, ಅವರಿಗೆ ಕಾರ್ಯಕ್ರಮ ಬೇಕು, ಅವರಿಗೆ ನ್ಯಾಯ ಬೇಕು. ಮತ್ತು ಮೂರು ವರ್ಷಗಳಿಂದ ನಡೆದಿರತಕ್ಕ ಬೇಜವಾಬ್ದಾರಿತನವನ್ನು ಬದಲಾವಣೆ ಮಾಡಿಕೊಳ್ಳಬೇಕು. ನಾನೇ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರನನ್ನು ಹಾಕಲಿಕ್ಕೆ 10 ಪತ್ರಗಳನ್ನು ಕೊಟ್ಟರೂ ಐದು ತಿಂಗಳಾದರೂ ಸಹ ಆಗಲಿಲ್ಲ. ಒಬ್ಬ ಸಿ.ಡಿ.ಪಿ.ಓ, ಹಾಕಿ ಮಕ್ಕಳಿಗೆ ಕೊಡತಕ್ಕ ಆಹಾರ ನೋಡಿಕೊಳ್ಳಲಿಕ್ಕೆ 4 ತಿಂಗಳಾದರೂ ಇಲ್ಲ. ಒಬ್ಬ ಎಸ್.ಐ.ನೇಮಿಸಲಿಕ್ಕೆ 8 ತಿಂಗಳು ಈ ಸದನದಲ್ಲಿ ಚರ್ಚೆ ನಡೆದು, ಒಂದು ಪತ್ರ ಕೊಟ್ಟರೆ ಯಾರೋ ಒಬ್ಬ ಭ್ರಷ್ಟ ಎಸ್.ಐ.ಅನ್ನು ಹಾಕುವುದು, ವಿರೋಧ ಪಕ್ಷದವರ ಪತ್ರ ಎಂದರೆ ಟಾಯಲೆಟ್ ಪೇಪರ್ ಎಂದು ತಿಳಿದುಕೊಂಡಿದ್ದೀರಾ? ನಾವು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕೆಂದು ನಮಗೂ ಜವ್ಬಾಬ್ದಾರಿ ಇದೆ. ವಿರೋಧ ಪಕ್ಷದವರು ಎಂದರೆ ಬರೀ ವಿರೋಧ ಮಾಡುವುದಷ್ಟೇ ನಮ್ಮ ಕೆಲಸವಲ್ಲ. ಸಮಗ್ರ ಸಮಸ್ಯೆಗಳನ್ನು ನಿಮ್ಮ ಮುಂದಿಟ್ಟಾಗ ಅದರ ಸತ್ಯಾಸತ್ಯಗಳನ್ನು ಪರಿಶೀಲನೆ ಮಾಡಿ, ಅದನ್ನು ಅನುಷ್ಠಾನಕ್ಕೆ ತರ್ರುವುದು ಆಡಳಿತ ಪಕ್ಷದವರ ಕೆಲಸ. ವಿರೋಧ ಪಕ್ಷದವರು ನಮ್ಮನ್ನು ಐದು ವರ್ಷಗಳ ತನಕ ಏನೂ ಮಾಡುವುದಕ್ಕೆ ಆಗುವುದಿಲ್ಲ, ನಾವು 112 ಜನ ಇದ್ದೇವೆ ಎಂದರೆ ಏನು ಅರ್ಥ? ಅವರು ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ನಾನಂತೂ ಇಲ್ಲಿಗೆ ಹೊಸಬ, ಮೂರು ವರ್ಷದಿಂದ ಬಂದು ನೋಡುತ್ತಿದ್ದೇನೆ, ನಾನು ಏನೋ ಭ್ರಮೆ ಇಟ್ಟುಕೊಂಡು ಇಲ್ಲಿಗೆ ಬಂದೆ, ಕಬ್ಬಿನ ಗದ್ದೆಯಲ್ಲಿ ಇರುವಾಗಲೇ ಎಷ್ಟೋ ಚೆನ್ನಾಗಿ ಇತ್ತು. ಕಬ್ಬಿನ ಕಂತೆ ತೆಗೆದುಕೊಂಡು ಆರಾಮವಾಗಿ ಇರುತ್ತಿದ್ದೆ. ಇಲ್ಲಿ ಬಂದು ನೋಡಿದರೆ ಏನೂ ಪ್ರಯೋಜನ ಇಲ್ಲ. ಬರೀ ಆಂತರಿಕ ಕಚ್ಚಾಟಗಳು; ಯಾವುದೇ ಪಕ್ಷಕ್ಕೆ ನೀತಿ ನಿಯಮ ಇಲ್ಲ. ದಳದಲ್ಲಿ ಇವತ್ತು ಜಯಪ್ರಕಾಶ್ ನಾರಾಯಣ್‌ರವರ ನೀತಿ ನಿಯಮ ಉಳಿದುಕೊಂಡಿದೆಯೆ? ಭ್ರಷ್ಟಾಚಾರದ ವಿರುದ್ಧ ಹೋರಾಡಿದಂಥ, ಅದರ ವಿರುದ್ಧ ಕೂಗು ಕೂಗಿದಂಥ ಮಹಾನ್ ವ್ಯಕ್ತಿಯ ನಿಯಮ

ಉಳಿದುಕೊಂಡಿದೆಯೆ? ಕನಿಷ್ಟ ಗುಣಾತ್ಮಕವಾಗಿ, ವಿಶ್ವಮಾನವರಾಗುವುದು ಬೇಡ, ಕನಿಷ್ಟ ವಿಶ್ವಾಸ ಮಾನವರಾಗಿ ಉಳಿದುಕೊಳ್ಳೋಣ. ಹೀಗೆ ಚಿಂತನೆ ಮಾಡಿದರೆ ಪರವಾಗಿಲ್ಲ. ಬೆಳಿಗ್ಗೆ ಒಂದು ಪಕ್ಷ, ಸಾಯಂಕಾಲ ಒಂದು ಪಕ್ಷ. ಒಂದು ರೀತಿ ಇಡುಗಾಯಿ ಒಡೆದ ಹಾಗೆ. ನಮ್ಮ ಹಳ್ಳಿ ಕಡೆ ಕಾಯಿ ಒಡೆದರೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡಿದ ಹಾಗೆ. ಇದನ್ನು ನೋಡಿದರೆ ಜನ ಏನೆನ್ನುತ್ತಾರೆ? ಆದುದರಿಂದ, ದಯವಿಟ್ಟು ಮಾನ್ಯ ಅಧ್ಯಕ್ಷರೆ, ನಾನು ಒಬ್ಬ ರೈತನ ಮಗನಾಗಿ ಈ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯನ್ನು ನೋಡಿದಾಗ ಒಂದು ರೀತಿಯ ದಿಗ್ಭ್ರಮೆ ಆಗಿದೆ. ಯಾವ ಭವಿಷ್ಯದ ಮೇಲೆ ಈ ದೇಶ ಉಳಿದುಕೊಳ್ಳಬೇಕು, ಯಾವ ವಿಚಾರದ ಮೇಲೆ ಈ ದೇಶ ಉಳಿದುಕೊಳ್ಳಬೇಕು? ದುಡಿಯುವವರ ಬಗ್ಗೆ ಒಬ್ಬರಿಗೂ ಜವಾಬ್ದಾರಿ ಇಲ್ಲ. ಎಲ್ಲರೂ ನಿರ್ಲಕ್ಷ್ಯ ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ ಎಲ್ಲರೂ ತಮ್ಮ ಬೇಜವಾಬ್ದಾರಿತನವನ್ನು ತಿದ್ದಿಕೊಂಡು ಬಹಳ ಗಂಭೀರವಾಗಿ ಸರ್ಕಾರವನ್ನು ನಡೆಸತಕ್ಕ ಕೆಲಸವನ್ನು ಮಾಡಬೇಕು. ಮತದಾರರಿಗೆ ಚುನಾವಣೆ ಬೇಕಾಗಿಲ್ಲ. ಆದರೆ, ಮತದಾರರ ಪರವಾಗಿ ನನ್ನ ಒಂದು ಓಟಿನ ಮೂಲಕ ನಿಮ್ಮ ಪಕ್ಷ ಉಳಿದುಕೊಳ್ಳುವುದಾದರೆ ನಾನು ನನ್ನ ಮತವನ್ನು ಕೊಡುತ್ತೇನೆ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ.ದೇಶ್‌ಪಾಂಡೆ (ಹಳಿಯಾಳ ಕ್ಷೇತ್ರ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರನ್ವಾನಿತ ಮುಖ್ಯ ಮಂತ್ರಿಗಳು ಈ ಶಾಸನಸಭೆಯಲ್ಲಿ ವಿಶ್ವಾಸ ಮತವನ್ನು ಕೇಳಿದ್ದಾರೆ. ನಾನು ಕೆಲವು ವಿಚಾರಗಳನ್ನು ಬಹಳ ವಿನಯವಾಗಿ ಹಾಗೂ ಪ್ರಾಮಾಣಿಕವಾಗಿ ಯಾವುದೇ ಸಂಕೋಚ ಇಲ್ಲದೇ ಈ ಸದನದ ಮುಂದೆ ಇಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಈ ಅಧಿವೇಶನ ಕರೆಯುವ ಅವಶ್ಯಕತೆ ಏನಿತ್ತು ಎನ್ನುವ ಒಂದು ಪ್ರಶ್ನೆಯನ್ನು ಕೇಳಿದರು. ಶಾಸನ ಸಭೆಗೆ ಬಹುಮತ ಇದೆಯೋ ಅಥವಾ ಇಲ್ಲವೋ ಎಂದು ಕೇಳುವ ಸಂದರ್ಭ ಬಂದು, ರಾಜಕೀಯ ಪಕ್ಷದಲ್ಲಿ ಶಾಸಕರು ರಾಜ್ಯಪಾಲರನ್ನು ಭೇಟಿ ಆಗಿ ನಾವು ಸರ್ಕಾರದಿಂದ ಹೊರಗೆ ಬಂದಿದ್ದೇವೆ, ಸರ್ಕಾರದಲ್ಲಿ ಬಹುಮತ ಇದೆಯೇ ಎಂದು ಕೇಳಿದಾಗ ಮಾನ್ಯ ರಾಜ್ಯಪಾಲರು ಮಾನ್ಯ ಮುಖ್ಯಮಂತ್ರಿಗಳಿಗೆ ವಿಶ್ವಾಸ ಮತ ಯಾಚನೆ ಮಾಡಲು ಆದೇಶ ನೀಡಿದರು. ಆಗ ಅದೇ ಪ್ರಕಾರ, ವಿರೋಧ ಪಕ್ಷದ ನಾಯಕರು ಸರ್ಕಾರ ಬಹುಮತ ಕಳೆದುಕೊಂಡಿದೆ ಎಂದಾಗ ಸಹ ವಿಶ್ವಾಸಮತ ಕೇಳಬಹುದು. ಆದರೆ ಈ ಒಂದು ಶಾಸನಸಭೆಯನ್ನು ಕರೆದದ್ದು ಏಕೆ? ನಾನು ಮತ್ತು ನನ್ನ ಸ್ನೇಹಿತರು ಸರ್ಕಾರದಿಂದ ಹೊರಗಡೆ ಬರುವಾಗ ನಮ್ಮ ಮುಖ್ಯಮಂತ್ರಿಗಳು ಸಜ್ಜನರು, ಅವರ ಬಗ್ಗೆ ನಮ್ಮ ಯಾವುದೇ ವಾದ ಇಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಈ ಸರ್ಕಾರವನ್ನು destabilise ಮಾಡುವುದು ನಮ್ಮ ಕಾರ್ಯಕ್ರಮ ಅಲ್ಲ ಎನ್ನುವುದನ್ನು ಸಹ ಸ್ಪಷ್ಟವಾಗಿ ಹೇಳಿದ್ದೇವೆ. ನಾನು ರಾಜೀನಾಮೆಯನ್ನು

ಕೊಡುವುದಕ್ಕಿಂತ ಮುಂಚೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಆಗಿ, ಸರ್ಕಾರವನ್ನು ವಜಾ ಮಾಡತಕ್ಕ ಕಾರ್ಯಕ್ರಮ ನಮ್ಮದು ಅಲ್ಲ ಎನ್ನುವುದನ್ನು ಸ್ಪಷ್ಟವಾಗಿ ಅವರಿಗೆ ಹೇಳಿದ್ದೆ. ಇಲ್ಲಿ ಹಲವಾರು ಶಾಸಕರು ಕುಳಿತಿದ್ದಾರೆ. ನಾನು ಇವತ್ತಿನತನಕ ಯಾವ ಶಾಸಕರನ್ನಾಗಲಿ, ಮಂತ್ರಿಗಳನ್ನಾಗಲೀ ನಮ್ಮ ಜೊತೆ ಬನ್ನಿ ಎಂದು ಒತ್ತಾಯ ಮಾಡಿಲ್ಲ. ನನ್ನ ಕೆಲವು ಸ್ನೇಹಿತರಿಗೆ ವಿನಂತಿ ಮಾಡಿದ್ದೇವೆಯೇ ಹೊರತು ಯಾರಿಗೂ ಒತ್ತಾಯ ಮಾಡಿಲ್ಲ. ಈ ಮಂತ್ರಿಮಂಡಲದಲ್ಲಿ ನನ್ನ ಆತ್ಮೀಯ ಸ್ನೇಹಿತರು, ಮಂತ್ರಿಗಳು ಇದ್ದಾರೆ, ಆದರೆ ನಾನು ಯಾರನ್ನು ಒತ್ತಾಯ ಮಾಡಿಲ್ಲ. ಏಕೆಂದರೆ ಸರ್ಕಾರವನ್ನು ತೆಗೆಯುವ ಕೆಲಸ ನಮ್ಮದು ಅಲ್ಲ. ಆಯಾ ರಾಮ್ ಗಯಾ ರಾಮ್ ಅನ್ನುವವನು ನಾನಲ್ಲ. ನಾನು 20 ವರ್ಷಗಳಿಂದ ಇದೇ ರಾಜಕೀಯ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ, ನನಗೆ ಸಾಧ್ಯವಾದ ಮಟ್ಟಿಗೆ ಸೇವೆ ಸಲ್ಲಿಸಿದ್ದೇನೆ. ಹಾಗಾಗಿ ಇವತ್ತು ಈ ಶಾಸನಸಭೆ ಕರೆಯುವ ಅವಶ್ಯಕತೆ ಏನಿತ್ತು? Was it to check-mate us? Was it to stop exodus of MLAs from the party? ಒಂದು ಕಡೆ ಜನರ ಮನಸ್ಸಿನಲ್ಲಿ ಗೊಂದಲ ಉಂಟಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಇದು ಹೇಗೆ ಸಾಧ್ಯ? ನಾವು ರಾಜೀನಾಮೆ ಕೊಟ್ಟ 24 ಗಂಟೆಯೊಳಗೆ ಶಾಸನಸಭೆ ಕರೆಯಬೇಕೆಂದು ನಿರ್ಣಯ ಆಗಬೇಕು. ಆದರೆ 24 ಗಂಟೆಯೊಳಗೆ ಜನರ ಮನಸ್ಸಿನಲ್ಲಿ ಗೊಂದಲ ಉಂಟಾಗಲು ಹೇಗೆ ಸಾಧ್ಯ?

3.50 ಪಿ.ಎಂ

ನಮ್ಮದೇ ಪಕ್ಷದ ಒಬ್ಬರು ಹಿರಿಯ ನಾಯಕರು ಕಳೆದ ಎರಡು ತಿಂಗಳ ಹಿಂದೆ ಇಂಥದ್ದೇ ಪ್ರಸಂಗದಲ್ಲಿ ಸೆಲೆಕ್ಟೆಡ್ ಶಾಸಕರ ಸಭೆಯನ್ನು ಕರೆದಿದ್ದರು; ಆ ಸಮಯದಲ್ಲೂ ಸಹ ಜೆ.ಹೆಚ್.ಪಟೇಲರ ಸರ್ಕಾರ ಇರುತ್ತದೋ ಇಲ್ಲವೋ ಎಂದು ಎಲ್ಲಾ ಪತ್ರಿಕೆಗಳಲ್ಲಿ ಬಂತು. ಹಲವಾರು ಜನರ ಮನಸ್ಸಿನಲ್ಲಿ ಸಂಕೋಚ ಬಂದಿತ್ತು, ಆಗಲೂ ಜನರ ಮನಸ್ಸಿನಲ್ಲಿ ಇದಕ್ಕಿಂತ ಹೆಚ್ಚಿನ ಗೊಂದಲವಿತ್ತು. ಆದರೆ ಆಗ ಏಕೆ ಶಾಸನ ಸಭೆಯನ್ನು ಕರೆಯಲಿಲ್ಲ? ಪ್ರತಿಸಾರಿ ಶಾಸಕರು, ಮಂತ್ರಿಗಳು ರಾಜೀನಾಮೆ ಕೊಟ್ಟಾಗ ಶಾಸನ ಸಭೆಯನ್ನು ಕರೆದರೆ ಈ ಶಾಸನ ಸಭೆಯ ಗೌರವ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇಂದು ಶಾಸನ ಸಭೆಯನ್ನು ಕರೆಯುವ ಅವಶ್ಯಕತೆ ಇರಲಿಲ್ಲ. ಇದರಿಂದಾಗಿ ನಾಡಿನ ಜನರ ಮೇಲೆ ನಾವು ಭಾರವನ್ನು ಹಾಕುತ್ತಿದ್ದೇವೆಂದು ನನ್ನ ಅನಿಸಿಕೆ. ಮಾನ್ಯ ಜೆ.ಹೆಚ್.ಪಟೇಲರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಮುಖ್ಯಮಂತ್ರಿಯಾದ ಹತ್ತು ಹನ್ನೊಂದು ದಿವಸಗಳೊಳಗಾಗಿ ನಮ್ಮ ಪಕ್ಷದಿಂದ ಮಾನ್ಯ ರಾಮಕೃಷ್ಣ ಹೆಗಡೆಯವರ ಉಚ್ಚಾಟನೆಯಾಯಿತು.

ಶ್ರೀ ಬಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಅವರ ಪಕ್ಷದ ವ್ಯವಹಾರವನ್ನು ಕೇಳಲು ನಾವು ಶಾಸನ ಸಭೆಗೆ ಬಂದಿಲ್ಲ. ಅವರ ಪಕ್ಷದ ವ್ಯವಹಾರವನ್ನು ವೇದಿಕೆಯಲ್ಲಿ

ಮಾತನಾಡಿಕೊಳ್ಳಲಿ.

ಶ್ರೀಮತಿ ಪ್ರಮೀಳ ನೇಸರ್ಗಿ: ಅವರು ಸಂಪೂರ್ಣವಾಗಿ ಹೇಳಲಿ ಬಿಡಿ.

ಶ್ರೀ ಬಿ.ಮುನಿಯಪ್ಪ: ಬೇಕಾದರೆ ನೀವು ಕೇಳಿಕೊಳ್ಳಿ, ಇದು ಶಾಸನ ಸಭೆ, ಪಕ್ಷದ ವೇದಿಕೆಯಲ್ಲ. ನಾವು ಅವರ ಪಕ್ಷದ ವ್ಯವಹಾರವನ್ನು ಕೇಳಲು ಇಲ್ಲಿಗೆ ಬಂದಿಲ್ಲ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ನೀವೂ ಬೇಕಾದರೆ ಹೇಳಿ. ಅವರು ಹೇಳಲಿ ಬಿಡಿ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ನಾನು ಇಲ್ಲಿ ಪಕ್ಷದ ವಿಚಾರವನ್ನು ತರುತ್ತಿಲ್ಲ. ನನ್ನ ಸ್ನೇಹಿತರ ಗಮನಕ್ಕೆ ತರುತ್ತಿರುವುದೇನೆಂದರೆ, ನಾನು question of stability ಬಗ್ಗೆ ಮಾತನಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು stability ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಅದನ್ನು ನೂರು ಪಾಲು ಒಪ್ಪಿಕೊಳ್ಳುತ್ತೇನೆ. ಒಂದು ಪಕ್ಷ ಅಧಿಕಾರದಲ್ಲಿದ್ದು ಅದು ಮಲಗುವುದು stability ಅಲ್ಲ. ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅಧಿಕಾರದಲ್ಲಿರುವ ಸರ್ಕಾರ ಜನರ ಪರವಾಗಿ ಕೆಲಸ ಮಾಡಬೇಕಾಗುತ್ತದೆ, ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ. ನಾನು ಇಲ್ಲಿ ಪಕ್ಷದ ವಿಚಾರವನ್ನು ಹೇಳುತ್ತಿಲ್ಲ. ನಾನು stability ಬಗ್ಗೆ ಮಾತನಾಡುತ್ತಿದ್ದೇನೆ. Who started it? It was Hegde's expulsion which started it.

ಶ್ರೀ ಬಿ.ಮುನಿಯಪ್ಪ: ರಾಮಕೃಷ್ಣ ಹೆಗಡೆಯವರನ್ನು ಉಚ್ಚಾಟನೆ ಮಾಡಿದಾಗ ತಾವು ಸುಮ್ಮನೆ ಕುಳಿತಿದ್ದಿರಿ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಸುಮ್ಮನೆ ಕುಳಿತಿರಲಿಲ್ಲ. ಅದನ್ನು ಹೇಳಲು ನೀವು ಯಾರು? ನೀವು ಮಾತನಾಡಬೇಕಾದರೆ ಅಧ್ಯಕ್ಷರ ಅಪ್ಪಣೆ ಪಡೆದು ಮಾತನಾಡಿ.

ಶ್ರೀ ಬಿ.ಮುನಿಯಪ್ಪ: ಇದು ಶಾಸನಸಭೆ, ನಿಮ್ಮ ಪಕ್ಷದ ಕತೆಯನ್ನು ಕೇಳಲು ಇಲ್ಲಿ ಸಮಯ ಇಲ್ಲ.

(ಗೊಂದಲ)

ಶ್ರೀ ರಾಮನಾಥ ರೈ: ಮಾನ್ಯ ಅಧ್ಯಕ್ಷರೆ, ನಾವು ಮಧ್ಯ ಮಾತನಾಡಿದರೆ ತಪ್ಪು ಎಂದು ಹೇಳುತ್ತೀರಿ, ಆದರೆ ಇವರು ಮಾತನಾಡಲು ಅನುಮತಿ ಇದೆಯೇ? ನಾವು ಏನಾದರೂ

ಮಧ್ಯೆ ಮಾತನಾಡಿದರೆ ಮಾತನಾಡಬಾರದೆಂದು ಹೇಳುತ್ತೀರಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ಸಪೋರ್ಟ್ ಮಾಡಬೇಕಾದರೆ....

ಅಧ್ಯಕ್ಷರು: ಮಾನ್ಯ ಶಿವಕುಮಾರ್‌ರವರೆ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಮುನಿಯಪ್ಪನವರು ಹೇಳುವುದರಲ್ಲೇನು ತಪ್ಪಿಲ್ಲ. ಶಾಸನಸಭೆಯಲ್ಲಿ ಪರ್ಸನಲ್ ವಿಚಾರವನ್ನು ಹೇಳುವುದು ಹುಡುಗಾಟಿಕೆಯಲ್ಲ. ಮಾನ್ಯ ಮುಖ್ಯಮಂತ್ರಿಯವರು ವಿಶ್ವಾಸ ಮತಕ್ಕಾಗಿ ಶಾಸನಸಭೆಯನ್ನು ಕರೆದಿದ್ದಾರೆ. ವಿಶ್ವಾಸ ಮತದಲ್ಲಿ ಮೆಜಾರಿಟಿ ಇದ್ದರೆ ಜನರಿಗೆ ಅನುಕೂಲವಾಗುತ್ತದೆ. ಅವರು ಹೀಗೆ ಮಾಡಿದ್ದಾರೆ, ಇವರು ಹೀಗೆ ಮಾಡಿದ್ದಾರೆ ಎಂದು ಹೇಳಲು, ಕೇಳಲು ನಾವು ಇಲ್ಲಿ ಬಂದಿಲ್ಲ. It is purely confidence vote. Show the majority in the HOuse and tell the people that we have the majority. People should be informed of the majority in the House. ನಾವು ಸುಮ್ಮನೆ ಕತೆ ಕೇಳಿಕೊಂಡು ಹೋಗಲು ಇಲ್ಲಿ ಬಂದಿಲ್ಲ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಸರ್ಕಾರದ ಬಗ್ಗೆ ಸದನದ ವಿಶ್ವಾಸವನ್ನು ಮಾನ್ಯ ಮುಖ್ಯಮಂತ್ರಿಯವರು ಇಂದು ಕೋರಿದ್ದಾರೆ. ವಿರೋಧ ಪಕ್ಷದ ನಾಯಕರುಗಳೆಲ್ಲರೂ ಸಹ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ದೇಶಪಾಂಡೆಯವರು, ರಾಮಕೃಷ್ಣ ಹೆಗಡೆಯವರ ಉಚ್ಚಾಟನೆಯಾಯಿತು, ಅಲ್ಲಿಂದ ಸರ್ಕಾರದಲ್ಲಿ ಇನ್‌ಸ್ಟೆಬಿಲಿಟಿ ಪ್ರಾರಂಭ ವಾಯಿತು ಎಂದು ಹೇಳಿದ್ದಾರೆ. ರಾಮಕೃಷ್ಣ ಹೆಗಡೆಯವರ ಉಚ್ಚಾಟನೆಯಾಗಿದ್ದು ಒಂದೂವರೆ ವರ್ಷಗಳ ಹಿಂದೆ. ಅಲ್ಲಿಂದ ಇಲ್ಲಿಯವರೆಗೂ ಸುಭದ್ರವಾದ ಸರ್ಕಾರವಿತ್ತು. ಆ ಸರ್ಕಾರದಲ್ಲಿ ಇವರು ಸಹ ಒಂದೂವರೆ ವರ್ಷಗಳ ಕಾಲ ಸುಭದ್ರವಾಗಿ ಮಂತ್ರಿಗಳಾಗಿದ್ದರು. ನಮಗೆ ಇನ್‌ಸ್ಟೆಬಿಲಿಟಿ ಬಂದಿದೆಯೆಂದು ಭಯವಿಲ್ಲ, ಅಥವಾ ಆ ರೀತಿ ಅಂಜಿಕೆಯೂ ಇಲ್ಲ. ನಮ್ಮ ಸರ್ಕಾರ ಸುಭದ್ರವಾಗಿದೆ ಎನ್ನತಕ್ಕದ್ದನ್ನು ರಾಜ್ಯದ ಜನತೆಗೆ ತೋರಿಸಬೇಕು ಎನ್ನತಕ್ಕ ಕಾರಣಕ್ಕಾಗಿಯೇ ಈ ವಿಶ್ವಾಸಮತ ನಿರ್ಣಯವನ್ನು ಧೈರ್ಯದಿಂದ ತಂದದ್ದು. ನಮಗೆ ಇನ್‌ಸ್ಟೆಬಿಲಿಟಿ ಇದೆಯೆನ್ನತಕ್ಕ ಭಯ, ಅಂಜಿಕೆ ಇದ್ದಿದ್ದರೆ ನಾವು ಸದನದ ಮುಂದೆಯೇ ಬರಲು ಸಾಧ್ಯವಾಗುತ್ತಿರಲಿಲ್ಲ. ನಮಗೆ ಸ್ಟೆಬಿಲಿಟಿಯ ಬಗ್ಗೆ ಸ್ಪಷ್ಟವಾದ ವಿಶ್ವಾಸವಿದೆ, ನಮಗೆ ಜನರ, ಸದನದ ವಿಶ್ವಾಸವಿದೆ. ಅವರು ಯಾವ ಕಾರಣಕ್ಕಾಗಿ ಹೊರಕ್ಕೆ ಹೋಗಿದ್ದಾರೆ ಅದರ ಬಗ್ಗೆ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಅವರು ನಮ್ಮ ಸರ್ಕಾರದಲ್ಲಿದ್ದರು; ಅವರು ಏಕೆ ಹೊರಗೆ ಹೋದರು

ಎಂಬ ಬಗ್ಗೆ ವಿವರಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೆ. ಉಳಿದಂಥ ಎಲ್ಲಾ ಸದಸ್ಯರು, ಮಂತ್ರಿಗಳು ಮಾನ್ಯ ಜೆ.ಹೆಚ್.ಪಟೇಲರ ನೇತ್ರತ್ವದಲ್ಲಿನ ಸರ್ಕಾರದಲ್ಲಿ ಸಂಪೂರ್ಣವಾದ ವಿಶ್ವಾಸವನ್ನು ಹೊಂದಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವತ್ತಿಗೆ ಮಾತ್ರ ವಿಶ್ವಾಸವಿದೆ.

(INTERRUPTIONS)

ಶ್ರೀ ಸಿದ್ಧರಾಮಯ್ಯ: ಇವತ್ತಿಗೆ ಮಾತ್ರವಲ್ಲ. ನಮ್ಮ ಸರ್ಕಾರ ಇನ್ನು ಎರಡು ವರ್ಷಗಳ ಕಾಲ ಅಧಿಕಾರದಲ್ಲಿರುತ್ತದೆ. ಜನರು ಐದು ವರ್ಷಗಳ ಕಾಲ ಅಧಿಕಾರವನ್ನು ಮಾಡಬೇಕೆಂದು ತೀರ್ಪು ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ನಮ್ಮ ಸರ್ಕಾರವನ್ನು ಯಾರೇ ಆಗಲಿ ಎಷ್ಟೇ ಅಸ್ಥಿರಗೊಳಿಸಲು ಪ್ರಯತ್ನ ಮಾಡಿದರೂ ಸಹ ನಮ್ಮ ಸರ್ಕಾರ ಐದು ವರ್ಷಗಳ ಕಾಲ ಅಧಿಕಾರದಲ್ಲಿರುತ್ತದೆ. ಬಿ.ಜೆ.ಪಿ, ಕಾಂಗ್ರೆಸ್, ಅಥವಾ ಮತ್ತಾವುದೇ ಪಕ್ಷದಿಂದ ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲು ಸಾಧ್ಯವಿಲ್ಲ. ಅದನ್ನು ಸಾಬೀತು ಮಾಡುವುದಕ್ಕೋಸ್ಕರವೇ ಈ ಶಾಸನಸಭೆಯನ್ನು ಕರೆದಿರತಕ್ಕದ್ದು.

ಶ್ರೀ ಆರ್.ವಿ.ದೇಶ್‌ಪಾಂಡೆ: ಶಾಸನಸಭೆಯಲ್ಲಿ ಸ್ಟೆಬಿಲಿಟಿ ವಿಚಾರ ಬಂದಿದ್ದರಿಂದ ನಾನು ಅದರ ಬಗ್ಗೆ ವಿಚಾರ ಮಾಡಿದ್ದೇನೆ. ಕಳೆದ ಒಂದೂವರೆ ವರ್ಷದಿಂದ ನಾನು ಮಂತ್ರಿ ಮಂಡಲದಲ್ಲಿ ಇದ್ದದ್ದು ನಿಜ. ಮಾನ್ಯ ಮುಖ್ಯಮಂತ್ರಿಯವರ ವಿಶ್ವಾಸ ಮತ್ತು ಆಶೀರ್ವಾದದಿಂದ ಎಷ್ಟು ಸಾಧ್ಯವೋ ಅಷ್ಟು ಪ್ರಾಮಾಣಿಕವಾಗಿ ನಾನು ಕೆಲಸ ಮಾಡಿದ್ದೂ ನಿಜ. ನಾನು ಹಲವಾರು ಬಾರಿ ರಾಜೀನಾಮೆ ಕೊಡಲು ಪ್ರಯತ್ನ ಮಾಡಿದ್ದೂ ನಿಜ. ಹಲವಾರು ಕಾರಣಗಳಿಂದ ಉಳಿದುಕೊಂಡದ್ದೂ ನಿಜ. ಆದರೆ ಪ್ರಶ್ನೆ ಏನಿದೆಯೆಂದರೆ, ಇವತ್ತು ಸ್ಟೆಬಿಲಿಟಿಯ ವಿಚಾರ ಪ್ರಸ್ತಾಪಕ್ಕೆ ಬಂದಾಗ, ಕಳೆದ ಒಂದೂವರೆ ವರ್ಷದಲ್ಲಿ ಸರ್ಕಾರವನ್ನು ಡೀಸ್ಟೆಬಿಲೈಜ್ ಮಾಡುವುದಕ್ಕೆ ಸಹ ಸಿಸ್ಟಮ್ಯಾಟಿಕ್ ಆಗಿ ಪ್ರಯತ್ನಗಳಾಗಿವೆ. ಆಗ ಈ ರೀತಿ ಶಾಸನಸಭೆಯನ್ನು ಏಕೆ ಕರೆಯಲಿಲ್ಲ? ಆಗ ವಿಶ್ವಾಸ ಮತವನ್ನು ಏಕೆ ಕೇಳಲಿಲ್ಲ? ಇಷ್ಟೆ: I want to make a point; nothing more than that. ಹಲವಾರು ಬಾರಿ ಇದು ಆಗಿದೆ. ಇವತ್ತೇ ಇದು ಆದದ್ದಲ್ಲ. ಇಂದು ಕೇವಲ ಆರು ಜನರು ಮಾತ್ರ ಹೊರಕ್ಕೆ ಹೋಗಿದ್ದಾರೆ. 124 ಜನರ ಬೆಂಬಲ ಇದೆ, ವಾಟಾಳ್ ನಾಗರಾಜ್‌ರವರು, ಸಿ.ಪಿ.ಐ.ನವರು ಬೆಂಬಲ ಕೊಟ್ಟಿದ್ದಾರೆ, ಮೂರನೇ ಒಂದು ಭಾಗ ಬೆಂಬಲ ಬಂದಂತಾಗುತ್ತದೆ, ಹೀಗಿದ್ದ ಮೇಲೆ ಕೇವಲ ಆರು ಜನರು ಹೊರಕ್ಕೆ ಹೋದರೆ ತೊಂದರೆಯೇನಾಗುತ್ತದೆ? ಆದರೆ ಕೆಲವು ಸಲ ಹಲವಾರು ಶಾಸಕರು ಒಂದು ಕಡೆ ಸೇರಿ ಸರ್ಕಾರವನ್ನು ತೆಗೆಯಬೇಕೆಂದು ನಿರ್ಧಾರ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಪಕ್ಷಾಂತರ ಮಾಡಲು ಎಂಟನೇ ತಾರೀಖನ್ನು ಅಂತಿಮ ಗಡುವಾಗಿ ಕೊಟ್ಟಿದ್ದರಲ್ಲ ಅದಕ್ಕೋಸ್ಕರ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಹೇಳುವುದನ್ನು ಹೇಳಲಿ. ಏಕೆ ಇವರು ಮಧ್ಯೆ ಮಾತನಾಡುತ್ತಾರೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಂಟನೇ ತಾರೀಖಿನಂದು ಮಾನ್ಯ ಜಿಗಜಿಣಗಿಯವರು ಮತ್ತು ಇತರರು ರಾಜೀನಾಮೆ ಕೊಟ್ಟಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಎಂಟನೇ ತಾರೀಖು ಗಡುವು ಕೊಟ್ಟಿದ್ದರು, ಅಂದು ಏಕೆ ರಾಜೀನಾಮೆ ಕೊಡಲಿಲ್ಲ?

(ಗೊಂದಲ)

ಶ್ರೀ ಆರ್.ವಿ.ದೇಶ್‌ಪಾಂಡೆ: ಆಡಳಿತ ಪಕ್ಷದವರಿಗಿಂತ ನೀವೇ ಹೆಚ್ಚು ಕ್ರಿಯಾಶೀಲರಾಗಿಬಿಟ್ಟಿದ್ದೀರಲ್ಲಾ? Why they are so much emotional; I don't know.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲಿ ಪಕ್ಷದ ಪ್ರಶ್ನೆಯಲ್ಲ. ಸರ್ಕಾರದ ಸ್ಥಿರತೆಯ ಪ್ರಶ್ನೆ, ರಾಜ್ಯದ ಜನತೆಯ ಹಿತದೃಷ್ಟಿಯ ಪ್ರಶ್ನೆ, ಆಡಳಿತ, ವಿರೋಧ ಪಕ್ಷದ ಪ್ರಶ್ನೆ ಇದಲ್ಲ. ಈ ದೇಶದ, ರಾಜ್ಯದ ಹಿತದೃಷ್ಟಿ ಮುಖ್ಯ. ಈ ಸದನ ಯಾವುದೇ ಪಕ್ಷದ ಸ್ವತ್ತಲ್ಲ. ಈ ರಾಜ್ಯದ ಜನತೆ ಪ್ರತಿನಿಧಿಸತಕ್ಕದ್ದು ಇದು.

ಶ್ರೀ ಆರ್.ವಿ.ದೇಶ್‌ಪಾಂಡೆ: ನನಗೆ ಅದೆಲ್ಲವೂ ಗೊತ್ತು. ನಾನು 1983ರಿಂದಲೂ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಲೋಕಸಭೆಯ ಚುನಾವಣೆಗೆ ಜನಾದೇಶವಿಲ್ಲವೆಂದು ಹೇಳಿದರು. ಲೋಕಸಭಾ ಚುನಾವಣೆಯಲ್ಲಿ ಸೋತರೂ ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲವೆಂದು ಕೆಲವರು ಹೇಳಿದರು. ಲೋಕಸಭಾ ಚುನಾವಣೆಗೆ ಜನಾದೇಶವಿಲ್ಲವೆಂದಾದರೆ ಜನರಿಗೆ ಏನು ಹೇಳುತ್ತಿದ್ದೀರಿ? What are you conveying to the people? ಲೋಕಸಭಾ ಚುನಾವಣೆಗೆ ಜನಾದೇಶವಿಲ್ಲವೆಂದು ಹೇಳುವುದಾದರೆ, ಈ ಸದನ ಮೂಲಕ ಸರ್ಕಾರದ ಸ್ಥಿರತೆ ಇದೆಯೆಂದು ಜನರಿಗೆ ಹೇಳುವ ಅವಶ್ಯಕತೆ ಏನಿದೆ? ಇವತ್ತು ಏನು ಶಾಸನ ಸಭೆಯನ್ನು ಕರೆದಿದ್ದಾರೆ ಅದರ ಅವಶ್ಯಕತೆ ಇರಲಿಲ್ಲ. ನಮಗೆ ಸರ್ಕಾರವನ್ನು ಡೀಸ್ಟೆಬಿಲೈಜ್ ಮಾಡುವ ಉದ್ದೇಶ ವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಅಧ್ಯಕ್ಷರೆ, ನಾನು ರಾಜಕೀಯ ಮೊರ್‍ಯಾಲಿಟಿ ಬಗ್ಗೆ ಮಾತನಾಡುವುದು ಬೇಡ. ಪೊಲಿಟಿಕಲ್ ಮೊರ್‍ಯಾಲಿಟಿಯ ಬಗ್ಗೆ ಮಾತನಾಡಬೇಕಾದರೆ ನಾವು ಗಂಟೆಗಟ್ಟಲೆ ಮಾತನಾಡಬಹುದು. ಆದರೆ ಸದನ ಇಡೀ ವರ್ಷ ನಡೆಯಬೇಕಾಗುತ್ತದೆ. ಈ ಪೊಲಿಟಿಕಲ್ ಮೊರ್‍ಯಾಲಿಟಿ ಬಗ್ಗೆ ಕೇಳುತ್ತೇನೆ. ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ದಳದಿಂದ ಉಚ್ಛಾಟನೆ ಆದಾಗ ಪೊಲಿಟಿಕಲ್ ಮೊರ್‍ಯಾಲಿಟಿ ಎಲ್ಲಿ ಹೋಗಿತ್ತು? ಮಾನ್ಯ ಬೊಮ್ಮಾಯಿಯವರ ಸರ್ಕಾರ ವಜಾ ಆದಾಗ ಪೊಲಿಟಿಕಲ್ ಮೊರ್‍ಯಾಲಿಟಿ ಎಲ್ಲಿ ಹೋಗಿತ್ತು? I want to ask my friends. ಇವತ್ತು ಅಸ್ಥಿರತೆ ಈ ಸರ್ಕಾರಕ್ಕೆ

ತರಲಿಕ್ಕೆ ಪ್ರಯತ್ನ ಮಾಡಿದರಲ್ಲ ಆಗ ಪೊಲಿಟಿಕಲ್ ಮೊರ್ಯಾಲಿಟಿ ಎಲ್ಲಿ ಹೋಯಿತು?...

ಶ್ರೀ ಬಿ.ಮುನಿಯಪ್ಪ: ಮಾನ್ಯ ಮುಖ್ಯಮಂತ್ರಿಗಳೇ, ತಾವು ಅವರಿಗೆ ಉತ್ತರ ಕೊಡುತ್ತೀರಾ?...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ದೇಶಪಾಂಡೆಯವರು ಏನೋ ಕೇಳುತ್ತಿದ್ದಾರೆ. ಇದಕ್ಕೆ ಯಾರು ಉತ್ತರ ಕೊಡುತ್ತಾರೆ?

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ನಾನು ಇಷ್ಟೇ ಹೇಳಬಯಸುತ್ತೇನೆ. Let us not talk more of political morality. ಇವತ್ತು ನಾವು ಈ ಒಂದು ಸರ್ಕಾರವನ್ನು ಬೀಳಿಸಲಿಕ್ಕೆ ಯಾವುದೇ ಪ್ರಯತ್ನ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ಪೋರ್ಟ್‌ಫೋಲಿಯೋ ಇಟ್ಟುಕೊಂಡಿದ್ದಾರೆ. ಅವರಿಗೆ ಈ ವಿಚಾರ ಗೊತ್ತಾಗುತ್ತದೆ. ಆ ತರಹ ನಾವು ಯಾವುದೇ ಪ್ರಯತ್ನ ಮಾಡಿಲ್ಲ. ಆ ಪ್ರಯತ್ನ ಮಾಡುವ ಅವಶ್ಯಕತೆ ಕೂಡ ನಮಗೆ ಇಲ್ಲ. ಆದರೆ, ಇಲ್ಲಿ ಪ್ರಶ್ನೆ ಏನಿದೆ ಎಂದರೆ, ಇವತ್ತು ನಮ್ಮ ಚರಿತ್ರೆ ಬಗ್ಗೆ, ಪೊಲಿಟಿಕಲ್ ಮೊರ್ಯಾಲಿಟಿ ಬಗ್ಗೆ ನಮಗೆ ಉಪದೇಶಗಳನ್ನು ಯಾರು ಮಾಡುತ್ತಿದ್ದಾರೆ, ಅವರುಗಳು ನಮಗೆ ಉಪದೇಶ ಮಾಡುವುದಕ್ಕಿಂತ ಮುಂಚೆ ಅವರ ಮುಖವನ್ನು ಸ್ವಲ್ಪ ಕನ್ನಡಿಯಲ್ಲಿ ನೋಡಿಕೊಳ್ಳಬೇಕು. ಆಗ ಅವರುಗಳು ತಮ್ಮ ಜೀವನದಲ್ಲಿ ಯಾವ ತರಹ ಪೊಲಿಟಿಕಲ್ ಮೊರ್ಯಾಲಿಟಿ ಇಟ್ಟುಕೊಂಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಆಗಲೇ ಮಾತನಾಡುತ್ತಾ ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮಂತ್ರಿಮಂಡಲದ ಎಲ್ಲಾ ಸದಸ್ಯರಿಗೂ ಕಂಠಪೂರ್ತಿ ಸ್ವಾತಂತ್ರ್ಯ ಕೊಟ್ಟಿದ್ದಾರೆ ಎಂದು ಹೇಳಿದರು. ಅದು ನಿಜ, ಸಂತೋಷ. ಅವರು ಶಾಸಕರಿಗೂ ಸ್ವಾತಂತ್ರ್ಯ ಕೊಟ್ಟಿದ್ದಾರೆ, ನಿಮ್ಮಂತಹ ವಿರೋಧ ಪಕ್ಷದ ಶಾಸಕರಿಗೂ ಸಹ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಅವರು ಕೇವಲ ನಮಗಷ್ಟೇ ಸ್ವಾತಂತ್ರ್ಯ ಕೊಟ್ಟಿಲ್ಲ. ತಾವು ಇದನ್ನು ಒಪ್ಪಿಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ...

ಶ್ರೀ ವಾಟಾಳ್ ನಾಗರಾಜ್: ಮಾನ್ಯ ದೇಶಪಾಂಡೆಯವರೆ, ತಾವು ರಾಜೀನಾಮೆ ಕೊಟ್ಟು ಪಕ್ಷದಿಂದ ಹೊರಗಡೆ ಬಂದು ಈ ಮಾತು ಹೇಳಿದ್ದರೆ, ಅದಕ್ಕೊಂದು ಬೆಲೆ ಇರುತ್ತಿತ್ತು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ಸರ್ಕಾರ ಬಿಟ್ಟು ಯಾರಾದರೂ ಹೊರಗಡೆ ಹೋದಾಗ ಅವರು ಮಾಡಬೇಕಾದ ಮೊದಲನೆಯ ಕರ್ತವ್ಯ ಏನೆಂದರೆ, ನಿಮ್ಮ ಸರ್ಕಾರಕ್ಕೆ ನನ್ನ ಬೆಂಬಲ ಇಲ್ಲ, ನಾನು ನಿಮ್ಮ ಪಕ್ಷದ ಗುರುತಿನಿಂದ ಗೆದ್ದಿದ್ದೇನೆ, ನಾನು ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತಿದ್ದೇನೆ ಎಂದು ಅವರು ಹೇಳಬೇಕು. ಆ ರೀತಿ ನೀವು ನಡೆದುಕೊಂಡು ಈ ರೀತಿ ಇಲ್ಲಿ ಮಾತನಾಡಿದ್ದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಮಗೆ ಮಾತನಾಡಲಿಕ್ಕೆ ಬೆಲೆ ಬರುತ್ತಿತ್ತು. ಅದುಬಿಟ್ಟು ಸುಮ್ಮನೆ ಏಕೆ ಇಲ್ಲಿ

ಮಾತನಾಡುತ್ತೀರಿ?

ಶ್ರೀ ಆರ್.ವಿ.ದೇಶ್‌ಪಾಂಡೆ: ನಾವು ಏಕೆ ಹಾಗೆ ಮಾಡಲಿಲ್ಲ ಎಂದರೆ there was a systematic attempt for destabilising the Government We did not want that.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಕಡೆ ಹೆಚ್ಚು ಜನ ಬಂದಿದ್ದರೆ ನೀವು ಸರ್ಕಾರ ಉರುಳಿಸುತ್ತಿದ್ದಿರಿ. ನಿಮ್ಮ ಜೊತೆ ಜನ ಬರಲಿಲ್ಲ. ಆದುದರಿಂದ ನಿಮಗೆ ಸರ್ಕಾರ ಉರುಳಿಸಲು ಆಗಲಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್ಕಾರ ಒಂದು ಉರುಳುವುದರಿಂದ ಅದು ಡೀಸ್ಟೆಬಿಲೈಸ್ ಆಗುವುದಿಲ್ಲ. ಸರ್ಕಾರ ಒಂದು ಉರುಳುವುದರಿಂದ ದೇಶ destabilise ಆಗುವುದಿಲ್ಲ. ಜನತೆಗೆ ದ್ರೋಹ ಬಗೆದರೆ ಅದು ಡೀಸ್ಟೆಬಿಲೈಸ್ ಆಗುತ್ತದೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹೊಟ್ಟೆ ಅವರಿಗೆ ಕಡಿಯುತ್ತಿದೆ, ಹಸಿವನ್ನು, ಇವರು ತಿನ್ನುತ್ತಿದ್ದಾರೆ, ಏಕೋ ಗೊತ್ತಾಗಲಿಲ್ಲ.

ಅಧ್ಯಕ್ಷರು: ಮಾನ್ಯ ದೇಶಪಾಂಡೆಯವರೇ, ಒಂದೆರಡು ನಿಮಿಷಗಳಲ್ಲಿ ತಮ್ಮ ಭಾಷಣ ಪೂರ್ತಿಗೊಳಿಸಿ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಗ್ಗೆ ಇವತ್ತು ಇಲ್ಲಿ ಪ್ರಸ್ತಾಪವಾಗಿದೆ. ದೇವನಹಳ್ಳಿಯಲ್ಲಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಬರಬೇಕು ಎಂದು ನಾನು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದು ನಿಜ. ಅದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದು ನಿಜ. ಆದರೆ ಇವತ್ತು ನನ್ನ ಮೇಲೆ ಒಂದು ಆಪಾದನೆ ಬಂದಿದೆ. ಮಾನ್ಯ ಕೇಂದ್ರ ನಾಗರೀಕ ವಿಮಾನಯಾನ ಸಚಿವರು ನಾನು ಟಾಟಾ ಏಜೆಂಟ್ ಎಂದೂ, ನಾನು 'ಮಸಾಲೆ' ತಿಂದಿದ್ದೇನೆ ಎಂದೂ ನನ್ನ ಮೇಲೆ ಆಪಾದನೆ ಮಾಡಿದ್ದಾರೆ. ಇದರ ಬಗ್ಗೆ ಇವತ್ತು ಕೇವಲ ನಾಡಿನ ಜನರಿಗೆ ಅಲ್ಲ, ರಾಷ್ಟ್ರದ ಜನರಿಗೆ ಸತ್ಯಾಂಶ ಗೊತ್ತಾಗಬೇಕಾಗಿದೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದ ಪತ್ರಗಳನ್ನೂ ಸದನದ ಮುಂದಿಡಬೇಕು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಒಂದು ವ್ಯವಹಾರದಲ್ಲಿ, ಈ ಪಕ್ಷಕ್ಕೆ ಅಲ್ಲ, ಮಾನ್ಯ ವಿರೋಧ ಪಕ್ಷಗಳಿಗೆ ಬಂದರೆ even an iota of doubt ಬಂದರೆ I am prepared to

retire from my public life. ನನಗೇನೂ ದೇವನಹಳ್ಳಿಯಲ್ಲಿ ಜಮೀನು ಇಲ್ಲ, ಬಿಡದಿಯಲ್ಲಿ ಜಮೀನು ಇಲ್ಲ, ರಾಮನಗರದಲ್ಲಿ ಇಲ್ಲ ಅಥವಾ ಮತ್ತೊಂದು ಕಡೆ ಇಲ್ಲ. ನನಗೂ ಅದಕ್ಕೂ ಸಂಬಂಧ ಇಲ್ಲ. ನನಗೇನಾದರೂ ಅಲ್ಲಿ ಜಮೀನಿದ್ದರೆ ಅಥವಾ ಬಾಂಬೆನಲ್ಲೇನಾದರೂ ಇದ್ದರೆ ಅದನ್ನು ನೀವು ತೆಗೆದುಕೊಳ್ಳಿ. ನನ್ನ ಆಸ್ತಿ ಎಷ್ಟಿದೆ? I have filed my Income-tax returns. ನಾನು, ನನ್ನ ಹೆಂಡತಿ, ನನ್ನ ಮಗ we have filed Income-tax returns; I have filed Lokayukta Returns. My assets have been declared. What more you want. ಇದರ ಹೊರತಾಗಿ ಒಂದು ಇಂಚು ಎಲ್ಲಾದರೂ ನನ್ನ ಹೆಸರಿನಲ್ಲಿ ಪ್ರಾಪರ್ಟಿ ಇದ್ದರೆ ಅದನ್ನು ಸರ್ಕಾರಕ್ಕೆ ಜಮಾ ಮಾಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ. How many of you have filed Income-tax returns.

ಅಧ್ಯಕ್ಷರು: ಮಾನ್ಯ ದೇಶಪಾಂಡೆಯವರೇ, Don't get excited; ನಾನೇನು ಹೇಳುತ್ತೇನೆ ಎಂದರೆ, ಎಲ್ಲರಿಗೂ ಲೆಕ್ಕ ಬರೆಯುವುದು ಸ್ವಲ್ಪ ಹೇಳಿಕೊಡಿ.

ಶ್ರೀ ಆರ್.ವಿ.ದೇಶಪಾಂಡೆ: ಗೌರವಾನ್ವಿತ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ.

(ಗೊಂದಲ)

ಶ್ರೀ ಕೆ.ಪ್ರತಾಪ್ ಚಂದ್ರ ಶೆಟ್ಟಿ: ಈ ರೀತಿ ಮಾತನಾಡುವುದು ಒಳ್ಳೆಯದಲ್ಲ. ನಮಗೂ ಮಾತನಾಡಲಿಕ್ಕೆ ಬರುತ್ತದೆ.

(ಗೊಂದಲ)

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ತಾವು ಒಂದು ನಿಮಿಷ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು: ಮಾನ್ಯ ರಾಜೇಂದ್ರನ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ರಾಜೇಂದ್ರನ್: ನನ್ನ ಒಂದು ಡೌಟನ್ನು ಅವರು ಕ್ಲಿಯರ್ ಮಾಡಬೇಕು. ಮಾನ್ಯ ಮಂತ್ರಿಗಳು ಜನತಾದಳದವರೋ ಆಥವಾ ಲೋಕಶಕ್ತಿಯವರೋ ಎಂಬ ಬಗ್ಗೆ ನಮಗೆ ಇನ್ನೂ ಕನ್‌ಫ್ಯೂಸ್ ಆಗಿದೆ. ಆದುದರಿಂದ ಅವರು ಆ ಬಗ್ಗೆ ನಮಗೆ ಕ್ಲಿಯರ್ ಮಾಡಬೇಕು.

ಅಧ್ಯಕ್ಷರು: ನಾನೇ ನಿಮಗೆ ಕ್ಲಿಯರ್ ಮಾಡುತ್ತಿದ್ದೇನೆ, ಅವರಿನ್ನೂ ಜನತಾದಳದಲ್ಲೇ ಇದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಮುಖ್ಯಮಂತ್ರಿಗಳು ನಮ್ಮ ಬಗ್ಗೆ ಕೆಲವು ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನರ್ಪಿಸುತ್ತೇನೆ. ಅವರು ನಮಗೆ ಪ್ರಾಮಾಣಿಕವಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದ್ದರು. ಅದಕ್ಕಾಗಿಯೂ ಸಹ ಅವರಿಗೆ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣನ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವ ಸಂಪುಟದ ನನ್ನ ಎಲ್ಲಾ ಸಹೋದ್ಯೋಗಿಗಳೂ ಸಹ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದಾರೆ. ನಮ್ಮಲ್ಲಿ ಯಾವ ಭಿನ್ನಾಭಿಪ್ರಾಯ ಇರಲಿಲ್ಲ. ನಮಗೆ ವಿರೋಧ ಪಕ್ಷಗಳ ಸಹಕಾರ ಕೂಡ ಸಿಕ್ಕಿತ್ತು. ಆದರೆ ದುರ್ದೈವದಿಂದ ಕೇಂದ್ರ ಸರ್ಕಾರದಲ್ಲಿದ್ದಂತಹ ನಮ್ಮ ಜನರಿಂದಲೇ ನಮಗೆ ಸಹಕಾರ ಸಿಗಲಿಲ್ಲ. ಇಷ್ಟು ಹೇಳಿ, ನಾನು ಇವತ್ತು ಈ ಆ್ಯಂಟಿ ಡಿಫೆಕ್ಷನ್‌ಗೆ ಹೆದರಿ I am not supporting the Government. ನಾನು ನಾಲ್ಕು ಬಾರಿ ಆರಿಸಿ ಬಂದಿದ್ದೇನೆ. I have got faith in my voters, my Electorate. ಆದರೆ ಮಾನ್ಯ ಜೆ.ಹೆಚ್.ಪಟೇಲರವರ ಬಗ್ಗೆ ನನಗೆ ಗೌರವ ಇದೆ. ಈ ಸರ್ಕಾರವನ್ನು ಅಸ್ಥಿರಗೊಳಿಸಬೇಕು, ಮಾನ್ಯ ಪಟೇಲರಿಗೆ ಕಷ್ಟ ಉಂಟು ಮಾಡಬೇಕೆನ್ನುವ ವಿಚಾರ ನನಗಿಲ್ಲ. ಇವತ್ತು 12-14 ಜನ ಎಂ.ಎಲ್.ಎ.ಗಳು ಒಂದಾದರೆ ಸರ್ಕಾರ ಉರುಳಿಸಬಹುದು. ಆದರೆ ಆ ಪ್ರಯತ್ನ ನಾವು ಮಾಡಿಲ್ಲ. ಇಲ್ಲಿ ಎಷ್ಟೋ ಜನ ಶಾಸಕರು ಕುಳಿತಿದ್ದಾರೆ. ಯಾರ ಮೇಲೂ ನಾವು ಪ್ರೆಷರ್ ಮಾಡಿಲ್ಲ. ನಾವು ಸರ್ಕಾರ ಉರುಳಿಸುವ ಬಗ್ಗೆ ಯಾವ ಶಾಸಕರ ಜೊತೆಗಾದರೂ ಫೋನ್ ಮಾಡಿದ್ದರೆ ಅಥವಾ ಮಾತನಾಡಿದ್ದರೆ ಅವರು ಇಲ್ಲಿ ಹೇಳಲಿ. ನಾನು ಇಷ್ಟು ಹೇಳಿ ನಾನು ಮತ್ತು ನನ್ನ ಸ್ನೇಹಿತರು ಮಾನ್ಯ ಪಟೇಲರವರಿಗೆ ನಮ್ಮ ಬೆಂಬಲವನ್ನು ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರ್ಕಾರಗಳು ವಿಶ್ವಾಸ ಮತ ಮಂಡಿಸತಕ್ಕದ್ದು, ಯಾವುದೇ ಪ್ರಜಾತಂತ್ರವನ್ನು ನಂಬಿಕೊಂಡಿರತಕ್ಕಂತಹ ದೇಶದಲ್ಲಿ ನಡೆದುಕೊಂಡು ಬಂದಿರತಕ್ಕಂತಹ ಒಂದು ಪ್ರಕ್ರಿಯೆ, ಮಾನ್ಯ ಜೆ.ಹೆಚ್.ಪಟೇಲ್‌ಅವರ ನೇತೃತ್ವದ ಸರ್ಕಾರ, ತಾನು ಶಾಸಕರ ವಿಶ್ವಾಸವನ್ನು ಕಳೆದುಕೊಂಡಿದೆ ಎಂದಾಗಲೇ ಅಥವಾ ಜನರ ವಿಶ್ವಾಸವನ್ನು ಕಳೆದುಕೊಂಡಿದೆ ಎಂದಾಗಲೇ ಈ ವಿಶ್ವಾಸ ಮತವನ್ನು ಸದನದ ಮುಂದೆ ತಂದಿಲ್ಲ. ಕಳೆದ ಕೆಲವು ದಿನಗಳಿಂದ ಲೋಕಸಭೆ ಚುನಾವಣೆ ಪ್ರಕ್ರಿಯೆ ಪ್ರಾರಂಭ ಆದಮೇಲೆ, ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯವರು ಹಾಗೂ ಲೋಕಶಕ್ತಿಯವರು ಎಲ್ಲರೂ ಕೂಡ ಸರ್ಕಾರ ರಾಜೀನಾಮೆ ಕೊಡಬೇಕು, ಚುನಾವಣೆ ಅನಿವಾರ್ಯವಾಗುತ್ತದೆ, ಮಧ್ಯಕಾಲೀನ ಚುನಾವಣೆಗಳನ್ನು ರಾಜ್ಯ ವಿಧಾನ ಸಭೆಗೆ

ನಡೆಸಬೇಕು ಎಂದು ಹೇಳಿಕೆಗಳನ್ನು ಜನರ ಮುಂದೆ ನೀಡತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಕೆಲವರು ಸರ್ಕಾರವನ್ನು ಅಸ್ಥಿರಗೊಳಿಸತಕ್ಕಂತಹ ಪ್ರಯತ್ನವನ್ನೂ ಕೂಡ ಮಾಡಿದ್ದಾರೆ. ಆದರೆ ಅವರು ಸಫಲರಾಗಿಲ್ಲ ಅನ್ನುವುದು ಬೇರೆ ವಿಚಾರ; ಸಫಲರಾಗುವುದಕ್ಕೆ ಸಾಧ್ಯವಿಲ್ಲ. ಒಂದು ಸರ್ಕಾರದ ಮುಖ್ಯಸ್ಥರಾಗಿ ಮುಖ್ಯಮಂತ್ರಿಗಳು ಜನತೆಗೆ ಉತ್ತರವನ್ನು ಹೇಳಬೇಕಾದುದು ಸರ್ಕಾರದ ಜವಾಬ್ದಾರಿ ಇದೆ. ಜನರ ಆಶೀರ್ವಾದ ಎಂದು ನಾವು ಇದನ್ನು ಕರೆದಿರುವುದು. ಜನರು ಆದೇಶ ಕೊಟ್ಟಾಗ ಮಾತ್ರ ನಾವು ಅಧಿಕಾರಕ್ಕೆ ಬರುವುದು, ಅಥವಾ ಅಧಿಕಾರ ಬಿಡತಕ್ಕಂಥದ್ದು ಆಗಬೇಕಾಗುತ್ತದೆ. ಕಳೆದ ಚುನಾವಣೆಯಲ್ಲಿ ರಾಜ್ಯದ ಜನತೆ ಜನತಾ ದಳ ಪಕ್ಷಕ್ಕೆ ಐದು ವರ್ಷ ಅಧಿಕಾರದಲ್ಲಿರಬೇಕೆಂಬ ತೀರ್ಪು ನಮಗೆ ಕೊಟ್ಟಿದ್ದಾರೆ, ನಾವು ಐದು ವರ್ಷಗಳ ಕಾಲ ಅಧಿಕಾರದಲ್ಲಿರುತ್ತೇವೆ. ಅದರ ಬಗ್ಗೆ ಯಾರೂ ಕೂಡ ಸಂಶಯ ಪಡಬೇಕಾದ ಅಗತ್ಯವಿಲ್ಲ. ಆದರೆ ಏನು ನಡೆದಿದೆ? ಇವತ್ತು ವಿಶೇಷ ಸನ್ನಿವೇಶ ನಿರ್ಮಾಣ ವಾಗಿದ್ದರಿಂದ ಕೆಲವರು ನಮ್ಮ ಸ್ನೇಹಿತರು, ಮೂರು ಜನ ಮಂತ್ರಿಗಳು ಮಂತ್ರಿ ಮಂಡಲವನ್ನು ಬಿಟ್ಟಿದ್ದರಿಂದ, ಕೆಲವು ಸ್ನೇಹಿತರು ಮೂರು ಜನ ಶಾಸಕರು ನಾವು ಜನತಾದಳ ಬಿಡುತ್ತೇವೆ, 'ನವ ನಿರ್ಮಾಣ ವೇದಿಕೆ' ಸೇರುತ್ತೇವೆಂದು ಹೇಳಿಕೆ ಕೊಟ್ಟಿದ್ದು ನೋಡಿದ್ದೇವೆ. ಈ ಬೆಳವಣಿಗೆ ಆದ ಮೇಲೆ ರಾಮಕೃಷ್ಣ ಹೆಗಡೆಯವರೂ ಕೂಡ ಹೇಳಿಕೆ ಕೊಟ್ಟಿದ್ದಾರೆ. ಕಾಂಗ್ರೆಸ್ ಪಕ್ಷದವರೂ ಹೇಳಿಕೆ ಕೊಟ್ಟಿದ್ದಾರೆ, ಭಾರತೀಯ ಜನತಾ ಪಕ್ಷದವರೂ ಕೂಡ ಹೇಳಿಕೆ ಕೊಟ್ಟಿದ್ದಾರೆ. ಈ ಸರ್ಕಾರ ನಾಳೆ ಬಿದ್ದು ಹೋಗುತ್ತದೆ, ನಾಡಿದ್ದು ಬಿದ್ದು ಹೋಗುತ್ತದೆ, ಈ ಸರ್ಕಾರದಲ್ಲಿ ಸ್ಥಿರತೆ ಇಲ್ಲ ಅನ್ನುವ ಮಾತು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಜಾ ತಂತ್ರದಲ್ಲಿ ಜನತೆ ನಮ್ಮ ಮಾಲೀಕರು, ಅವರ ಮನಸ್ಸಿನಲ್ಲಿ ಈ ತರಹದ ಗೊಂದಲ ನಿರ್ಮಾಣವಾಗಬಾರದು ಅನ್ನುವ ಕಾರಣಕ್ಕೋಸ್ಕರ ಈ ಗೊಂದಲವನ್ನು ನಿವಾರಣೆ ಮಾಡುವ ಕಾರಣಕ್ಕೋಸ್ಕರ ನಾವು ಈ ವಿಶ್ವಾಸ ಮತವನ್ನು ಯಾಚಿಸತಕ್ಕಂತಹ ನಿರ್ಣಯವನ್ನು ತಂದಿದ್ದೇವೆಯೇ ಹೊರತು ಈ ಮೂಲಕ ಸದನವನ್ನು ಉಪಯೋಗಿಸಿಕೊಂಡು ರಾಜಕೀಯ ಲಾಭವನ್ನು ಪಡೆಯಬೇಕಾದಂತಹ ಪರಿಸ್ಥಿತಿ ನಮ್ಮ ಸರ್ಕಾರಕ್ಕೆ, ನಮ್ಮ ಪಕ್ಷಕ್ಕೆ ಬಂದಿಲ್ಲ ಅನ್ನುವ ಮಾತನ್ನು ಅತ್ಯಂತ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಕಳೆದ ಮೂರು ವರ್ಷಗಳಲ್ಲಿ ನಡೆದ ಎಲ್ಲಾ ಚುನಾವಣೆಗಳನ್ನು ಲೋಕಸಭಾ ಚುನಾವಣೆ, ಜಿಲ್ಲಾ ಪಂಚಾಯಿತಿ ಚುನಾವಣೆ, ತಾಲ್ಲೂಕು ಪಂಚಾಯಿತಿ ಚುನಾವಣೆ ಮತ್ತು ಎ.ಪಿ.ಎಂ.ಸಿ. ಚುನಾವಣೆ, ನಂತರ ಮೇಲ್ಮನೆಗೆ ನಡೆದ ಚುನಾವಣೆ ಇರಬಹುದು ಮತ್ತು ಅನೇಕ ಉಪ ಚುನಾವಣೆಗಳು ನಡೆದಿರುವುದು ಇರಬಹುದು; ಎಲ್ಲಾ ಚುನಾವಣೆಗಳಲ್ಲೂ ಕೂಡ ನಾವು ಜಯ ಸಾಧಿಸಿದ್ದೇವೆ. ಜನ ನಮಗೆ ಆಶೀರ್ವಾದ ಕೊಟ್ಟಿದ್ದಾರೆ, ಮೂರು ವರ್ಷಗಳಲ್ಲಿ ನಾವು ಜನರ ವಿಶ್ವಾಸವನ್ನು ಉಳಿಸಿಕೊಂಡಿದ್ದೇವೆ ಅನ್ನುವ ಮಾತಿಗೆ ನಿದರ್ಶನವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಜನರ ವಿಶ್ವಾಸ ನಮ್ಮ ಮೇಲೆ ಬಹಳ ಸ್ಪಷ್ಟವಾಗಿದೆ. ನಾವು ಕಳೆದ ಮೂರು ವರ್ಷಗಳಲ್ಲಿ ಮಾಡಿರತಕ್ಕಂತಹ ಕಾರ್ಯಕ್ರಮಗಳಲ್ಲಿ ನಾವು ಯಾವ ಯಾವ

ವಲಯಗಳಿಗೆ ಆದ್ಯತೆ ಕೊಡಬೇಕು ಅನ್ನುವುದನ್ನು ಗುರುತಿಸಿಕೊಂಡು ಇವತ್ತು ಜನಪರವಾದ ಅಭಿವೃದ್ಧಿ ಕಾರ್ಯಗಳನ್ನು ನಾವು ಮಾಡಿದ್ದೇವೆ. ಅದನ್ನು ಜನರು ಮೆಚ್ಚಿದ್ದಾರೆ ಅನ್ನತಕ್ಕಂಥದ್ದು ಕೂಡ ಇದಕ್ಕೆ ಇನ್ನೊಂದು ನಿದರ್ಶನ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಖರ್ಗೆಯವರು ಮತ್ತು ಶ್ರೀ ಯಡಿಯೂರಪ್ಪನವರು ಈ ಪ್ರಸ್ತಾವವನ್ನು ವಿರೋಧ ಮಾಡಿದ್ದಾರೆ. ಇದನ್ನು ಏಕೆ ತರಬೇಕಾಗಿತ್ತು. ಇದರ ಅಗತ್ಯವಿರಲಿಲ್ಲ, ಈ ಸದನವನ್ನು ದುರುಪಯೋಗ ಮಾಡುವುದಕ್ಕೆ ತೆಗೆದುಕೊಂಡು ಬಂದಿದ್ದೀರಿ ಎಂದು ಹೇಳುತ್ತಾ, ಈ ಸರ್ಕಾರ ಏನೂ ಕೆಲಸ ಮಾಡಿಲ್ಲ, ನಿಷ್ಕ್ರಿಯವಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸೂಕ್ಷ್ಮವಾಗಿ ಕಳೆದ ಮೂರು ವರ್ಷಗಳಲ್ಲಿ ನಾವು ಮಾಡಿರತಕ್ಕಂತಹ ಅಭಿವೃದ್ಧಿ ಕೆಲಸಗಳನ್ನು ಅಂಕಿ ಸಂಖ್ಯೆಗಳ ಮೂಲಕ ಅವರು ಹೇಳಿದ್ದಾರೆ. ನಾನು ಅದನ್ನು ಬಹಳ ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಜೊತೆಯಲ್ಲಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರು, ಶ್ರೀಮಾನ್ ಶ್ರೀರಾಮರೆಡ್ಡಿಯವರು, ರೈತ ಸಂಘದ ಶ್ರೀ ಪುಟ್ಟಣ್ಣಯ್ಯನವರು, ಶ್ರೀ ಮುನಿಯಪ್ಪ ನವರು ಮತ್ತಿತರೆ ಸದಸ್ಯರು, ಅವರೆಲ್ಲರೂ ಕೂಡ ಈ ಸರ್ಕಾರ ಸ್ಥಿರವಾಗಿ ಇರಬೇಕು, ಜನ ತಂತ್ರದ ವ್ಯವಸ್ಥೆಯಲ್ಲಿ ಮತ್ತೆ ಮತ್ತೆ ಸರ್ಕಾರ ಅಸ್ಥಿರಗೊಳ್ಳಬಾರದು, ಜನರ ವಿಶ್ವಾಸವನ್ನು ನಾವು ಉಳಿಸಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ಐದು ವರ್ಷಗಳ ಕಾಲ ಜನತಾ ದಳ ಸರ್ಕಾರ ಶ್ರೀ ಜೆ.ಹೆಚ್.ಪಟೇಲ್ ನೇತೃತ್ವದ ಸರ್ಕಾರ ಇರಬೇಕೆಂಬ ಮಾತನ್ನು ಹೇಳಿದ್ದಾರೆ. ನಾನು ಅವರಿಗೆ ನನ್ನ ಪಕ್ಷದ ಮತ್ತು ಸರ್ಕಾರದ ವತಿಯಿಂದ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅವರೂ ನಿಮ್ಮ ಜೊತೆಯಲ್ಲಿ ಒಟ್ಟಿಗೆ ಇದ್ದು ಸರ್ಕಾರ ನಡೆಸಿದರು.

ಶ್ರೀ ಸಿದ್ಧರಾಮಯ್ಯ: ಅಲ್ಲಿ ಇದ್ದೇ ಅವರು ನಮಗೆ ಬೆಂಬಲ ಕೊಡುತ್ತಾರೆ. ಮಾನ್ಯ ಅಧ್ಯಕ್ಷರೆ, ನಾವು ಈ ಎಲ್ಲಾ ವಿಚಾರಗಳನ್ನು ಸದನದಲ್ಲಿ ಇಡುವುದಕ್ಕೆ ಹೋಗುವುದಿಲ್ಲ. ನಾವು ಈಗಾಗಲೇ ಹಿಂದೆ ಮೂರು ಆಯವ್ಯಯ ಮಂಡಿಸತಕ್ಕಂತಹ ಸಂದರ್ಭದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ, ನಾವು ತೆಗೆದುಕೊಂಡ ಕಾರ್ಯಕ್ರಮಗಳ ಬಗ್ಗೆ ಎಲ್ಲಾ ವಿಷಯಗಳನ್ನೂ ಕೂಡ ಈ ಸದನದ ಮುಂದೆ ಪ್ರಸ್ತಾಪ ಮಾಡಿದ್ದೇವೆ. ನಾವು ಅಧಿಕಾರ ವಹಿಸಿಕೊಂಡಾಗ ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿತ್ತು, ಇವತ್ತು ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂಬ ಮಾತನ್ನು ನಾನು ಈ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಇವತ್ತು ಅತ್ಯಂತ ಹೆಮ್ಮೆಯಿಂದ ಹೇಳುವುದಕ್ಕೆ ಬಯಸುತ್ತೇನೆ, ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಆವತ್ತು ನಾವು ಅಧಿಕಾರ ತೆಗೆದುಕೊಂಡಂತಹ ಕಾಲಕ್ಕೂ ಆವತ್ತು ಇದ್ದಂತಹ ಪರಿಸ್ಥಿತಿಗೂ ಹೋಲಿಕೆ ಮಾಡಿದರೆ ಇವತ್ತು ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ ಅನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದರೂ ಕೂಡ ನೀವು ತಾಲ್ಲೂಕು ಪಂಚಾಯಿತಿಗಳ ಸ್ಟ್ಯಾಂಪ್ ಡ್ಯೂಟಿ ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಅದನ್ನು ಬಿಡುಗಡೆ ಮಾಡುವುದಕ್ಕೆ ಒಂದು ವರ್ಷ ಬೇಕೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಹಾರಾಣಿ ಕಾಲೇಜಿನಲ್ಲಿ ಎಸ್.ಸಿ. ಎಸ್.ಟಿ. ಹೆಣ್ಣು ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಟ್ಟಿಲ್ಲ ಸರ್ಕಾರ ಆ ಕಾಲೇಜಿನಲ್ಲಿ ಊಟ ನಿಲ್ಲಿಸಿದೆ, ಶಿವಮೊಗ್ಗದಲ್ಲಿ ಮೂರು ಕೋಟಿ ರೂಪಾಯಿ ಬಿಡುಗಡೆ ಮಾಡದೇ ಕಂಟ್ರ್ಯಾಕ್ಟರ್ ಒಂದು ತಿಂಗಳಿನಿಂದ ಬಾಗಿಲು ಹಾಕಿದ್ದಾರೆ. ಅಲ್ಲಿ ಹೇಳುವವರು, ಕೇಳುವವರೂ ಯಾರೂ ಇಲ್ಲ.

ಶ್ರೀ ಸಿದ್ಧರಾಮಯ್ಯ: ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತು ನಿರ್ವಹಣೆ ಬಗ್ಗೆ ವಿಶ್ವ ಬ್ಯಾಂಕ್ ತಂಡದವರು ಇಲ್ಲಿ ಸರ್ವೆ ಮಾಡಿದ್ದಾರೆ, ಅವರು ವರದಿ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದ ಆರ್ಥಿಕ ನಿರ್ವಹಣೆ ಅತ್ಯಂತ ಉತ್ತಮವಾಗಿದೆ ಎನ್ನುವ ರಿಪೋರ್ಟ್ ಅನ್ನು ಅವರು ಕೊಟ್ಟಿದ್ದಾರೆ. ಇದು ನಾನು ಮಾಡಿದ್ದು ಅಲ್ಲ. ಶ್ರೀಮಾನ್ ಯಡಿಯೂರಪ್ಪನವರೇ, ಅನೇಕ ಸಾರಿ ನಾವು ಜನರ ಮುಂದೆ ಹೋಗಿದ್ದೇವೆ, ಬಂದಿದ್ದೇವೆ, ನಿಮಗೆ ಏನು ಗತಿ ಆಗಿದೆ, ಅನ್ನುವುದನ್ನು ಜನ ನೋಡಿದ್ದಾರೆ. ಇನ್ನೂ ಬಹಳ ವರ್ಷ ನಾವು ರಾಜಕಾರಣದಲ್ಲಿ ಇರುತ್ತೇವೆ, ಇನ್ನೂ ಹೋಗೋಣ. ಇವತ್ತು ಮೂರು-ನಾಲ್ಕು ದಿನಗಳನ್ನು ಬಿಟ್ಟರೆ, ಮೂರು ವರ್ಷಗಳಲ್ಲಿ ಒಮ್ಮೆ ಕೂಡ ನಾವು ಓವರ್ ಡ್ರಾಫ್ಟ್ ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ನಾವು ಕೆಲಸ ಮಾಡಿದ್ದೇವೆ, ನೀವು ಕೆಲಸ ಮಾಡಿದ್ದೀರಿ; ನೀವು ಎಷ್ಟು ಮಾಡಿದ್ದೀರಿ, ನಾವು ಎಷ್ಟು ಮಾಡಿದ್ದೇವೆಂದು ಗೊತ್ತಾಗುತ್ತದೆ. ನೀರಾವರಿ ಬಗ್ಗೆ ಬಹಳ ಮಾತನಾಡುತ್ತಾರೆ, ಹೈದರಾಬಾದ್ ಕರ್ನಾಟಕದ ಬಗ್ಗೆ ಬಹಳ ಅನ್ಯಾಯವಾಗಿದೆ ಅನ್ನುವ ಮಾತು ಅವರು ಹೇಳುತ್ತಾರೆ. ನೀರಾವರಿಗೆ ಹಣ ಖರ್ಚು ಮಾಡಿಲ್ಲವೆಂದು ಹೇಳುತ್ತಾರೆ. ಇವರು ಮೂರು ವರ್ಷಗಳಲ್ಲಿ ಎಷ್ಟು ಖರ್ಚು ಮಾಡಿದ್ದರು, ನಾವು ಎಷ್ಟು ಖರ್ಚು ಮಾಡಿದ್ದೇವೆ ಎನ್ನುವ ಒಂದು ಅಂಕಿ ಅಂಶವನ್ನು ನಿಮಗೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು 1992-93, 1993-94 ಮತ್ತು 1994-95 ಈ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ಹಣ 1,455 ಕೋಟಿ ರೂಪಾಯಿಗಳು. ನಾವು ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೆ ಅದೇ ಮೂರು ವರ್ಷಗಳಲ್ಲಿ 1995-96, 1996-97 ಈ ವರ್ಷಗಳನ್ನು ಸೇರಿಸಿಕೊಂಡು 3,090 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮಾನ್ಯ ಖರ್ಗೆಯವರು ಹೇಳುತ್ತಾರೆ, ಇನ್‌ಫ್ಲೇಷನ್ ಜಾಸ್ತಿಯಾಗಿದೆ ಎಂದು. ಇನ್‌ಫ್ಲೇಷನ್ 10 ಪರ್ಸೆಂಟ್ ಸೇರಿಸೋಣ. 10 ಪರ್ಸೆಂಟ್ ಇನ್‌ಫ್ಲೇಷನ್ ಸೇರಿಸಿದರೂ ಕೂಡ 1,400 ಕೋಟಿಗೆ 50 ಕೋಟಿ ಹೆಚ್ಚಾಗಬಹುದು. ಒಂದೂವರೆ ಸಾವಿರ ಕೋಟಿ ಆಗಬಹುದು, ಇವತ್ತು 3,090 ಕೋಟಿ ರೂಪಾಯಿ ಹಣ ನಾವು ಖರ್ಚು ಮಾಡಿರತಕ್ಕಂಥದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕಳೆದ ಮೂರು ವರ್ಷದ್ದು ಸೇರಿಸಿಕೊಂಡು 10 ವರ್ಷಗಳದ್ದು ಕೊಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ: ಅಪ್ಪರ್‌ಕೃಷ್ಣ ನಿನ್ನೆ ಮೊನ್ನೆ ಆದುದು ಅಲ್ಲ. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು 1965-66ನೇ ಇಸವಿಯಲ್ಲಿ ಅಡಿಗಲ್ಲು ಹಾಕಿದ್ದು. 1994-95ರವರೆಗೆ ಖರ್ಚು ಮಾಡಿದ್ದು, 1,300 ಕೋಟಿ ರೂಪಾಯಿಗಳು ಮಾತ್ರ. ಇವತ್ತು 2,000 ಇಸವಿ ಒಳಗೆ ಕೃಷ್ಣ ನೀರನ್ನು ಈ ರಾಜ್ಯದ ಜನತೆಗೆ ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು ಅನ್ನುವ ಕಾರಣಕ್ಕಾಗಿ ಇವತ್ತು ಮೂರು ವರ್ಷಗಳಲ್ಲಿ ಅಪ್ಪರ್ ಕೃಷ್ಣ ಒಂದಕ್ಕೆ 2,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಾವು ರಾಜ್ಯದ ಜನತೆಗೆ ಅನ್ಯಾಯಮಾಡುತ್ತೇವೆಯೇ? ನೀರಾವರಿಗೆ ಹಣ ಬಿಡುಗಡೆ ಮಾಡಿಲ್ಲ, ಕೆಲಸ ಮಾಡಿಲ್ಲವೆಂದರೆ ಇವರು ಹೇಳತಕ್ಕಂತಹ ಮಾತನ್ನು ಜನ ನಂಬುತ್ತಾರಾ? ಇವರು ಈ ಮಾತನ್ನು ಹೇಳುವುದಕ್ಕೆ ಯಾವ ನೈತಿಕ ಹಕ್ಕು ಇದೆ ಎಂದು ಜನ ತೀರ್ಮಾನ ಮಾಡುತ್ತಾರೆ.

4.20 ಪಿ.ಎಂ.

ಮಾನ್ಯ ಅಧ್ಯಕ್ಷರೇ, ನಾವು ಏನು ಸುಳ್ಳು ಭರವಸೆ ಕೊಟ್ಟಿದ್ದೇವೆ? ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿದ ಪ್ರಕಾರ ಮಾಡಿಲ್ಲವೆ? ಇವತ್ತು 62 ಲಕ್ಷ ಹಸಿರು ಕಾರ್ಡುಗಳ ಮೂಲಕ ರೂ. 3-20 ಪೈಸೆಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುತ್ತಾ ಇಲ್ಲವೇ? 120 ಕೋಟಿ ರೂಪಾಯಿಗಿಂತ ಹೆಚ್ಚಾಗಿ ಇವತ್ತು ಸಬ್ಸಿಡಿಯನ್ನು ಕೊಡತಕ್ಕಂತಹ ಕೆಲಸವನ್ನು ಮಾಡಿಲ್ಲವೆ? ಶ್ರೀ ದೇವೇಗೌಡರು ದೇಶದ ರೈತ ಪ್ರಧಾನಿಯಾದ ಮೇಲೆ 4 ರೂಪಾಯಿಗೆ ಒಂದು ಕೆ.ಜಿ.ಅಕ್ಕಿಯನ್ನು ಕೊಡುವಂತಹ ಯೋಜನೆಯನ್ನು ಮಾಡಿಲ್ಲವೆ?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ರಿಪೋರ್ಟ್ ತಪ್ಪಾಗಬಾರದು ಎಂದು ಹೇಳುತ್ತಿದ್ದೇನೆ. ಇಲ್ಲಿ ಅಂಕಿ-ಸಂಖ್ಯೆಗಳ ಪುಸ್ತಕ ಇದೆ.

ಶ್ರೀ ಸಿದ್ಧರಾಮಯ್ಯ: ನೀವು ಪುಸ್ತಕ ತಂದು ಹೇಳಿಬಿಟ್ಟರೆ ನಾವು ಅದನ್ನೇ ಒಪ್ಪಿಕೊಳ್ಳಬೇಕೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಯೋಜನಾ ಇಲಾಖೆಯಿಂದ ಬಂದ ಅಂಕಿ-ಸಂಖ್ಯೆಗಳು, ನಮ್ಮ ಮನೆಯಲ್ಲಿ ಹುಟ್ಟಿಸಿದ್ದು ಅಲ್ಲ. ಅಪ್ಪರ್ ಕೃಷ್ಣಾ ಯೋಜನೆಯಲ್ಲಿ 1991-92ನೇ ಇಸವಿಯಲ್ಲಿ 354 ಕೋಟಿ ರೂಪಾಯಿ ಖರ್ಚುಮಾಡಿ 42 ಸಾವಿರ ಹೆಕ್ಟೇರ್ ಇರಿಗೇಟ್ ಮಾಡಿದೆ, 1992-93ರಲ್ಲಿ 480 ಕೋಟಿ ರೂಪಾಯಿ

ಖರ್ಚುಮಾಡಿ 44 ಸಾವಿರ ಹೆಕ್ಟೇರ್ ಇರಿಗೇಟ್ ಮಾಡಲಾಗಿದೆ, 1993-94ರಲ್ಲಿ 654 ಕೋಟಿ ರೂಪಾಯಿ ಖರ್ಚುಮಾಡಿ 70 ಸಾವಿರ ಹೆಕ್ಟೆರ್ ಇರಿಗೇಟ್ ಮಾಡಿದೆ, 1994-95ರಲ್ಲಿ ಪುನಃ 684 ಕೋಟಿ ರೂಪಾಯಿ ಖರ್ಚು ಮಾಡಿ 24ಸಾವಿರ ಹೆಕ್ಟೆರ್ ಇರಿಗೇಟ್ ಮಾಡಿದ್ದು, ಇವರು 1995-96, 1996-97ರಲ್ಲಿ 847 ಕೋಟಿ ರೂಪಾಯಿ, 1304 ಕೋಟಿ ರೂಪಾಯಿ ಇದು ಟಾರ್‌ಗೆಟ್ ಅಚೀವ್‌ಮೆಂಟ್ ಇವರ ಇಲಾಖೆಯವರು ಕೊಟ್ಟಿದ್ದು, 49ಸಾವಿರ ಹೆಕ್ಟೇರ್, ವೆಚ್ಚದಲ್ಲಿ 847ಕೋಟಿ ರೂಪಾಯಿ 1,300 ಕೋಟಿಯಲ್ಲಿ 36ಸಾವಿರ ಹೆಕ್ಟೇರ್ಸ್. This is their Target, Physical achievement and they have done it. ಕಂಟ್ರಾಕ್ಟ್‌ದಾರರಿಗೆ 10 ರೂಪಾಯಿ ಇದ್ದಲ್ಲಿ 20ರೂಪಾಯಿ ಕೊಡುವುದಕ್ಕೆ ಅಲ್ಲ ಇದು 40ಕೋಟಿ ರೂಪಾಯಿ ಬಜೆಟ್ ಪ್ರಾವಿಜನ್ ಮಾಡಿ 110 ಕೋಟಿ ರೂಪಾಯಿ ಖರ್ಚುಮಾಡುತ್ತೀರಿ.

ಶ್ರೀ ಕೆ.ಎಸ್.ನಾಗೇಗೌಡ (ಭಾರೀ ಹಾಗು ಮಧ್ಯಮ ನೀರಾವರಿ ಮಂತ್ರಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಧರ್ಮ್‌ಸಿಂಗ್‌ರವರು ಈಗ ಇಲ್ಲಿ ಇಲ್ಲ, ಮಾನ್ಯ ಖರ್ಗೆಯವರು ಇದ್ದಾರೆ, ಅವರು ತಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಲಿ, 1975-76ರಲ್ಲಿ ದಿವಂಗತ ಶ್ರೀ ದೇವರಾಜ್ ಅರಸರು ಮುಖ್ಯಮಂತ್ರಿಗಳಾಗಿದ್ದಾಗ ಇವರು ಮಂತ್ರಿಗಳಾಗಿದ್ದರು, ನಾಲ್ಕು ಪ್ರಾಜೆಕ್ಟ್‌ಗಳನ್ನು ಇವರು ತಮ್ಮ ಜಿಲ್ಲೆಯಲ್ಲಿ ತೆಗೆದುಕೊಂಡರು. ಮಾನ್ಯ ಖರ್ಗೆಯವರು 72ರಿಂದ ಮಂತ್ರಿಗಳಾಗುತ್ತಾ ಬಂದಿದ್ದಾರೆ, ಶ್ರೀ ವೀರಪ್ಪ ಮೊಯ್ಲಿಯವರು ಸರ್ಕಾರದಲ್ಲಿಯೂ ಮಂತ್ರಿಗಳಾಗಿದ್ದರು, ಶ್ರೀ ಧರ್ಮಸಿಂಗ್‌ರವರು ಮಂತ್ರಿಗಳಾಗಿದ್ದರು, ಮಾನ್ಯಶ್ರೀ ವೀರೇಂದ್ರ ಪಾಟೀಲರು ಮಂತ್ರಿಗಳಾಗಿದ್ದರು, ಇವರ ಯಾರ ಕಾಲದಲ್ಲಿಯೂ ಬೆಣ್ಣೆತೊರೆ ಯೋಜನೆ ಮುಗಿಸಿರಲಿಲ್ಲ, ಲೋವರ್ ಮುಲ್ಲಾ, ಅಪ್ಪರ್ ಮುಲ್ಲಾ ಮುಗಿಸಿರಲಿಲ್ಲ, ಪುಳಕಿ ಮುಗಿಸಿರಲಿಲ್ಲ, ಅಮರ್ಜಾ ಪ್ರಾರಂಭವೇ ಮಾಡಿರಲಿಲ್ಲ. ಒಂದು ಹೌಸ್ ಕಮಿಟಿ ಮಾಡಿ ಯಾರ ಕಾಲದಲ್ಲಿ ಎಷ್ಟು ಫಿಜಿಕಲ್ ಟಾರ್‌ಗೆಟ್ ಆಗಿವೆ ಎಂದು ನಾವು ಪ್ರೂವ್ ಮಾಡುತ್ತೇವೆ. ಇಲ್ಲದಿದ್ದರೆ ಅವರು ರಾಜಕೀಯದಿಂದ ನಿವೃತ್ತಿ ಹೊಂದಬೇಕು. ಗುಲ್ಬರ್ಗಾ, ಬೀದರ್ ರಾಯಚೂರ ಜಿಲ್ಲೆಗೆ ಅನ್ಯಾಯ ಮಾಡಿದವರು ಖರ್ಗೆ, ಧರ್ಮಸಿಂಗ್‌ರೇ ವಿನಃ ಬೇರೆ ಯಾರೂ ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಂಕಿ-ಸಂಖ್ಯೆಗಳು ಇದ್ದ ಮೇಲೆ ಮೈ ಪರಚಿಕೊಂಡರೆ ಏನೂ ಸಾಧಿಸಿದ ಹಾಗೆ ಆಗುವುದಿಲ್ಲ. 40 ಕೋಟಿ ರೂಪಾಯಿ ಖರ್ಚು ಮಾಡಿ 100 ಕೋಟಿ ರೂಪಾಯಿ ಬಿಲ್ ಕೊಟ್ಟರೆ ಅದು ಕೆಲಸ ಮಾಡಿದ ಹಾಗೆ ಅಲ್ಲ. ಸರಿಯಾದ ಅಂಕಿ-ಸಂಖ್ಯೆಯನ್ನು ಕೊಡಿ.

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ವಿಚಾರದಲ್ಲಿ ಹೇಳಬೇಕಾದರೆ, ಇವರು ಅಧಿಕಾರ ಬಿಟ್ಟಾಗ ಆಗ ಶ್ರೀ ವೀರಪ್ಪಮೊಯ್ಲಿಯವರು

ಮುಖ್ಯಮಂತ್ರಿಗಳಾಗಿದ್ದರು, ಎಸ್.ಎಂ.ಕೃಷ್ಣರವರು ನೀರಾವರಿ ಮಂತ್ರಿಗಳಾಗಿದ್ದರು ಆ ಕಾಲದಲ್ಲಿ 1994ರಲ್ಲಿ ಆಲಮಟ್ಟಿಯನ್ನು ಇವರು ಯಾವ ಮಟ್ಟದಲ್ಲಿ ಇಟ್ಟಿದ್ದರು, ಇವತ್ತು ಅದು ಯಾವ ಮಟ್ಟದಲ್ಲಿ ಇದೆ ಎಂದು ಶ್ರೀ ಯಡಿಯೂರಪ್ಪನವರು ನೋಡಿದ್ದಾರೆ ಅವರೇ ಹೇಳಬೇಕು. ನಾವು ಅಧಿಕಾರದಲ್ಲಿ 540 ದಿವಸಗಳಿದ್ದರೂ 1999ನೇ ಜೂನ್‌ನಲ್ಲಿ ಫುಲ್ ಸ್ಟೋರೇಜ್ ಮಾಡುತ್ತಾ ಇರುವಂತಹ ಸರ್ಕಾರವೆಂದರೆ ಜನತಾದಳ ಸರ್ಕಾರ. ಆಲಮಟ್ಟಿ ಡ್ಯಾಂ ವಿಚಾರದಲ್ಲಿ ಯಾವ ಕೋರ್ಟಿಗೆ ಮತ್ತು ಯಾವ ರಾಜಕೀಯ ಒತ್ತಡಕ್ಕೆ ನಾವು ಬೆಚ್ಚದೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಗೇಟ್ ನಿರ್ಮಾಣ ಕಾರ್ಯ ಮುಗಿಸಿದ್ದೇವೆ, ಕಾಂಕ್ರಿಟ್ ಮುಗಿಸಿದ್ದೇವೆ, ಕ್ರೆಸ್ಟ್‌ಗೇಟ್ ಮುಗಿಸಿದ್ದೇವೆ. 1999 ಮಾರ್ಚ್‌ವರೆಗೆ ನೀರು ನಿಲ್ಲಿಸಿ 2,000 ವರ್ಷಕ್ಕೆ ಬಿಜಾಪುರಕ್ಕೆ ನಾವು ನೀರು ಕೊಡುತ್ತೇವೆ. ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಸುಮಾರು 144 ಹಳ್ಳಿಗಳು ಮುಳುಗಡೆಯಾಗಿವೆ, ಕಾಂಗ್ರೆಸ್ ಸರ್ಕಾರ ಇದ್ದಾಗ ಅವಕ್ಕೆ ಸುಮಾರು 5-6 ವರ್ಷಗಳಿಂದ ಪುನರ್ ವ್ಯವಸ್ಥೆಯಾಗಿರಲಿಲ್ಲ. ನಾನು ಇಲ್ಲಿ ಇರುವ ಆರು ಜನ ಕಾಂಗ್ರೆಸ್ ಶಾಸಕರನ್ನು ಕೇಳುತ್ತೇನೆ, 200 ಕೋಟಿ ರೂಪಾಯಿ ಖರ್ಚು ಮಾಡಿ ಪುನರ್ ವ್ಯವಸ್ಥೆ ಕಲ್ಪಿಸಿದ್ದೇವೆ ಅದಕ್ಕೆ ಕಾಂಗ್ರೆಸ್ ಶಾಸಕರು ಮುಖ್ಯಮಂತ್ರಿಗಳಿಗೆ ಹಾರವನ್ನು ಹಾಕಿ ಅಭಿನಂದಿಸಿದ್ದಾರೆ. ಅದೆಲ್ಲಾ ಈಗ ನೆನಪು ಹಾರಿ ಹೋಯಿತೆ? ಇಲ್ಲಿ ಸರ್‌ನಾಯಕರ ಇದ್ದಾರೆ. ಅವರೇ ಹೇಳಬೇಕು, ಬಾಗಲಕೋಟೆಯಲ್ಲಿ ಸುಮಾರು 3ವರ್ಷದಿಂದ ಮಾಡಿರತಕ್ಕಂತಹ ಸತ್ಯಾಗ್ರಹವನ್ನು ನಿಲ್ಲಿಸಿ ಸೈಟ್ ತೆಗೆದುಕೊಂಡು ಸುಮಾರು 3ಕೋಟಿ ರೂಪಾಯಿ ಬಾಗಲಕೋಟೆಗೆ ಖರ್ಚು ಮಾಡುತ್ತಾ ಇದ್ದೇವೆ. 144 ಹಳ್ಳಿಗಳ ಪೈಕಿ 45 ಹಳ್ಳಿಗಳಿಗೆ ಪುನರ್ ವ್ಯವಸ್ಥೆ ಮಾಡುತ್ತಿದ್ದೇವೆ. ಮಾನ್ಯ ಖರ್ಗೆಯವರು ಹೇಳಬೇಕು, ಜೇವರ್ಗಿ ಎಲ್ಲಿ ಇದೆ, ರಾಯಚೂರಿನಲ್ಲಿ, ಅದು ಧರ್ಮಸಿಂಗ್‌ರವರ ವಿಧಾನಸಭಾ ಕ್ಷೇತ್ರ, ಇದು ಎನ್.ಆರ್.ಬ್ರ್ಯಾಂಚ್‌ದು ಇವತ್ತು ನಾವು 70 ಕಿ.ಮೀ. ಕಾಮಗಾರಿ ಮುಗಿಸಿದ್ದೇವೆ, ನೀವು ಏಕೆ ಮಾಡಲಿಲ್ಲ? ನಾನು ನಿಮ್ಮ ಜೊತೆಯಲ್ಲಿ ಇದ್ದೆ ಏಕೆ ಮಾಡಲಿಲ್ಲ? ಆತ್ಮವನ್ನು ಮುಟ್ಟಿಕೊಂಡು ನಿಜವನ್ನು ಹೇಳಬೇಕು ನೀವು. ನೀರಾವರಿ ಇಲಾಖೆಗೆ ಕಳೆದ 3 ವರ್ಷದಲ್ಲಿ 3500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ ಸರ್ಕಾರ 50ವರ್ಷದಲ್ಲಿ ಯಾವುದಾದರೂ ಇದ್ದರೆ ಅದು ಜನತಾದಳ ಸರ್ಕಾರ ಮಾತ್ರ. ಇದು ತಪ್ಪು ಎಂದರೆ ನಾನು ಸಭೆಯಲ್ಲಿ ಕ್ಷಮೆಯನ್ನು ಕೇಳುತ್ತೇನೆ. ನೀರಾವರಿ ಇಲಾಖೆಯ ಬಗ್ಗೆ ಮಾತನಾಡಲು ನಿಮಗೆ ಯಾವ ನೈತಿಕ ಹಕ್ಕು ಇಲ್ಲ.

ಅಧ್ಯಕ್ಷರು: ನೋಡಿ ಎಷ್ಟೊಂದು ವಿಚಾರಗಳು ಇವೆ, ನೀವು ಸಭೆಯನ್ನು ಏಕೆ ಕರೆಯುತ್ತೀರಿ ಎಂದು ಕೇಳುತ್ತಿದ್ದೀರಿ.

ಶ್ರೀ ಎಂ.ವೀರಪ್ಪ ಮೊಯ್ಲಿ: ಮಾನ್ಯ ಅಧ್ಯಕ್ಷರೇ, ಅಂಕಿ-ಸಂಖ್ಯೆಗಳ ವಿಚಾರದಲ್ಲಿ ಇವರು ಮಾತನಾಡುತ್ತಾ ಹೋದರೆ ನಾವು ಎದ್ದು ಎಲ್ಲವನ್ನೂ ಹೇಳಬೇಕಾಗುತ್ತದೆ. ಇದನ್ನು ಇಲ್ಲಿಗೆ ಮುಗಿಸಬೇಕು ಇದು ಚರ್ಚೆಯ ವಸ್ತು ಆಗಬಾರದು. ಅದು

ಏಕಮುಖವಾಗಿ ಚರ್ಚೆ ಆಗುವುದಾದರೆ ನಾವು ಕೂಡ ಎದ್ದು ನಿಂತು ಹೇಳಬೇಕಾಗುತ್ತದೆ.

ಅಧ್ಯಕ್ಷರು: ನೀವು ಹೇಳುವುದು ಅಂಕಿ-ಸಂಖ್ಯೆಗಳ ವಿಚಾರ ಚರ್ಚೆ ಮಾಡುತ್ತಾ ಹೋದರೆ ನಾವು ಅದಕ್ಕೆ ವಿರೋಧವಾಗಿ ಮಾತನಾಡಬೇಕಾಗುತ್ತದೆ. ಅದಕ್ಕಾಗಿ ಅದನ್ನು ಚರ್ಚೆಗೆ ಅವಕಾಶ ಮಾಡಿಕೊಡುವುದು ಬೇಡ ಎಂದು ಹೇಳುತ್ತಿದ್ದೀರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಯಾವ ಹೊಸ ಯೋಜನೆಗಳ ಬಗ್ಗೆ ಮಾತನಾಡುತ್ತಾ ಇಲ್ಲ. ಮಾನ್ಯ ಯಡಿಯೂರಪ್ಪನವರು ಮತ್ತು ಖರ್ಗೆಯವರು ಮಾತನಾಡುತ್ತಾ ಹೇಳಿದ್ದಾರೆ, ನಾವು ನೀರಾವರಿಗೆ ಏನೂ ಹಣ ಖರ್ಚು ಮಾಡಿಲ್ಲ ಎಂದು. ಅದರ ಬಗ್ಗೆ ನಾನು, ನಮ್ಮ ಸರ್ಕಾರ ಎಷ್ಟು ಖರ್ಚು ಮಾಡಿದೆ, ಎಷ್ಟು ಕೆಲಸಕಾರ್ಯವನ್ನು ಮಾಡಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ನಾಗೇಗೌಡರು ನೀವು ಹೇಳೊದನ್ನೆಲ್ಲ ಹೇಳಿಬಿಟ್ಟಿದ್ದೀರಿ. ಇನ್ನು ಅವರು ಹೇಳೋದನ್ನು ಹೇಳಿ ಮುಗಿಸಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಿ.ಬಿ.ಐ. ಎನ್‌ಕ್ವೈರಿ ಮಾಡಿಸಿ ಎಂದು ನಾವು ಹೇಳಿದ್ದೇವೆ.

ಶ್ರೀ ಸಿದ್ಧರಾಮಯ್ಯ: ಅಗತ್ಯ ಬಿದ್ದರೆ ಎನ್‌ಕ್ವೈರಿ ಮಾಡಿಸೋಣ.

ಅಧ್ಯಕ್ಷರು: ಸಗೀರ್ ಅಹಮದ್‌ರವರು ಮಾತು ಮಾತಿಗೆ ಜಾಲಪ್ಪನವರನ್ನು, ಜೂಲಪ್ಪ ಜೂಲಪ್ಪ ಎಂದು ಹೇಳುತ್ತಿದ್ದಾರೆ. ಆದರೆ, ಅವರು ಜೂಲಪ್ಪ ಅಲ್ಲ ಜಾಲಪ್ಪ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಮಾತು ಮಾತಿಗೆ ಜಾಲಪ್ಪ, ಜಾಲಪ್ಪ ಎಂದು ಹೇಳುತ್ತಿದ್ದಾರೆ ಆದರೆ ಮಣಿಶಂಕರ್ ಅಯ್ಯರ್‌ರವರು ಏನು ಹೇಳಿದ್ದಾರೆ ಎನ್ನುವುದನ್ನು ಹೇಳಿಬಿಡಲಿ.

ಅಧ್ಯಕ್ಷರು: ರೆಡ್ಡಿಯವರೇ, ನೀವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ. ಅವರು ಜಾಲಪ್ಪ ಎಂದು ಹೇಳುವುದಿಲ್ಲ. ಜೂಲಪ್ಪ ಜೂಲಪ್ಪ ಎಂದು ಹೇಳುತ್ತಾರೆ. ಜೂಲಪ್ಪ ಎಂದರೆ ಝುಲ ಅಂದರೆ ಉಯ್ಯಾಲೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಇದನ್ನೆಲ್ಲ ಪ್ರಸ್ತಾಪ ಮಾಡಿದೆ

ಎಂದರೆ ಮೊದಲು ಅವರು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡದಿದ್ದರೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ನಾನು ರಾಜ್ಯದ ಹಣಕಾಸು ಮಂತ್ರಿಯಾಗಿದ್ದೇನೆ, ಇದಕ್ಕೆಲ್ಲಾ ಉತ್ತರ ಹೇಳದೇಹೋದರೆ ಜನ ತಪ್ಪು ತಿಳಿದುಕೊಳ್ಳುತ್ತಾರೆ. ನಾವು ಮೂರು ವರ್ಷದಲ್ಲಿ ಏನು ಕೆಲಸವನ್ನು ಮಾಡಿದ್ದೇವೆ ಎಂದು ಜನರಿಗೆ ಗೊತ್ತಾಗಬೇಕು. ನಾನು ಹೊಸ ವಿಚಾರವನ್ನೇನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿಲ್ಲ. ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಹೇಳಬೇಕಾದರೆ ಮೂರು ವರ್ಷದಲ್ಲಿ ಅವರು 366 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದಾರೆ. ಮೂರು ವರ್ಷದಲ್ಲಿ ನಾವು ಖರ್ಚು ಮಾಡಿರುವುದು 732 ಕೋಟಿ ರೂಪಾಯಿ. ಮೂರು ವರ್ಷದಲ್ಲಿ ಅವರು ಶಿಕ್ಷಣಕ್ಕೆ 492 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದಾರೆ. ನಾವು 836 ಕೋಟಿ ರೂಪಾಯಿಯನ್ನು ಮೂರು ವರ್ಷದಲ್ಲಿ ಖರ್ಚು ಮಾಡಿದ್ದೇವೆ. ವಾಟರ್ ಸಪ್ಲೈ ಮತ್ತು ಸ್ಯಾನಿಟೇಶನ್‌ಗೆ ಅವರು ಮೂರು ವರ್ಷದಲ್ಲಿ 387ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದಾರೆ. ನಾವು ಮೂರು ವರ್ಷದಲ್ಲಿ 798 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಮೂರು ವರ್ಷದಲ್ಲಿ ಅಗ್ರಿಕಲ್ಚರ್ ಮತ್ತು ಅದರ ಅಲ್ಲೈಡ್ ಸರ್ವೀಸಸ್‌ಗೆ ಅವರು 531 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾವು ಮೂರು ವರ್ಷದಲ್ಲಿ 634ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಅವರು ಮೂರು ವರ್ಷದಲ್ಲಿ 389 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾವು 518 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಾನು ಮೇಲೆ ಹೇಳಿದಂಥ ಎಲ್ಲ ಫಿಗರ್ಸ್‌ಗಳನ್ನು 1996-97ನೇ ಸಾಲಿನ ಎಕಾನಾಮಿಕ್ ಸರ್ವೆನಲ್ಲಿ ತೋರ್ಪಡಿಸಲಾಗಿದೆ. ನಾನು ಸೃಷ್ಠಿ ಮಾಡಿ ಹೇಳಿದಂಥ ಅಂಕಿ ಅಂಶಗಳು ಅಲ್ಲ. ನಮ್ಮ ಜನತಾದಳ ಸರ್ಕಾರ ಬಂದಮೇಲೆ ಹೌಸಿಂಗ್, ಕುಡಿಯುವ ನೀರು, ರಸ್ತೆಗಳು ಎಜುಕೇಶನ್, ನೀರಾವರಿ ಮತ್ತು ಎನರ್ಜಿ ಇವುಗಳನ್ನು ಆದ್ಯತೆಯ ವಲಯಗಳೆಂದು ಗುರುತಿಸಿ ಕಾಂಗ್ರೆಸ್ ಸರ್ಕಾರ ಖರ್ಚು ಮಾಡಿರುವುದಕ್ಕಿಂತ ಎರಡು ಮೂರು ಪಟ್ಟು ಹೆಚ್ಚು ಹಣವನ್ನು ನಾವು ಖರ್ಚು ಮಾಡಿದ್ದೇವೆ. ಅವರು ಕೂಡ ಬಡವರ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದರು. ನಾವು ಕೂಡ ಬಡವರ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದೇವೆ. ಪ್ರತಿ ವರ್ಷ ಒಂದೊಂದು ಲಕ್ಷ ಮನೆಗಳನ್ನು ನಾವು ಹಿಂದುಳಿದವರಿಗಾಗಿ, ದಲಿತರಿಗಾಗಿ ಪರಿಶಿಷ್ಟ ಜಾತಿಯವರಿಗಾಗಿ ಕಟ್ಟುತ್ತಿದ್ದೇವೆ. ಎರಡು ವರ್ಷದಲ್ಲಿ ಈಗಾಗಲೇ ಒಂದು ಲಕ್ಷದ ಅರವತ್ತೈದು ಸಾವಿರ ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಈ ವರ್ಷ ಒಂದು ಲಕ್ಷದ ಇಪ್ಪತ್ತು ಸಾವಿರ ಮನೆಗಳನ್ನು ಕಟ್ಟತಕ್ಕಂಥ ನಿರ್ಣಯ ಮಾಡಿದ್ದೇವೆ. ಅವು ವಿವಿಧ ಹಂತಗಳಲ್ಲಿ ನಡೆಯುತ್ತಿವೆ. ಇಷ್ಟು ಮಾಡಿದರೂ ಏನೂ ಕೆಲಸ ಮಾಡಿಲ್ಲ ಎಂದು ಹೇಳುತ್ತಾರೆ. ಇವು ಮೂರು ಲಕ್ಷ ಮನೆಗಳನ್ನು ಕಟ್ಟಿಸಿದ್ದು, ಬಡವರಿಗಾಗಿ ಮಾಡಿದಂಥ ಕಾರ್ಯಕ್ರಮ ಅಲ್ಲವೇ? ನೀರಾವರಿಗಾಗಿ ಮೂರು ಸಾವಿರದ ಎಪ್ಪತ್ತೊಂಭತ್ತು ಕೋಟಿ

ರೂಪಾಯಿ ಹಣವನ್ನು ಖರ್ಚು ಮಾಡಿದ್ದೇವೆ. ಇದು ನೀರಾವರಿ ಕಾಮಗಾರಿಗಾಗಿ ಖರ್ಚು ಮಾಡಿರತಕ್ಕಂಥ ಹಣ ಅಲ್ಲವೇ? ಮಾನ್ಯ ಯಡಿಯೂರಪ್ಪನವರು ಒಂದು ಸಾವಿರ ಕೋಟಿ ರೂಪಾಯಿ ಸೋರಿ ಹೋಗಿಬಿಟ್ಟಿದೆ ಎಂದು ಹೇಳಿದರು. ನಾನು 1994-95ನೇ ಸಾಲಿನಲ್ಲಿ ಅಧಿಕಾರಕ್ಕೆ ಬಂದಾಗ ಒಂದು ವರ್ಷಕ್ಕೆ ಕಮರ್ಶಿಯಲ್ ಟ್ಯಾಕ್ಸ್ ಎರಡು ಸಾವಿರದ ಎಂಟನೂರು ಕೋಟಿ ಇತ್ತು. 1995-96ನೇ ಸಾಲಿನಲ್ಲಿ ಶೇಕಡಾ ಇಪ್ಪತ್ತಾರರಷ್ಟು ಗ್ರೋಥ್ ಆಯಿತು. ಕಳೆದ ವರ್ಷ ಶೇಕಡಾ ಹದಿನೇಳರಷ್ಟು ಗ್ರೋಥ್ ಆಯಿತು. ಈ ವರ್ಷ ಸುಮಾರು ಹದಿನೈದಕ್ಕೂ ಹೆಚ್ಚು ಪರ್ಸೆಂಟ್ ಗ್ರೋಥ್ ಆಗುತ್ತಿದೆ. ಇಷ್ಟು ಬೆಳವಣಿಗೆ ಹಿಂದೆ ಇದ್ದಂಥ ಯಾವ ಸರ್ಕಾರಗಳ ಕಾಲದಲ್ಲಿಯೂ ಆಗಲಿಲ್ಲ, ಎಂದು ಅತ್ಯಂತ ಹೆಮ್ಮೆಯಿಂದ ಹೇಳಬಯಸುತ್ತೇನೆ. ಎರಡು ಸಾವಿರದ ಎಂಟನೂರು ಕೋಟಿ ರೂಪಾಯಿ ಇದ್ದಂಥ ಕಮರ್ಶಿಯಲ್ ಟ್ಯಾಕ್ಸ್‌ನ್ನು ನಾವು ಇಂದು ನಾಲ್ಕು ಸಾವಿರದ ಏಳನೂರು ಕೋಟಿ ರೂಪಾಯಿಯನ್ನು ವಸೂಲು ಮಾಡುತ್ತಿದ್ದೇವೆ. ಇಷ್ಟಾದರೂ ಒಂದು ಸಾವಿರ ಕೋಟಿ ಸೋರಿ ಹೋಗುತ್ತಿದೆ, ಹೆಂಡದವರ ಜೊತೆ ಸೇರಿಹೋಗಿದ್ದಾರೆ ಕರೆಕಲ್ಲಿನವರೊಂದಿಗೆ ಸೇರಿ ಹೋಗಿದ್ದಾರೆ, ಅವರ ಜೊತೆ ಶಾಮೀಲಾಗಿದ್ದಾರೆ, ಇವರ ಜೊತೆ ಶಾಮೀಲಾಗಿದ್ದಾರೆ ಎಂದು ಹೇಳುವುದು ಸರಿಯಲ್ಲ. ಈ ಜನತಾ ದಳದ ಸರ್ಕಾರಕ್ಕೆ ಯಾವುದೇ ಲಾಬಿಗಳ ಜೊತೆ ಸಂಪರ್ಕ ಇಲ್ಲ. ಈ ಸರ್ಕಾರ ಯಾವ ಲಾಬಿಗೂ ಮಣಿಯುವುದಿಲ್ಲ, ಎಂದು ಅತ್ಯಂತ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಎಕ್ಸೈಸ್ ರೂಲ್ಸ್ ಏತಕ್ಕೆ ತಂದುಬಿಟ್ಟರು, ಸುಪ್ರೀಮ್ ಕೋರ್ಟಿನಲ್ಲಿ ಏನಾಯಿತು ಎಂದು ಅವರು ಹೇಳುತ್ತಾರೆ. ಆದರೆ ಅವರ ಕಾಲದಲ್ಲಿಯೂ ಕೂಡ ಅದೇ ಪದ್ಧತಿ ಇತ್ತು. ಗವರ್ನರ್ ಕಾಲದಲ್ಲಿ ಇದ್ದಂಥ ರೂಲ್ಸ್ ತೆಗೆದು, ತಿದ್ದುಪಡಿ ಮಾಡಿ ಅದನ್ನು ಎಂ.ಎಸ್.ಐ.ಎಲ್‌ಗೆ ಏಕೆ ಕೊಡಬೇಕು ಎಂದರೆ, ಅದು ಒಂದು ಸರ್ಕಾರದ ನೀತಿ. ಅದು ನೀತಿ ಮಾಡಿದ್ದು ಒಂದು ಪ್ರಶ್ನೆಯಾಗಿದೆ ಅದು ಸುಪ್ರೀಮ್ ಕೋರ್ಟಿಗೆ ಹೋಗಿದೆ. ಅದಕ್ಕೆ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು ಎಂದು ಹೇಳಿದರೆ ಏನು ಅರ್ಥ? ಸುಪ್ರೀಮ್ ಕೋರ್ಟ್ ಅದಕ್ಕೆ ತಡೆ ಆಜ್ಞೆ ಕೊಟ್ಟಿದೆ. ಅದನ್ನು ಸದುದ್ದೇಶದಿಂದ ಮಾಡಿದ್ದು. ಈ ವರ್ಷ ಎಕ್ಸೈಜ್‌ನಲ್ಲಿ ಒಂದು ಹೊಸ ಅಬಕಾರಿ ನೀತಿಯನ್ನು ತರುತ್ತೇವೆ ಎಂದು ನಾವು ಹೇಳಿದ್ದು, ಏತಕ್ಕೆ ಎಂದರೆ ಸಾರಾಯಿಯನ್ನು ನಿಲ್ಲಿಸಬೇಕು ಎನ್ನುವುದಕ್ಕೆ. ಆದರೆ ನಮ್ಮ ಸರ್ಕಾರ ಸಚಿವ ಸಂಪುಟದ ಉಪ ಸಮಿತಿಯು ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರ ಮತ್ತು ಗುಜರಾತ್ ರಾಜ್ಯಗಳಿಗೆ ಹೋಗಿ ಬಂದಮೇಲೆ ಇದು ಸಾಧು ಆಗುವುದಿಲ್ಲ, ಸಾರಾಯಿಯನ್ನು ನಿಲ್ಲಿಸಿದರೆ ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ಆದಾಯ ಹೋಗುತ್ತದೆ ಮತ್ತು ಭಟ್ಟಿ ಸಾರಾಯಿ ಹೆಚ್ಚಾಗುತ್ತದೆ ಎಂದು ತಿಳಿದುಕೊಂಡು ಆ ರಾಜ್ಯಗಳ ಅನುಭವನ ಆಧಾರದ ಮೇಲೆ ನಾವು ಮತ್ತೆ ಒಂದು ಹೊಸ ನೀತಿಯನ್ನು ಮಾಡಲು ಹೊರಟಿದ್ದೇವೆ. ಹಳ್ಳಿಗಾಡುಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಾರಾಯಿ ಅಂಗಡಿಗಳು ಕಡಿಮೆಯಾಗಬೇಕು, ಸಾರಾಯಿ ಕನ್ಸಂಪಶನ್ ಕಡಿಮೆಯಾಗಬೇಕು ಎನ್ನುವ ಸದುದ್ದೇಶದಿಂದ ಈ ಹೊಸ

ಆರ್ಥಿಕ ನೀತಿಯನ್ನು ಜಾರಿಗೆ ತಂದಿದ್ದು ಹೊರತಾಗಿ ಯಾರೋ ಅಬಕಾರಿ ದೊರಗಳಿಗೆ ಹೆದರಿಕೊಂಡು ಅಥವಾ ಅವರಿಗೆ ಸಹಾಯ ಮಾಡುವುದಕ್ಕಾಗಿ ತಂದಿದ್ದಲ್ಲ. ಅದರಲ್ಲಿ ಯಾವುದೇ ದುರುದ್ದೇಶ ಇಲ್ಲವೆಂದು ಹೇಳಬಯಸುತ್ತೇನೆ. ರಾಜ್ಯದ ಹಿತವನ್ನು ಕಾಪಾಡತಕ್ಕಂಥ ವಿಷಯದಲ್ಲಾಗಲೀ, ರಾಜ್ಯದ ಆದಾಯವನ್ನು ವಸೂಲು ಮಾಡತಕ್ಕಂಥ ವಿಷಯದಲ್ಲಾಗಲೀ ನಮ್ಮ ಸರ್ಕಾರ ಯಾವತ್ತೂ ಹಿಂದೆ ಬಿದ್ದಿಲ್ಲ ಎಂದು ಅಂಕಿ ಅಂಶಗಳ ಮುಖಾಂತರ ಯಾವುದೇ ವೇದಿಕೆಯಲ್ಲಿ ನಾನು ಸಾಬೀತು ಮಾಡಲಿಕ್ಕೆ ತಯಾರಿದ್ದೇನೆ. ಎಂದು ಸಂತೋಷದಿಂದ ಹೇಳಲು ಬಯಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರಾಜ್ಯದ ಆದಾಯದ ಸೋರಿಕೆ ಬಗ್ಗೆ ಚೀಫ್ ಜಸ್ಟೀಸ್‌ರವರು ಸಲಹೆ ಮಾಡಿದ್ದಾರೆ. ಸಿ.ಬಿ.ಐ. ತನಿಖೆ ಮಾಡಿಸಿ ಎಂದು ಹೇಳಿದ್ದಾರೆ. ತನಿಖೆ ಮಾಡಿಸಿ.

ಶ್ರೀ ಸಿದ್ಧರಾಮಯ್ಯ: ಯಾರ ಯಾರ ಕಾಲದಲ್ಲಿ ಎಷ್ಟೆಷ್ಟು ಹಗರಣಗಳು ಆಗಿವೆ ಎನ್ನುವುದು ಇತಿಹಾಸದಲ್ಲಿ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗಾದರೆ ಸಿ.ಬಿ.ಐ. ಎನ್‌ಕ್ವೈರಿ ಮಾಡಿಸಿ ಯಾರ ಯಾರ ಕಾಲದಲ್ಲಿ ಏನೇನಾಗಿದೆ ಎಂದು ಗೊತ್ತಾಗುತ್ತದೆ. ಹಿಂದಕ್ಕೆ ಕೈ ಹಾಕಿ ತೆಗೆಯುವುದು ಬೇಡ. ಈಗ ನೀವು ತಪ್ಪು ಮಾಡಿದ್ದೀರಿ. ಆವಾಗ ಮಾಡಿದವರನ್ನು ಬೇಕಾದರೆ ತನಿಖೆ ಮಾಡಿಸಿ, ತಪ್ಪು ಮಾಡಿದವರನ್ನು ಶೂಲಕ್ಕೇರಿಸಿ. ಆದರೆ ಅದನ್ನು ಹೇಳಿ ಕೊಂಡು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ರಾಜ್ಯದ ಆದಾಯವನ್ನು ಹೆಚ್ಚಿಸತಕ್ಕಂಥದ್ದರಲ್ಲಿ ನಾವು ಹಿಂದೆ ಬಿದ್ದಿಲ್ಲ, ನಾವು ಯಾರ ಮುಲಾಜಿಗೂ ಒಳಗಾಗಿಲ್ಲ. ನಾವು ಜನತೆಗೆ ಏನು ವಚನ ಕೊಟ್ಟಿದ್ದೇವೆಯೋ ಕಳೆದ ಮೂರು ವರ್ಷಗಳಲ್ಲಿ ಹಾಗೆ ಕೊಟ್ಟಿರುವಂಥ ವಚನಗಳನ್ನು ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇವೊತ್ತು ಬಿ.ಜೆ.ಪಿ.ಯವರು ಹಗಲು ಕನಸು ಕಾಣುತ್ತಿದ್ದಾರೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಲು ಕನಸು ಕಾಣುತ್ತಿದ್ದಾರೆ. ಅವರು ಮುಖ್ಯಮಂತ್ರಿಯಾದರೆ ನಮಗೆ ಸಂತೋಷ. ಕರ್ನಾಟಕ ರಾಜ್ಯದಲ್ಲಿ ಬಿ.ಜೆ.ಪಿ.ಯವರು ಯಾವ ಕಾಲದಲ್ಲಿಯೂ ಬರಲಿಕ್ಕೆ ಸಾಧ್ಯವಿಲ್ಲ. ಏನಿದ್ದರೂ ನಮಗೂ ಕಾಂಗ್ರೆಸ್ಸಿನವರಿಗೂ ಕುಸ್ತಿ ನಡೆಯಬೇಕೇ ಹೊರತು ನೀವು ಬಿ.ಜೆ.ಪಿ.ಯವರು ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಹಗಲು ಕನಸು ಕಾಣಲು ಹೋಗಬೇಡಿ. ವಾಜಪೇಯಿಯವರು ಪ್ರಧಾನಿಯಾಗುತ್ತಾರೆ ಎಂದು ಕನಸು ಕಾಣಲು ಹೋಗಬೇಡಿ. ಏಕೆಂದರೆ ಈ ದೇಶದ ಜನತೆ, ಮತದಾರರು ಬಹಳ ಪ್ರಬುದ್ಧ ಆಗಿದ್ದಾರೆ. ಯಾರು ಧರ್ಮದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ಮತ ಕೇಳುತ್ತಾರೆ, ಅವರಿಗೆ ಏನು ಮಾಡಬೇಕು ಎಂದು ತಿಳಿದುಕೊಳ್ಳುವ ಮತ್ತು ತೀರ್ಪು ಕೊಡುವ ಶಕ್ತಿ ಅವರಿಗೆ ಇದೆ. ಆದ್ದರಿಂದ

ಹಗಲು ಕನಸು ಕಾಣಲು ಹೋಗಬೇಡಿ, ಎಂದು ಹೇಳಲು ಬಯಸುತ್ತೇನೆ. ಮತ್ತು ಎಲ್ಲಾ ಸದಸ್ಯರಿಗೂ ಕೂಡ ಈ ಸರ್ಕಾರ ಸ್ಥಿರವಾಗಿದೆ ಎಂದು ಹೇಳಬಯಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ದೇವರ ಹೆಸರಿನಲ್ಲಿ ಮತ ಕೇಳಬಾರದು, ಹೆಂಡದ ಹೆಸರಿನಲ್ಲಿ ಮತ ಕೇಳಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಹಾಗಾದರೆ ರಾಮನನ್ನು ಏಕೆ ಬಿಟ್ಟುಬಿಟ್ಟಿದ್ದೀರಿ? ನಿಮ್ಮ ಹತ್ತಿರ ಯಾವುದೇ ಕಾರ್ಯಕ್ರಮ ಇಲ್ಲ ಯಾವ ಸಿದ್ಧಾಂತ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಕೊನೇ ದಿವಸ ಏನೋ ಒಂದು ಬಡಬಡಿಸುತ್ತಿದ್ದಾರೆ ಏನೋ ಒಂದು ಹೇಳಿಕೊಳ್ಳುತ್ತಿದ್ದಾರೆ, ಅದಕ್ಕೆ ಏಕೆ ಅಡ್ಡಿ ಮಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ: ಯಡಿಯೂರಪ್ಪನವರೇ ಬರೀ ಬಡ ಬಡಿಸುವುದಲ್ಲ. ನಮ್ಮ ಜೊತೆ ಬನ್ನಿ, ಜೊತೆಯಲ್ಲಿಯೇ ಹೋಗಿ ಮತ ಕೇಳೋಣ. ಏನೇನಾಗಿದೆ ಎಂದು ಜನರ ಮುಂದೆ ಹೋಗೋಣ. ಆದ್ದರಿಂದ ಈ ರಾಜ್ಯದ ಹಿತವನ್ನು ಕಾಪಾಡತಕ್ಕಂಥದ್ದರಲ್ಲಿ ನಾವು ಯಾರ ಕೈಯಿಂದಲೂ ಹೇಳಿಸಿಕೊಳ್ಳುವಂಥ ಅವಶ್ಯಕತೆ ಇಲ್ಲ. ನಾವು ಪ್ರಾಮಾಣಿಕವಾಗಿ ಎಲ್ಲ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದರೆ ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ವಿಧಾನಸಭೆಯನ್ನು ವಿಸರ್ಜನೆ ಮಾಡುವುದಿಲ್ಲವೇ?

ಶ್ರೀ ಕೆ.ಎನ್.ನಾಗೇಗೌಡ: ವಿಧಾನಸಭೆಯನ್ನು ವಿಸರ್ಜನೆ ಮಾಡುವುದಿಲ್ಲ. ಗಣೇಶನನ್ನು ವಿಸರ್ಜನೆ ಮಾಡುತ್ತೇವೆ.

ಶ್ರೀ ಸಿದ್ಧರಾಮಯ್ಯ: ಆದ್ದರಿಂದ ನಮ್ಮ ಸರ್ಕಾರ ಸ್ಥಿರವಾಗಿದೆ ಹಾಗೂ ಜನತೆ ಕೊಟ್ಟಿರತಕ್ಕಂಥ ತೀರ್ಪಿನಂತೆ ನಾವು ನಡೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ. ಮಾನ್ಯ ಜೆ.ಹೆಚ್.ಪಟೇಲರು ನಮ್ಮ ಸರ್ಕಾರದ ನಾಯಕರು, ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂಥ ವಿಶ್ವಾಸ ಮತಕ್ಕೆ ವಿರೋಧ ಪಕ್ಷದವರಾದ ನೀವು ಕೂಡ ಬೆಂಬಲವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ನಾವು ಎರಡು ವರ್ಷ ನಾವು ಚೆನ್ನಾಗಿ ಕೆಲಸವನ್ನು ಮಾಡಿದ್ದೇವೆ. ನೀವು ನಿಮ್ಮ ವಿರೋಧ ಪಕ್ಷದ ಕೆಲಸವನ್ನು ಮಾಡಿ ಆದರೆ ಇವೊತ್ತು ಬಿದ್ದು ಹೋಗುತ್ತದೆ, ನಾಳೆ ಬಿದ್ದು ಹೋಗುತ್ತದೆ ಎಂದು ಕನಸು ಕಾಣಬೇಡಿ. ಅದು ಬರೀ ನಿಮ್ಮ ಭ್ರಮೆ. ಅದು ಆಗುವುದಿಲ್ಲ. ನಮ್ಮ ಸರ್ಕಾರ ಜನರ ಗೊಂದಲವನ್ನು ನಿವಾರಣೆ ಮಾಡುವುದಕ್ಕೋಸ್ಕರ ಮಾತ್ರ ವಿಶ್ವಾಸವನ್ನು ತಂದಿರತಕ್ಕಂಥದ್ದು ಎಂದು ಹೇಳಿ ನಿಮಗೆ ನಮಸ್ಕಾರ ಮಾಡಿ ನನ್ನ ಮಾತನ್ನು

ಮುಗಿಸುತ್ತೇನೆ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ಈಗ ಕೆಲವು ವಿಷಯಗಳ ಬಗ್ಗೆ ಸದನದಲ್ಲಿ ಹೇಳಬಯಸುತ್ತೇನೆ. ಈಗಾಗಲೇ ಎಲ್ಲಾ ಪ್ರಗತಿ ಪರ ಕಾರ್ಯಗಳ ಬಗ್ಗೆ ಸರ್ಕಾರ ಮಾಡಿರತಕ್ಕಂಥ ಕಾರ್ಯಗಳ ಬಗ್ಗೆ ವಸ್ತುಸ್ಥಿತಿಯನ್ನು ಸದನದ ಮುಂದೆ ಇಡಲಾಗಿದೆ. ಈ ಸರ್ಕಾರದ ಸ್ಥಿರತೆಯ ಬಗ್ಗೆ ಕೆಲವರು ನಾವೇನಾದರೂ ಸ್ವಲ್ಪ ಕೈ ಹಾಕಿದರೆ ಇದನ್ನು ಅಸ್ಥಿರಗೊಳಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವವರೆಲ್ಲರೂ ಈ ಅಧಿವೇಶನವನ್ನು ಕರೆದ ತಕ್ಷಣ ತಣ್ಣಗಾದರು. ಮಾನ್ಯ ಯಡಿಯೂರಪ್ಪನವರೇ ಅಧಿವೇಶನ ಕರೆಯುವುದಕ್ಕೆ ಸಂಬಂಧಪಟ್ಟಂತೆ ತತ್‌ಕ್ಷಣದ ಉದ್ದೇಶ ಮತ್ತು ಪೂರಕಾಲಿಕ ಉದ್ದೇಶವೂ ಇದೆ. ತತ್‌ಕ್ಷಣದ ಉದ್ದೇಶ ಎಂದರೆ ಇದುವರೆಗೆ ಏನು ಪ್ರತಿ ದಿವಸ ಕೂಗುತ್ತಿದ್ದರು, ಕಿರುಚಿಕೊಳ್ಳುತ್ತಿದ್ದರು, ಈ ಸರ್ಕಾರ ಬಿದ್ದು ಹೋಯಿತು, ಬಿದ್ದುಹೋಯಿತು ಎನ್ನುತ್ತಿದ್ದರೋ ಅಂಥವರಿಗೆ ಈ ಅಧಿವೇಶನದಲ್ಲಿ ನಮ್ಮ ಬಲ ತೋರಿಸುವುದಕ್ಕೆ. ಈ ಸರ್ಕಾರ ಅಷ್ಟು ಸುಲಭವಾಗಿ ಬೀಳುವುದಿಲ್ಲ. ಕನ್ನಡ ನಾಡಿನ ಜನರ ಒಳಗಡೆಯ ಬೇರಿನಿಂದ ಬಂದಿರತಕ್ಕಂಥದ್ದು ಈ ಸರ್ಕಾರ. ಏನೋ ಸುಮ್ಮನೇ ಕುಂಡದ ಒಳಗಿನಿಂದ ಬಂದ ಗಿಡದ ಹೂವಲ್ಲ ಈ ಸರ್ಕಾರ. ಇದಕ್ಕೂ ಭೂಮಿಗೆ ಬೇರು ಎಲ್ಲಿದೆ ಎಂಬುದು ಗೊತ್ತಿದೆ. ಇನ್ನು ಮತ್ತೊಂದು ವಿಷಯ, ತಾವೂ ಇದನ್ನು ಅರ್ಥಮಾಡಿಕೊಳ್ಳಬೇಕು. ನಾನು ಬ್ರಾಹ್ಮಣರ ಬಗ್ಗೆ ಹೀಯಾಳಿಸಿ ಮಾತನಾಡಿದೆ ಎಂದು ಪತ್ರಿಕೆಯಲ್ಲಿ ಬಂತು. ಪ್ರಾರಂಭದಲ್ಲಿ ಹಿಂದೆ ಮೊದಲಿನಿಂದ ಲರ್ನೆಡ್ ರಾಕ್ಷಸರು ಬ್ರಾಹ್ಮಣರು. ರಾವಣ ಬ್ರಾಹ್ಮಣ. ಅವರಿಗೆ ಯಾವಾಗಲಾದರೂ ಒಬ್ಬ ಕ್ಷತ್ರಿಯ ಅಥವಾ ಒಬ್ಬ ಸಾಮಾನ್ಯ ಮನುಷ್ಯ ಅವರಿಗಿಂತ ದೊಡ್ಡವನಾಗುತ್ತಿದ್ದಾನೆ ಎಂದರೆ ಇವರಿಗೆ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಆ ಕಾರಣದಿಂದಲೇ ಮಾನ್ಯ ಯಡಿಯೂರಪ್ಪನವರಿಗೆ ಮತ್ತು ನಂಜೇಗೌಡರಿಗೆ ಏನು ಹೇಳುತ್ತಿದ್ದೇನೆಂದರೆ ಈ ರೀತಿಯ ವ್ಯವಸ್ಥೆಯಲ್ಲಿ ನೀವು ಉಳಿಯುವುದಿಲ್ಲ. ಏಕೆಂದರೆ ದೇವೇಗೌಡರ ಸರ್ಕಾರ ಬಂದರೆ ಏನೋ ಒಂದು ರೀತಿಯ ಕಸಿವಿಸಿ ಹೊಟ್ಟೆಯಲ್ಲಿ ಆಗುತ್ತದೆ, ಅದೇ ರೀತಿ ಪಟೇಲ್ ಸರ್ಕಾರ ಬಂದರೆ ಏನೋ ಒಂದು ರೀತಿ ಜ್ವರ ಅವರಿಗೆ ಬಂದುಬಿಡುತ್ತದೆ. ಏಕೆ ಆ ರೀತಿಯಾಗಬೇಕು? ನಮಗೇನು ರಾಜ್ಯ ಮತ್ತು ಈ ದೇಶವನ್ನು ಆಳುವುದಕ್ಕೆ ಬರುವುದಿಲ್ಲವೇ? ನಿಮಗೆ ಬರುವುದೇ ಇಲ್ಲ ಎಂದು ಯಾರು ಹೇಳುತ್ತಾರೆ ಅಂಥವರ ಬಗ್ಗೆ ನಾನು ಅಂದು ಮಾತನಾಡಿದ್ದು, ಬ್ರಾಹ್ಮಣರು ಎಂದಾಗ ಎಲ್ಲಾ ಬ್ರಾಹ್ಮಣರ ಬಗ್ಗೆ ಎಂದು ತಿಳಿದುಕೊಳ್ಳಬಾರದು. ಆ ರೀತಿಯಲ್ಲಿ ನಾನು ಹೇಳಿಯೇ ಇಲ್ಲ. ಬರೆಯುವಾಗ ಏನೆಂದು ಬರೆಯುತ್ತಾರೆ ಗೊತ್ತೇ? 20 ಸಾವಿರ ಜನರನ್ನು ಮೀಟಿಂಗ್‌ಗೆ ಅಡ್ರೆಸ್ ಮಾಡಿದ್ದೀನಿ, ಜನರೆಲ್ಲ ವಾಪಸ್ ಹೋದರು ಎಂದು ಬರೆಯುತ್ತಾರಲ್ಲ ಅದಕ್ಕಿಂತ ನೀಚತನ ಇನ್ಯಾವುದಿದೆ ಹೇಳಿ. ಅವರು ಯಾವುದೇ ಜಾತಿಯವರಾಗಲಿ. ನಾನು ಅದಕ್ಕೋಸ್ಕರ ಹೇಳಿದ್ದು, ವಿಭೂತಿ, ಜನಿವಾರ, ನಾಮ, ಇವುಗಳಲ್ಲಿ ಯಾವುದನ್ನೇ

ಹಾಕಿಕೊಂಡು ಬಂದರೂ ಕೂಡ ಈ ದೇಶದ ಒಳತಳಕ್ಕೆ ಕೈ ಹಾಕತಕ್ಕಂಥ ಜನರುಗಳು ಯಾರಿದ್ದಾರೆ ಅವರ ಬಗ್ಗೆ ಹುಷಾರಾಗಬೇಕು. ಅಂಥವರು ಯಾರೇ ಬರಲಿ. ಈಗ ಕಲ್ಯಾಣ್‌ಸಿಂಗ್ ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ. ಒಂದು ಕಡೆ ದ್ವಿಜಶಕ್ತಿ ಮತ್ತು ಇನ್ನೊಂದು ಕಡೆ ಶೂದ್ರ ಶಕ್ತಿ. ಇವೆರಡು ಶಕ್ತಿಗಳ ನಡುವೆ ಸಂಘರ್ಷ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಯಾವಾಗ ಶೂದ್ರಶಕ್ತಿ ಮೇಲೇರುತ್ತದೆ ಆಗ ದೇವತೆಗಳೂ ಸಹ ಬಂದು, ಅವನು ಹರಿಶ್ಚಂದ್ರ ಆದರೂ ಕೂಡ ಅವನನ್ನು ಏನಾದರೂ ಮಾಡಿ ದಾರಿ ತಪ್ಪಿಸಬೇಕು ಎಂದು ಬಂದವರೇ ಈ ಮಹಾಪುರುಷರುಗಳು. ಯಾರು ಸತ್ಯವಂತನಾಗುತ್ತಾನೆ, ಯಾರು ಲೋಕಕ್ಕೆ ಕಲ್ಯಾಣ ಮಾಡುತ್ತಾನೆ ಅವನನ್ನು ಮುಗಿಸುವುದಕ್ಕೆ ಏನೆಲ್ಲಾ ಮಾಡಬೇಕು ಅಂಥ ಕುತಂತ್ರಗಳನ್ನು ಮಾಡಿ, ಅದಕ್ಕೆ ಪಾಪ ನಮ್ಮ ಖರ್ಗೆಯವರನ್ನು ಈ ವ್ಯವಸ್ಥೆಯಲ್ಲಿ ಸೇರಿಸಿದ್ದಾರೆ. ಈ ವ್ಯವಸ್ಥೆಯಲ್ಲಿ ಏನು ಕರಾಳ ಶಕ್ತಿಗಳಿವೆ ಅದರ ಬಗ್ಗೆ ಇನ್ನೂ ಅರ್ಥವಾಗುವುದು ಕಷ್ಟವಾಗುತ್ತದೆ ಮತ್ತು ಅದರ ಬಗ್ಗೆ ಹೋರಾಟ ಮಾಡುವುದೂ ಕೂಡ ಕಷ್ಟವಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಮುದ್ರದಲ್ಲಿ ಯಾವಾಗಲೂ ದೊಡ್ಡ ಮೀನು ಸಣ್ಣ ಮೀನನ್ನೇ ನುಂಗುತ್ತದೆ. ಅದೇ ರೀತಿಯಲ್ಲಿ ನೀವೂ ನುಂಗುವವರೇ ಆಗಿದ್ದೀರಿ.

ಶ್ರೀ ಜೆ.ಹೆಚ್.ಪಟೇಲ್: ಆದರೆ ನೀವು ಯಾರಿಂದಲೂ ನುಂಗಿಸಿಕೊಳ್ಳಬೇಡಿ. ಈ ರೀತಿಯಲ್ಲಿ ನಾನು ಹೇಳಿದ ಮಾತನ್ನು ಇನ್ನೊಂದು ರೀತಿಯಲ್ಲಿ ತಿರುಚಿ ಬರೆದರು. ಇನ್ನು ಸೋನಿಯಾಗಾಂಧಿ ಬಗ್ಗೆ ಏನು ಮಾತನಾಡಿದೆ ಎಂಬುದು ಪತ್ರಿಕೆಯಲ್ಲಿ ಬಂದಿದೆ. ಆ ಮಾತನ್ನು ನಾನು ಆಡಿಯೇ ಇಲ್ಲ. ಆದರೆ ಸೋನಿಯಾಗಾಂಧಿ ಬಗ್ಗೆ ಮತ್ತು ಮಹಿಳೆಯರ ಬಗ್ಗೆ ಏನೇನೋ ಮಾತನಾಡಿದರು ಎಂದು ಕಾಂಗ್ರೆಸ್‌ನವರು ಬರೆಸಿಕೊಂಡರು. ಆದರೆ ನಾನು ಯಾವುದೋ ಒಂದು ಉದಾಹರಣೆಯನ್ನು ಅವರ ಬಗ್ಗೆ ಕೊಡುತ್ತಾ She belongs to a family of giants. This was the word used. She belongs to a family of giants. But, now she is surrounded by pigmies. ಈ ರೀತಿಯಲ್ಲಿ ಹೇಳಿದ್ದುದು ನಿಮಗೆ ಅರ್ಥವಾಗಲಿಲ್ಲವೇ? ನಾನು ಇದನ್ನು ಅವರಿಗೆ ಏಕೆ ಹೇಳುವುದಕ್ಕೆ ಹೋಗಲಿ. ಪಾಪ ಅವರು ನಮ್ಮ ದೇಶಕ್ಕೆ ಬೀಗತನ ಮಾಡಿಕೊಂಡು ಬಂದವರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವುದು ಅನವಶ್ಯಕವೋ ಅದನ್ನು ಹೇಳುತ್ತಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್: ನಾನು ನಿಮಗೆ ಇದನ್ನು ಹೇಳುತ್ತಿಲ್ಲ. ಇದರ ಬಗ್ಗೆ ಪತ್ರಿಕೆಯಲ್ಲಿ ಪ್ರತಿ ದಿವಸ ಬರುತ್ತಿದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾಳೆ ಇನ್ನೊಬ್ಬರು ನಿಮಗೂ ಕೂಡ ಹಾಗೇ

ಹೇಳಬಹುದು. You are also surrounded by pigmies. You may be a great man, philosopher.

ಶ್ರೀ ಜೆ.ಹೆಚ್.ಪಟೇಲ್: ಓಕೆ, ಅನ್ನಲಿ ಬಿಡಿ. ನಾನೇನೂ ಬೇಡ ಎನ್ನಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆದ್ದರಿಂದಲೇ ನಾನು ಹೇಳುತ್ತಿರುವುದು. ಸುಮ್ಮನೇ ಡೀವಿಯೇಟ್ ಮಾಡಿ ಮಾತುಗಳನ್ನು ಬೆಳೆಸಬಾರದು.

ಶ್ರೀ ಜೆ.ಹೆಚ್.ಪಟೇಲ್: ನಾನು ಆವೊತ್ತು ಹೇಳಿದ್ದನ್ನೇ ಹೇಳಿದೆ. ಆದರೆ ಅದಕ್ಕೆ ಬೇರೆ ಏನನ್ನೋ ವ್ಯಾಖ್ಯಾನ ಮಾಡಿದರು. ಆದುದರಿಂದ ಇವೊತ್ತು ಈ ವ್ಯವಸ್ಥೆಯಲ್ಲಿ ಏನಾದರೂ ಮಾಡಿ ಕಾಪಾಡಿಕೊಂಡು ಬರಬೇಕೆಂದು ಹಗಲು ರಾತ್ರಿ ಯೋಚನೆ ಮಾಡಿ ಇಂಗ್ಲೀಷ್ ಬಲ್ಲವರು, ದುಡ್ಡು ಉಳ್ಳವರು ಮತ್ತು ಮೇಲ್ಜಾತಿಯವರು. ಈ ಮೂರು ಕಾಂಬಿನೇಶನ್ ಏನಿದೆ this is most dangerous combination and they will never allow this country to grow. They don't want this country to grow. They don't. ಅದರ ರಹಸ್ಯವನ್ನು ತಿಳಿದುಕೊಳ್ಳಿರಪ್ಪ, ನಾವೆಲ್ಲಾ ಸೇರಿ ಕೆಲಸ ಮಾಡೋಣ ಎಂದು ಹೇಳಿದರೆ ಅದನ್ನು ಯಾರೂ ಮಾಡಲಿಲ್ಲ. ಅದರ ಬದಲು ಮಕ್ಕಳಾಟಿಕೆ ಮಾಡಿದರು. ಇನ್ನಾದರೂ ಕೂಡ ಆ ರೀತಿ ಮಾಡಬಾರದು. ಏಕೆಂದರೆ ಹಿಂದಿನ 50 ವರ್ಷಗಳಲ್ಲಿ 100 ಕೋಟಿ ಜನಸಂಖ್ಯೆಯಲ್ಲಿ 45 ಕೋಟಿ ಜನರು ಅನಕ್ಷರಸ್ಥರಿದ್ದರೆ ಯಾವುದಾದರೂ ಮರ್ಯಾದಸ್ತ ದೇಶಕ್ಕೆ ಹೋದರೆ ನಾವು ಇದರ ಬಗ್ಗೆ ಏನು ಉತ್ತರ ಹೇಳುವುದು. ಇನ್ನೂ 40 ಕೋಟಿ ಜನರಿಗೆ ಒಂದು ಹೊತ್ತಿನ ಊಟ ಸಿಗುತ್ತಿಲ್ಲ. ಉತ್ತರಪ್ರದೇಶದಲ್ಲಿ 65 ಸಾವಿರ ಹಳ್ಳಿಗಳಿಗೆ ಒಂದು ಶಾಲೆ ಕೂಡ ಇಲ್ಲ. ಕುಡಿಯುವುದಕ್ಕೆ ನೀರೂ ಕೂಡ ಇಲ್ಲ, ಹೀಗಿದ್ದರೂ ಕೂಡ ನಾವು ಹೇಳಿಕೊಳ್ಳುತ್ತೇವೆ, ಮೇರಾ ಭಾರತ್ ಮಹಾನ್ ಹೈ ಎಂದು. ತಂದಿರುವ ಸಾಲಕ್ಕೆ ಬಡ್ಡಿ ಕಟ್ಟುವುದಕ್ಕೂ ಕೂಡ ಆಗುತ್ತಿಲ್ಲ. That is how we are trapped in a financial-cum-economic trap. ಇಂಡೋನೇಶಿಯಾದ ಹಣ ಒಂದು ಡಾಲರ್‌ಗೆ 4 ಸಾವಿರ ಇದ್ದದ್ದು ಈಗ 16 ಸಾವಿರಕ್ಕೆ ಬಂದಿದೆ. ಇಂದು ಸಂಪತ್ತುಳ್ಳ ದೇಶಗಳ ಕ್ಲಿಕ್ ಬೇರೆ. ಅವರು ಈ ಸಣ್ಣವರನ್ನು ನುಂಗಿಕೊಳ್ಳುತ್ತಾರೆ. ಅಂದರೆ ಖರ್ಗೆಯವರು ಹೇಳಿದ ಹಾಗೆ ದೊಡ್ಡ ಮೀನು ಸಣ್ಣ ಮೀನನ್ನು ನುಂಗಿದ ಹಾಗೆ. ಅದರ ಅರಿವು ನಮಗಿಲ್ಲದೇ ನಮ್ಮ ದೇಶದ ಒಳಗಡೆ ಇರತಕ್ಕಂಥ ಈ ಅಂತರ್ಗತವಾದ ಸಂಚು ಬೇರೆ ಇರುತ್ತದೆ. ಉದಾಹರಣೆಗೆ ನಮ್ಮ ಕೈಗೆ ಮುಳ್ಳು ಒಳಹೊಕ್ಕಿದ್ದರೆ ಆ ಮುಳ್ಳನ್ನು ಹೊರಹಾಕುವುದಕ್ಕೆ ಅದಕ್ಕೆ ಆಂಟಿಬಾಡಿ ಎನ್ನುತ್ತಾರೆ. ಆ ಮುಳ್ಳನ್ನು ಹೊರಹಾಕುವುದಕ್ಕೆ ರಕ್ತದಲ್ಲಿ ಕೀವು ಬರುತ್ತದೆ. ಆ ರೀತಿಯಲ್ಲಿ ಆ ಮುಳ್ಳನ್ನು ಹೊರಹಾಕುತ್ತಾರೆ. ಆ ರೀತಿಯಲ್ಲಿ ನೀವು ಎಲ್ಲಾದರೂ ಒಂದು ಕಡೆ ಈ ದೇಶದ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಸಿದರೆ ನಿಮ್ಮನ್ನು ತೆಗೆಯುವುದಕ್ಕೆ

ನಿಮ್ಮವರನ್ನೇ ಉಪಯೋಗಿಸಿಕೊಳ್ಳುತ್ತಾರೆ. ನಿಮ್ಮವರಿಂದಲೇ ನೀವು ರಸಾತಲಕ್ಕೆ ಹೋಗುತ್ತೀರಿ. ಅವರು ಬರೇ ಬ್ರಾಹ್ಮಣರಲ್ಲ, ದ್ವಿಜಶಕ್ತಿ, ಇದರಲ್ಲಿ ಎಲ್ಲರೂ ಇರುತ್ತಾರೆ. ಆ ವ್ಯವಸ್ಥೆಯನ್ನು ಕಾಪಾಡಿಕೊಂಡು ಉಳಿಸಿಕೊಂಡು ಹೋಗಬೇಕು ಎನ್ನತಕ್ಕಂಥ ಜನರ ಸಂಚಿನಲ್ಲಿ ಎಲ್ಲಾ ಕ್ಯಾಪಿಟಲಿಸ್ಟ್‌ಗಳಿದ್ದಾರೆ, ಎಲ್ಲಾ ಪ್ರೆಸ್‌ಗಳ ಮಾಲೀಕರಿದ್ದಾರೆ, ಬರೆಯುವವರೂ ಇದ್ದಾರೆ ಮತ್ತು ಅದರಲ್ಲಿ ತಿಳಿದುಕೊಳ್ಳುವವರೂ ಕೂಡ ಇದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ, ಆ ವ್ಯವಸ್ಥೆ ಬಗ್ಗೆ ಮಾತನಾಡುವಾಗ ಯಾವುದೋ ಪರ್ಟಿಕ್ಯುಲರ್ ಕಮ್ಯುನಿಟಿ ಬಗ್ಗೆ ಮಾತನಾಡಿದೆ ಎಂದು ಹೇಳುವುದಾದಗಲೀ ಸರಿಯಲ್ಲ. ನನ್ನ ದುರಾದೃಷ್ಟ ನನ್ನ ಭಾಷಾ ಶೈಲಿ ವ್ಯಂಗ್ಯ. ಅದು ಮೊದಲಿನಿಂದ ಬಂದುಬಿಟ್ಟಿದೆ, ಅಂದರೆ ಹಾಸ್ಯ ಮಾಡುವುದು. ಅದರ ಬಗ್ಗೆ ಏನು ಹೇಳುತ್ತೇನೆಂದರೆ ನಗುವುದು ಸ್ವಧರ್ಮ, ನಗಿಸುವುದು ಪರಧರ್ಮ, ಆ ರೀತಿಯಲ್ಲಿ ಅದನ್ನು ನೋಡಿಕೊಳ್ಳಬೇಕೆ ವಿನಃ ಅದನ್ನು ತಿಳಿದುಕೊಳ್ಳದೇ ಸಂಕುಚಿತಭಾವನೆಯಿಂದ ನ್ಯಾರೋ ಇಂಟ್ರಪ್ರಿಟ್ ಮಾಡಿ ಅದನ್ನೇ ಒಂದು ಸೆನ್ಸೇಶನ್ ಮಾಡುವುದಕ್ಕೆ ಹೋಗುವುದಿದೆಯಲ್ಲಾ ಅದು ಸರಿಯಲ್ಲ. ಅದರ ಬಗ್ಗೆಯೇ ವಾಟಾಳ್‌ರೂ ಕೂಡ ಹೇಳಿದ್ದು. ಈ ಸಮಯದಲ್ಲಿ ಬೀಚಿಯವರು ಹೇಳಿದ್ದು ಒಂದು ಜೋಕ್ ಜ್ಞಾಪಕಕ್ಕೆ ಬರುತ್ತದೆ. ನಾನು ಮತ್ತು ಖಾದ್ರಿ ಶಾಮಣ್ಣ ಮತ್ತು ಬೀಚಿಯವರು ಮತ್ತು ಶೇಷಪ್ಪನವರೂ ಕೂಡ ಇದ್ದಾಗ ಮಾತನಾಡುತ್ತಾ, ಮಾತನಾಡುತ್ತಾ ಬೀಚಿಯವರು ಒಂದು ಊರಿನಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದ ಎಂದಾಗ ಹಾಗೆ ಹೇಳಬಾರದಪ್ಪ ಅದರ ಬದಲು ಬರೇ ಬ್ರಾಹ್ಮಣ ಎಂದರೆ ಸಾಕು ಆತ ಬಡವನೇ ಎಂದರ್ಥ ಎಂದರು. ಅದೇ ರೀತಿಯಲ್ಲಿ ಒಂದು ಊರಿನಲ್ಲಿ ಒಬ್ಬ ಸುಳ್ಳುಗಾರ ವಕೀಲನಿದ್ದ ಎಂದಾಗ ಆ ರೀತಿ ಅನ್ನಬಾರದಪ್ಪ ಬರೇ ವಕೀಲ ಎಂದರೆ ಸಾಕು ಆತ ಸುಳ್ಳುಗಾರ ಎಂದರ್ಥ. ಅದೇ ರೀತಿಯಲ್ಲಿ ಒಂದು ಊರಿನಲ್ಲಿ ಒಬ್ಬ ಕುಡುಕ ಪತ್ರಕರ್ತ ಇದ್ದ ಎಂದಾಗ, ಆ ರೀತಿ ಹೇಳಬಾರದು ಬರೇ ಪತ್ರಕರ್ತ ಎಂದರೆ ಸಾಕು ಮತ್ತೆ ನೀನು ಕುಡುಕ ಎಂಬುದನ್ನು ಹೇಳುವುದು ಬೇಕಾಗಿಲ್ಲ ಎಂದು ಅವರು ಹೇಳಿದರು. ಈಗಲಾದರೂ ನೀವು ಅರ್ಥಮಾಡಿಕೊಳ್ಳಿ, ಇದನ್ನು ಅವರು ಹೇಳಿದ್ದು, ಇದನ್ನು ನಾನು ಹೇಳಿದರೆ ಅದನ್ನೇ ಮೂಲವಾಗಿಟ್ಟುಕೊಂಡು 'ಪತ್ರಕರ್ತರೆಲ್ಲ ಕುಡುಕರು, ''ಜೆ.ಹೆಚ್.ಪಟೇಲ್'' ಎಂದು ತಲೆಬರಹದಲ್ಲಿ ಬರೆಯುತ್ತಾರೆ. ಈ ರೀತಿ ಬರೆದರೆ ಹೇಗೆ? ಇದರ ಬಗ್ಗೆ ಒಂದು ಸ್ಕೂಲ್ ಓಪನ್ ಮಾಡಿ ಪತ್ರಕರ್ತರಿಗೆ ಯಾವ ರೀತಿಯಲ್ಲಿ ಯಾವ್ಯಾವುದನ್ನು ಬರೆಯಬೇಕು ಎಂಬ ಬಗ್ಗೆ ಹೇಳಬೇಕು. ಬರೆಯಲಿ ನಾನೇನೂ ಬೇಡ ಎನ್ನುವುದಿಲ್ಲ, ವಾಸ್ತವಿಕವಾಗಿ ಬರೆಯಲಿ, ನಮ್ಮ ನೀತಿಯನ್ನು ಕ್ರಿಟಿಸೈಸ್ ಮಾಡಲಿ, ನಮ್ಮ ಪಕ್ಷದ ಬಗ್ಗೆ ಕ್ರಿಟಿಸೈಸ್ ಮಾಡಲಿ, ಆದರೆ ವಾಸ್ತವಿಕತೆ ಇರಬೇಕು.

ಅಧ್ಯಕ್ಷರು: ಇವೊತ್ತು ಕ್ಲಿಯರ್ ಆಯಿತು ಬಿಡಿ.

ಶ್ರೀ ಜೆ.ಹೆಚ್.ಪಟೇಲ್: ಅದೇ ತರಹ ಈ ವಾತಾವರಣವನ್ನು

ತಿಳಿಗೊಳಿಸುವುದಕ್ಕೋಸ್ಕರ ಈ ಅಧಿವೇಶನವನ್ನು ಕರೆದೆವು. ಆ ಅಧಿವೇಶನದ ಉದ್ದೇಶ ಸಫಲವಾಗಿದೆ. ಮುಂದೆ ಮುಖ್ಯ-ಮಂತ್ರಿ ಆಗಬೇಕಾದರೆ ನಿಮಗೆ ಇನ್ನೂ ಸ್ವಲ್ಪ ಸಹನೆ ಬೇಕು. ಅಂದರೆ ನಿಮ್ಮ ಪಾರ್ಟಿ ಬರಬೇಕು. ನೀವೇನಾಗುತ್ತೀರೋ ಗೊತ್ತಿಲ್ಲ. ಏಕೆಂದರೆ ನಿಮ್ಮ ಪಾರ್ಟಿಯಂತೂ ಬರುವುದಿಲ್ಲ.

4.50 ಪಿ.ಎಂ

ಇದು ಈಗಾಗಲೇ ದಾರಿ ಹಿಡಿದಿದೆ. ಆದ್ದರಿಂದ ನಮಗೆ ಹೆದರಿಸುವುದಕ್ಕೆ ಹೋಗಬೇಡಿ. ತಪ್ಪಿದ್ದರೆ ತಿದ್ದಿರಿ, ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಮುಗಿಸಿಬಿಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಒಂದೆರಡು ನಿಮಿಷಗಳಲ್ಲಿ ಹೇಳಿಬಿಡುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ: ರಿಪ್ಲೈ ಮಾಡಿದ ಮೇಲೆ ಕ್ಲಾರಿಫಿಕೇಷನ್‌ಗೆ ಅವಕಾಶವಿಲ್ಲ. This is a motion.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಕೇಳುತ್ತಿರುವುದು ಕ್ಲಾರಿಫಿಕೇಷನ್ ಅಲ್ಲ. ಅಧ್ಯಕ್ಷರೇ, ಯಾವ ಉದ್ದೇಶಕ್ಕಾಗಿ ಅವರು ಸದನವನ್ನು ಕರೆಸಿದರು?...

SRI M.C.NANAIAH: I would like to raise a point of order.

MR. SPEAKER: He is on a point of order.

ಶ್ರೀ ಎಂ.ಸಿ.ನಾಣಯ್ಯ: ಸಾರ್ ಈಗ ನಾವು ಸಬ್‌ಸ್ಟ್ಯಾಂಟಿಟೀವ್ ಮೋಷನ್ ತಂದಿದ್ದೇವೆ. ಸಬ್‌ಸ್ಟ್ಯಾಂಟಿಟೀವ್ ಮೋಷನ್ ತಂದ ಮೇಲೆ ಚರ್ಚೆ ಆಯಿತು. ಚರ್ಚೆ ಆದ ಮೇಲೆ ಮುಖ್ಯಮಂತ್ರಿಯವರು ಉತ್ತರ ಕೊಟ್ಟಾಯಿತು. ಉತ್ತರ ಕೊಟ್ಟಾದ ಮೇಲೆ ಸಬ್‌ಸ್ಟ್ಯಾಂಟಿಟೀವ್ ಮೋಷನ್ ಮೇಲೆ ಫರ್‌ದರ್ ಕ್ಲಾರಿಫಿಕೇಷನ್‌ಗೆ ಅವಕಾಶವಿಲ್ಲ. There can be no further discussion on that.

SRI M.MALLIKARJUNA KHARGE: I don't want any clarification.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ವಾಕ್‌ಔಟ್ ಮಾಡಬೇಕಾ? ವಾಕ್‌ಔಟ್ ಮಾಡುತ್ತೀರಾ?

ಏನಾದರೂ ಮಾಡಿಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುಖ್ಯಮಂತ್ರಿಗಳು ನಿಯಮ 159ರ ಅಡಿಯಲ್ಲಿ ಏನೊಂದು ರೆಸಲ್ಯೂಷನ್ ತಂದಿದ್ದಾರೆ, ಇದರ ಅವಶ್ಯಕತೆ ಇರಲಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದು ಕೇವಲ ಅವರ ವೈಯಕ್ತಿಕ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ತಂದಿದ್ದಾರೆ, ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ನಮ್ಮ ಪಕ್ಷದಲ್ಲಿ ಗೊಂದಲ ಇತ್ತು, ನಮ್ಮ ಪಕ್ಷದಲ್ಲಿ ಒಗ್ಗಟ್ಟಿಲ್ಲಾ ಎನ್ನುವಂಥ ಭಾವನೆ ಹೊರಗಡೆ ಬಂದಿತ್ತು, ಮತ್ತು ಆಡಳಿತದಲ್ಲಿಯೂ ಕೂಡ ಸಡಿಲಿಕೆ ಬಂದಿದೆ. ಅನೇಕ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ, ಶಾಸಕರು ಕೂಡ ರಾಜೀನಾಮೆ ಕೊಡುತ್ತಾ ಇದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾನು ಈ ಸದನವನ್ನು ಕರೆಸಿದ್ದೇನೆ ಎನ್ನುವ ಮಾತನ್ನು ಅವರು ಸ್ಪಷ್ಟವಾಗಿ ಹೇಳಿದ ಮೇಲೆ, ಈ ಸದನದ ದುರುಪಯೋಗ ಮಾಡಿಕೊಂಡಿದ್ದಾರೋ ಇಲ್ಲವೋ ಎನ್ನತಕ್ಕಂಥದ್ದು ತಾವೇ ಅರ್ಥಮಾಡಿಕೊಳ್ಳಿ. ಈ ಒಂದು ವೇದಿಕೆಯನ್ನು (ಫೋರಮ್‌ನ್ನು) ದುರುಪಯೋಗ ಮಾಡಿಕೊಂಡು ಶಾಸನ ಸಭೆಯನ್ನು ಕರೆಸಿ ಶಾಸಕರ ಮೇಲೆ ಒತ್ತಡ ತಂದು, ಮಂತ್ರಿಗಳ ಮೇಲೆ ಒತ್ತಡ ತಂದು ಯಾರು ಅವರ ಪಕ್ಷವನ್ನು ಬಿಟ್ಟು ಹೋಗತಕ್ಕಂಥ ಜನ ಇದ್ದರು ಮತ್ತು 10- 15 ದಿವಸಗಳಲ್ಲಿ ಅವರ ಸರ್ಕಾರವೇನು ಕುಸಿದು ಬೀಳುತ್ತಿತ್ತು ಅದನ್ನು ತಡೆಗಟ್ಟುವುದಕ್ಕೋಸ್ಕರ ಇವತ್ತಿನ ದಿವಸ ಈ ಒಂದು ನಿರ್ಣಯ ತಂದಿದ್ದಾರೆ ಎನ್ನುವಂಥ ಮಾತು ಸ್ಪಷ್ಟ. ನಾನೇ ಅಲ್ಲ, ದೇಶಪಾಂಡೆಯವರೂ ಸದನವನ್ನು ಕರೆಯತಕ್ಕಂಥ ಅವಶಕ್ಯತೆ ಏನು ಇತ್ತು ಎಂದು ಹೇಳಿದ್ದಾರೆ. ಇದು ಬೇಕಾಗಿರಲಿಲ್ಲ. ಈ ಹಿಂದೆ ಅನೇಕ ಸಾರಿ ಇಂಥಹದ್ದೇ ಘಟನೆಗಳು ನಡೆದಿದ್ದರೂ ಸಹ ಅಧಿವೇಶನ ಕರೆದಿಲ್ಲ. ಇವತ್ತು ಏಕೆ ಈ ಪರಿಸ್ಥಿತಿ ಬಂತು ಎಂದರೆ, ಹೆದರಿಕೊಂಡು ಇವತ್ತಿನ ದಿವಸ ಇದನ್ನು ಕರೆದಿದ್ದಾರೆ, ಇದು ಸ್ಪಷ್ಟ. ಬಹಳ ಧೈರ್ಯ ಇದೆ ಎಂದು ಹೇಳುತ್ತಿದ್ದಾರೆ, ಇದು ಶುದ್ಧ ಸತ್ಯಕ್ಕೆ ದೂರವಾದುದು. ಇವರಿಗೆ ಧೈರ್ಯನೂ ಇಲ್ಲ, ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಬೇಕು ಮತ್ತು ಈ ಚುನಾವಣೆಯಲ್ಲಿ ಪ್ರಭಾವ ಬೀರಬೇಕು, ಸರ್ಕಾರ ಜೀವಂತವಾಗಿದೆ ಎಂದು ತೋರಿಸಬೇಕು ಮತ್ತು ಈ ಒಂದು ಚನಾವಣೆಯಲ್ಲಿ ಅನೇಕ ಕಾಂಟ್ರಾಕ್ಟರ್‌ಗಳಿಗೂ ನಮ್ಮ ಸರ್ಕಾರ ಜೀವಂತವಾಗಿದೆ ಎಂದು ★ ಉದ್ದೇಶದಿಂದ ಅಧಿವೇಶನ ಕರೆದಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ: ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಇದೇನಿದು?

(ಗೊಂದಲ)

MR. SPEAKER: That will not go on record.

★ ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಇದಕ್ಕೆ ಭಾಗಿಗಳಾಗುವುದಿಲ್ಲ, ಇಂಥ ವೋಟಿಂಗ್‌ನಲ್ಲಿ ಕೂಡ ಭಾಗವಹಿಸಲು ತಯಾರಿಲ್ಲ. ಈಗ ಕರೆಸಿದಂತಹ ಸಭೆ * ಎನ್ನುವಂಥ ಮಾತನ್ನು ಹೇಳಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ಕಾಂಗ್ರೆಸ್ ಪಕ್ಷದ ಸದ್ಯಸರು ಸಭಾತ್ಯಾಗ ಮಾಡಿದರು)

MR. SPEAKER: Just a minute. I have to set the records straight... ಸನ್ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವ ವೇಳೆಗೆ ಕಡೆಯಲ್ಲಿ ಹೊಸ ಅಲಿಗೇಷನ್ ಮತ್ತೆ ಏನು ಮಾಡಿದ್ದಾರೆ. That will not find place in the records. I am appealing to the press also, because he was given an opportunity, he had his say and the government has replied. Again it is not open to the Hon'ble Leader of the Opposition to make fresh charges. It is not in good taste. The rule doesn't permit. So, I am giving this ruling. Nothing will find place in the records. I am once again appealing to the press also.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಜನತಾದಳದ ಶಾಸಕಾಂಗ ಪಕ್ಷದ ಸಭೆಯನ್ನು ಕರೆದು ಈ ಕಾರ್ಯಕಲಾಪಗಳನ್ನು ತಾವು ಮಾಡಿಕೊಂಡಿದ್ದರೆ ನಮ್ಮ ಅಭ್ಯಂತರವೇನು ಇರುತ್ತಿರಲಿಲ್ಲ. ಆದರೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಯಾರು ಬಿಟ್ಟು ಹೋಗುತ್ತಾರೋ, ಅವರನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಒಂದು ರೀತಿಯ ಚುನಾವಣಾ ಪ್ರಚಾರಕ್ಕೆ ಈ ಒಂದು ಸದನವನ್ನೇನು ದುರುಪಯೋಗ ಮಾಡಿಕೊಂಡಿದ್ದೀರಿ ಇದನ್ನು ನಾನು ಖಂಡನೆ ಮಾಡುತ್ತೇನೆ. ಇಲ್ಲಿರುವ ಬಹುತೇಕ ಜನರು ನಾಳೆ ನಾಡಿದ್ದರಲ್ಲಿ ನಿಮ್ಮ ಜೊತೆ ಇರುವುದಿಲ್ಲವೆಂಬುದು ನಿಮಗೂ ಗೊತ್ತಿದೆ. ಜನತೆಯು ಸಹ ನಿಮ್ಮ ಜೊತೆ ಇರುವುದಿಲ್ಲ. ವಿಧಾನಸಭೆಯನ್ನು ವಿಸರ್ಜನೆ ಮಾಡಬೇಕಾಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ನಿಮ್ಮ ಮನೆ ಸರಿಯಾಗಿಟ್ಟುಕೊಳ್ಳಿ, ನಿಮಗೆ ಇದೆಲ್ಲಾ ಏತಕ್ಕೆ? ಇನ್ನೊಬ್ಬರ ಬಗ್ಗೆ ನಿಮಗ್ಯಾಕೆ? ನಿಮ್ಮ ಮನೆಯನ್ನು ಸರಿಯಾಗಿಟ್ಟುಕೊಂಡು ಮಾಡಿ...

ಶ್ರೀ ಬಿ.ಎಸ್.ಯಡಿಯೂರಪ್ಪ: ನನ್ನ ದೃಷ್ಟಿಯಿಂದ ಹೇಳುವುದಾದರೆ ಜನತಾದಳ ಸರ್ಕಾರದ ಆಡಳಿತದ ಕೊನೆಯ ದಿವಸ. ಮುಂದಿನ ಅಧಿವೇಶನದಲ್ಲಿ ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದು ಅಧಿಕಾರ ನಡೆಸುತ್ತದೆ ಎಂದು ಹೇಳಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸಭಾತ್ಯಾಗ ಬೇಕಾಗಿರಲಿಲ್ಲ. ಮತದಾನ ನಡೆಯಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್: ಸಭಾತ್ಯಾಗ ಬೇಕಾಗಿರಲಿಲ್ಲ. ಮತದಾನ ಕೇಳಬೇಕಾಗಿತ್ತು. ಮತದಾನ ಕೇಳಿ, ಸರ್ಕಾರಕ್ಕೆ ಎಷ್ಟು ಮತ ಇದೆ ಎಂದು ತೀರ್ಮಾನವಾಗುವ ಬದಲು ಈ ಸಭಾತ್ಯಾಗ ಮಾಡುತ್ತಿರುವುದು ಒಳ್ಳೆಯ ನೀತಿಯೇನಲ್ಲ, ಒಳ್ಳೆಯ ಸಂಪ್ರದಾಯವೇನಲ್ಲ.

ಒಬ್ಬ ಸದಸ್ಯರು: ಇದು ಹಕ್ಕಿನ ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್: ಇದು ಹಕ್ಕಿನ ಪ್ರಶ್ನೆ ಅಲ್ಲ. ಹೇಡಿಗಳ ತರಹ ಹೋಗತಕ್ಕಂಥದ್ದು ಒಳ್ಳೆಯದಲ್ಲ. ಸದನದಲ್ಲಿಯೇ ಇರಬೇಕಾಗಿತ್ತು. ನೀವು ಒಟ್ಟಿನಲ್ಲಿ ಹೇಡಿಗಳ ತರಹ ಹೋಗತಕ್ಕಂಥವಲ್ಲ. ಅದನ್ನು ನಾವು ಒಪ್ಪುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್ಕಾರದ ವಿರುದ್ಧ ಮತ ಚಲಾಯಿಸಲಿಕ್ಕೆ ಧೈರ್ಯ ಇಲ್ಲದೆ ಆಚೆ ಹೋಗುತ್ತಾ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಸರ್ಕಾರದ ವಿರುದ್ಧ ಮತ ಚಲಾಯಿಸಬೇಕಾಗಿತ್ತು. ನೀವು ಏಕೆ ಹೊರಗಡೆ ಹೋಗುತ್ತಿದ್ದೀರಾ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇವರು ಮತ ಚಲಾಯಿಸಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಸರ್ಕಾರ ವಿಸರ್ಜನೆಗೆ ನಾವು ವಿರೋಧವಾಗಿದ್ದೇವೆ. ಸ್ಥಿರ ಸರ್ಕಾರಕ್ಕೆ ನಮ್ಮ ಬೆಂಬಲವಿದೆ. ಆದ್ದರಿಂದ ಅವರು ಮಾಡಿದಹಾಗೆ ನಾವು ಸಭಾತ್ಯಾಗ ಮಾಡುವ ಪ್ರಶ್ನೆ ಇಲ್ಲ.

ಶ್ರೀ ಸಿ.ಭೈರೇಗೌಡ: ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಹೇಳುತ್ತಾರೆ, ಏನು ಅಂದರೆ ದೇವರಿಗೆ ಪೂಜೆ ಮಾಡಿಸುತ್ತಾರೆ, ಪೂಜೆ ಮಾಡಿ ಮಂಗಳಾರತಿ ಆಗುತ್ತದೆ, ಮಂಗಳಾರತಿ ಆದ ಮೇಲೆ ಬಂಡಾರ ಕೇಳದೆ ಹೋದರು ಎಂದು ಹೇಳುತ್ತಾರೆ, ಹಾಗೆಯೇ ಇವರು ಎಲ್ಲಾ ಮಾಡಿ ಬಂಡಾರ ಕೇಳದೆ ಹೊರಗಡೆ ಹೋಗಿದ್ದಾರೆ.

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಈ ಸದನವು ಶ್ರೀ ಜೆ.ಹೆಚ್.ಪಟೇಲ್ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ'' ಎಂಬ ನಿರ್ಣಯವನ್ನು ಅಂಗೀಕರಿಸುವುದು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

ಸಭೆಯನ್ನು ವಿಭಜಿಸಲಾಯಿತು

ಅಧ್ಯಕ್ಷರು: ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಮತ ವಿಂಗಡಣೆ ಆಗಬೇಕೆಂದು ಒತ್ತಾಯಪಡಿಸಿದ ನಂತರ ಮತ ಎಣಿಕೆಯನ್ನು ನಡೆಸಿದ್ದೇನೆ. ವಿಭಜಿಸಿದಾಗ ಫಲಿತಾಂಶ ಹೀಗಿದೆ:

ಹೌದು - 135

ಇಲ್ಲ - 000

ಸೂಚನೆಯು ''ಹೌದು'' ಎನ್ನುವವರ ಪರವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ನಿರ್ಣಯಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಮಾನ್ಯ ಸದಸ್ಯರೆಲ್ಲರಿಗೂ ಕೂಡ ನೂತನ ವರ್ಷದ ಶುಭಾಶಯಗಳು. ಶುಭಾಶಯವನ್ನು ಬೆಳಿಗ್ಗೆ ಹೇಳಬೇಕಾಗಿತ್ತು. ಕೆಲವರು ಈಗಾಗಲೇ ಹೊರಟು ಹೋದರು. ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹಾಕಿದ್ದೇನೆ.

(ಸದನವು ಸಂಜೆ 5 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)